ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೦೧
ವಿಚಾರ ಸಾಹಿತ್ಯಮಾಲೆ – ೨೨
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

ಸಂಪಾದಕರು
**ಡಾ. ಎ. ವಿ. ನರಸಿಂಹಮೂರ್ತಿ**

# ಭಾರತದ ಅಮೂಲ್ಯ ಪರಂಪರೆ

## ಭವನದ ಗ್ರಂಥ ವಿಶ್ವವಿದ್ಯಾನಿಲಯ


ಮಾಲೆಯ
ಮೂಲ ಸಂಪಾದಕರು
**ಕೆ.ಎಂ. ಮುನ್ಷಿ**
**ಆರ್.ಆರ್. ದಿವಾಕರ್**

ವ್ಯವಸ್ಥಾಪಕ ಮಂಡಳಿ
**ಲೀಲಾವತಿ ಮುನ್ಷಿ** – ಅಧ್ಯಕ್ಷೆ
**ಕೆ.ಕೆ. ಬಿರ್ಲಾ** – ಸದಸ್ಯರು
**ಎಸ್.ಜಿ. ನೇವಾತಿಯ** – ಸದಸ್ಯರು
**ಜಿ.ಎಚ್. ದವೆ** – ಸದಸ್ಯರು
**ಎಸ್. ರಾಮಕೃಷ್ಣನ್** – ಸದಸ್ಯರು

**ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿ**

**ಎನ್. ರಾಮಾನುಜ** – ಅಧ್ಯಕ್ಷರು
(ಅಧ್ಯಕ್ಷರು, ವಿದ್ಯಾ ಭವನ, ಕರ್ನಾಟಕ)

**ಡಾ. ಮತ್ತೂರು ಕೃಷ್ಣಮೂರ್ತಿ**
(ಕಾರ್ಯಕಾರಿ ನಿರ್ದೇಶಕರು, ವಿದ್ಯಾ ಭವನ, ಬೆಂಗಳೂರು)
**ಎಚ್.ಎನ್. ಸುರೇಶ್**
(ನಿರ್ದೇಶಕರು, ಕಾರ್ಯಕ್ರಮ ಮತ್ತು ಯೋಜನೆಗಳು
ವಿದ್ಯಾ ಭವನ, ಬೆಂಗಳೂರು)
**ಡಾ. ಎ.ವಿ. ನರಸಿಂಹಮೂರ್ತಿ**
(ಅಧ್ಯಕ್ಷರು, ವಿದ್ಯಾ ಭವನ, ಮೈಸೂರು)




# ಭಾರತದ ಅಮೂಲ್ಯ ಪರಂಪರೆ

**ಆ ನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ**
**(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)**
**–ಋಗ್ವೇದ, I. ೮೯–೧**


ಮೂಲ
**ಎನ್. ಎ. ಪಾಲ್ಕೀವಾಲ**
ಅನುವಾದ
**ಪ್ರೊ॥ ಬಿ. ಎಸ್. ರುಕ್ಕಮ್ಮ**



**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ,** ಬೆಂಗಳೂರು
ಮತ್ತು
**ಭಾರತೀಯ ವಿದ್ಯಾ ಭವನ,** ಮೈಸೂರು

**Bharatada Amoolya Parampare :** Kannada translation of *India's Priceless Heritage* by **N.A. Palkivala ;** Kannada translation by **Prof. B.S. Rukkamma;** Editor-in-Chief : **Dr. Pradhan Gurudatta**; Editor of the series : **Dr. A.V. Narasimha Murthy;** published under the joint auspices of **Kuvempu Bhasha Bharati Pradhikara**, Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara : 2010; Pp. xxviii + 30 ; Price: Rs. 10/-

© ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

ಮುದ್ರಣ : ೨೦೧೦
ಪುಟಗಳು : xxviii + ೩೦
ಬೆಲೆ : ರೂ. ೧೦/–

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
**ಮೆ|| ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪



**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು – ೫೬೦ ೦೦೧
ದಿನಾಂಕ : ೫–೮–೨೦೦೯
ಸಿಎಂ/ಪಿಎಸ್/೧೪೭/೦೯

## ಮೊದಲ ಮಾತು

ಕನ್ನಡ ನಾಡಿನ ಹೆಮ್ಮೆಯ ಮಹಾಕವಿ ಶ್ರೀ ಕುವೆಂಪು ಅವರು ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿದ ಮಹಾಚೇತನ. ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸಂಸ್ಥಾಪಿಸಿರುವ **'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'** ರಾಷ್ಟ್ರೀಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಬೇಕೆಂಬುದು ಸರ್ಕಾರದ ಸದಾಶಯ. ಬೆಂಗಳೂರು **'ಜ್ಞಾನಭಾರತಿ'** ಆವರಣದಲ್ಲಿ ನಿರ್ಮಿಸಲಾಗಿರುವ ಬೃಹತ್ ಭವನದ ಸಮುಚ್ಚಯದಲ್ಲಿ ಶಿಕ್ಷಣ, ತರಬೇತಿ ಮತ್ತು ಪ್ರಕಟಣೆಗಳ ರೂಪದಲ್ಲಿ ಬಹು–ಆಯಾಮದ ಅದರ ಚಟುವಟಿಕೆಗಳು ಅರಳಿ ನಿಲ್ಲಲಿವೆ.

ಅದು ಆರಂಭಿಸಲಿರುವ ಭಾಷಾಂತರ ಮತ್ತು ತೌಲನಿಕ ಸಾಹಿತ್ಯ ಸಂಬಂಧವಾದ ವಿಶಿಷ್ಟ ಶಿಕ್ಷಣಗಳು ಆಡಳಿತ ಕ್ಷೇತ್ರ, ನ್ಯಾಯಾಂಗ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಪೂರಕವಾಗಿ, ಕನ್ನಡವನ್ನು ಸರ್ವತೋಮುಖವಾಗಿ ಬೆಳೆಸಲು ಸಹಾಯಕವಾಗಲಿವೆ.

ಭಾರತೀಯ ಭಾಷಾ–ಸಾಹಿತ್ಯಗಳ ಉತ್ತಮೋತ್ತಮ ಕೃತಿಗಳನ್ನು ಮಾತ್ರವಲ್ಲದೆ, ವಿಶ್ವಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳನ್ನು ಜಾಗತಿಕ ಸಾಹಿತ್ಯಕ್ಕೆ ಪರಿಚಯಿಸಿಕೊಡುವ ಕರ್ತವ್ಯದ ಜೊತೆಗೆ, ಜ್ಞಾನ–ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ತರ ಕಾರ್ಯವನ್ನೂ ಅದು ಹಮ್ಮಿಕೊಳ್ಳಬೇಕಾದ ಅಗತ್ಯವಿದೆ.

ನಾಡಿನ ಶ್ರೇಷ್ಠ ವಿದ್ವಾಂಸರ ಸಲಹೆ–ಸೂಚನೆ–ಮಾರ್ಗದರ್ಶನಗಳ ಬೆಳಕಿನಲ್ಲಿ ಅದರ ಕೆಲಸ ಕಾರ್ಯಗಳು ಆದರ್ಶಪ್ರಾಯವಾಗಿ ಮೂಡಿಬರಲಿ ಹಾಗೂ ಇದೊಂದು ವಿಶಿಷ್ಟ ಸಂಸ್ಥೆಯಾಗಿ ದೇಶ–ವಿದೇಶಗಳ ಗಮನವನ್ನೂ ಸೆಳೆಯುವಂತಾಗಲಿ ಎಂದು ಹಾರೈಸುತ್ತೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬೇಕೆಂಬ, ಇದರ ಪ್ರಕಟಣೆಗಳನ್ನು ಜನಸಮುದಾಯ ಆದರ–ವಿಶ್ವಾಸಗಳಿಂದ ಸ್ವೀಕರಿಸುವರೆಂಬ ಆಶಯ ನಮ್ಮದಾಗಿದೆ.

ಭಾರತೀಯ ವಿದ್ಯಾಭವನದಂಥ ರಾಷ್ಟ್ರೀಯ ಮಹತ್ವದ ಸಂಸ್ಥೆಯ ಸಹಯೋಗದೊಂದಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾಲಯ ಮಾಲೆಯ ಪುಸ್ತಕಗಳನ್ನು ಹೊರತರುವ ಯೋಜನೆಯನ್ನು ಹಾಕಿಕೊಂಡಿರುವುದು ಸಂತೋಷದ ಬೆಳವಣಿಗೆಯೇ ಆಗಿದೆ. ಈ ಮಾಲೆಯ ಪುಸ್ತಕಗಳು ಕುವೆಂಪು ಭಾಷಾ ಭಾರತಿ ಮತ್ತು ಭಾರತೀಯ ವಿದ್ಯಾಭವನದ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದೂ ಸಂತೋಷದ ಸಂಗತಿಯೇ ಆಗಿದೆ.

(ಬಿ.ಎಸ್.ಯಡಿಯೂರಪ್ಪ)

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ, ಸಣ್ಣ ನೀರಾವರಿ ಹಾಗೂ
ಜವಳಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

## ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿಸುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಮುಂದಿನ ದಿನಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

**ಗೋವಿಂದ ಎಂ. ಕಾರಜೋಳ**



ಕರ್ನಾಟಕ ಸರ್ಕಾರ

**ರಮೇಶ್ ಬಿ.ಝುಳಕಿ,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ವಿಕಾಸ ಸೌಧ
ಬೆಂಗಳೂರು – ೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ನಮ್ಮ ನಾಡಿನ ಜನಸಮುದಾಯದ ಗಮನವನ್ನು ಸೆಳೆಯುವ ದಿಕ್ಕಿನಲ್ಲಿ ಮುನ್ನಡೆಯುತ್ತಿರುವುದು ತುಂಬ ಸಂತೋಷದ ಸಂಗತಿಯೇ ಆಗಿದೆ. ಪ್ರಾಧಿಕಾರದ ಒಂದು ಭಾಗವೇ ಆಗಿ ಕಲ್ಪಿಸಿಕೊಳ್ಳಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಹೊರತರಲಾಗಿದ್ದ ಸುಮಾರು ೬೦ ಗ್ರಂಥಗಳ ಜೊತೆಗೆ, ಪ್ರಾಧಿಕಾರ ಮತ್ತಷ್ಟು ಮಹತ್ವಪೂರ್ಣ ಗ್ರಂಥಗಳನ್ನು ಹೊರತರುತ್ತಿದ್ದು, ಸದ್ಯದಲ್ಲಿಯೇ ಈ ಸಂಖ್ಯೆ ನೂರರ ಗಡಿಯನ್ನು ದಾಟಲಿದೆ. 'ಭಾರತೀಯ ವಿದ್ಯಾಭವನ'ದಂಥ ರಾಷ್ಟ್ರೀಯ ಸಂಸ್ಥೆಯೊಂದಿಗೆ ಸಂಯುಕ್ತ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಪ್ರಾಧಿಕಾರ ಮುನ್ನಡೆಯಲಿರುವುದು ಪ್ರಾಧಿಕಾರದ ಚಟುವಟಿಕೆಗಳಿಗೆ ಹೊಸ ಆಯಾಮವನ್ನೇ ನೀಡಲಿದೆ ಎಂದು ನಂಬಿದ್ದೇನೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ೧೪ ಸಂಪುಟಗಳ ಕನ್ನಡ ಅನುವಾದದ ಪರಿಷ್ಕರಣ, ೧೫ ರಿಂದ ಮುಂದಿನ ಸಂಪುಟಗಳ ಅನುವಾದ ಕಾರ್ಯ, ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡ ಅನುವಾದದ ಪ್ರಕಟಣೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರ ಸಂಚಯಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳ ಪ್ರಕಟಣೆ – ಇವೇ ಮೊದಲಾದ ಮಹತ್ವದ ಕಾರ್ಯಕ್ರಮಗಳನ್ನು ಈ ಪ್ರಾಧಿಕಾರ ಹಮ್ಮಿಕೊಂಡಿರುವುದು ಸ್ತುತ್ಯರ್ಹವಾದ ಸಂಗತಿಯೇ ಆಗಿದೆ. 'ಕಾವೇರಿ ನ್ಯಾಯಾಧಿಕರಣ'ದ ತೀರ್ಪಿನ ಕನ್ನಡ ಆವೃತ್ತಿಯೂ ಸದ್ಯದಲ್ಲಿಯೇ ಹೊರಬರಲಿದೆ. ವೈಜ್ಞಾನಿಕ, ತಾಂತ್ರಿಕ ಮತ್ತು ವೈದ್ಯಕೀಯ ಸಾಹಿತ್ಯ ಪ್ರಕಟಣೆಯತ್ತಲೂ ಪ್ರಾಧಿಕಾರ ಗಮನಹರಿಸಿದೆ. ಪ್ರಾಧಿಕಾರದ ಮುನ್ನಡೆಗೆ ಕರ್ನಾಟಕ ಸರ್ಕಾರದ ಎಲ್ಲ ಬಗೆಯ ನೆರವೂ ಲಭಿಸಲಿದೆ.

ಈ ಎಲ್ಲ ಚಟುವಟಿಕೆಗಳು ಕನ್ನಡಿಗರ ಆದರ, ಮೆಚ್ಚಿಕೆ, ಸಂತೋಷಗಳಿಗೆ ಪಾತ್ರವಾಗುತ್ತದೆಂದು ನಂಬಿದ್ದೇನೆ.

(ರಮೇಶ್ ಬಿ.ಝುಳಕಿ)

ಕರ್ನಾಟಕ ಸರ್ಕಾರ

**ಮನು ಬಳಿಗಾರ್**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ದಿನಾಂಕ : ೦೭.೦೮.೨೦೦೯

# ಪ್ರಾಸ್ತಾವಿಕ ನುಡಿ

ಕುವೆಂಪು ಭಾಷಾ ಭಾರತಿ ಅಂಗವಾಗಿ ಕರ್ನಾಟಕ ಸರ್ಕಾರ ೨೦೦೫ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕೇವಲ ಮೂರು ವರ್ಷಗಳಲ್ಲಿ ಮಾಡಿರುವ ವೈವಿಧ್ಯಮಯವಾದ ಕಾರ್ಯವನ್ನು ನಾನು ಗಮನಿಸಿದ್ದೇನೆ. ಕುವೆಂಪು ಭಾಷಾ ಭಾರತಿಯ ಕಟ್ಟಡ ಸಮುಚ್ಚಯದ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಅದರ ಉದ್ಘಾಟನ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ. ವೈವಿಧ್ಯಮಯವಾದ ಮತ್ತು ವ್ಯಾಪಕವಾದ ಕಾರ್ಯಯೋಜನೆಗಳನ್ನು, ಧ್ಯೇಯೋದ್ದೇಶಗಳನ್ನು ಹೊಂದಿರುವ ಕುವೆಂಪು ಭಾಷಾ ಭಾರತಿ ಕುವೆಂಪು ಅವರ ಹೆಸರಿನಲ್ಲಿಯೇ ಸ್ಥಾಪಿತವಾಗಿದ್ದರೂ ಕುವೆಂಪು ಸಾಹಿತ್ಯದ ಪ್ರಚಾರ ಪ್ರಸಾರಗಳಿಗೆ ಮಾತ್ರವೇ ಸೀಮಿತವಾಗಿರುವುದಿಲ್ಲ. ಕುವೆಂಪು ಮಾಡಿರುವ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿ ಈ ಸಂಸ್ಥೆಗೆ ಆ ಹೆಸರನ್ನು ಕೊಡಲಾಗಿದೆ. ಕನ್ನಡ ಭಾಷಾ ಸಾಹಿತ್ಯಗಳ ಹಿರಿಯ ಸಾಧನೆಯನ್ನು ಕನ್ನಡೇತರರಿಗೆ, ದೇಶ–ವಿದೇಶಗಳ ಸಾಹಿತ್ಯಿಕ ಸಾಧನೆಯನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವುದಲ್ಲದೆ, ಸಾಹಿತ್ಯ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗೆ ಕನ್ನಡವನ್ನು ಅಣಿಗೊಳಿಸುವ ಧ್ಯೇಯವನ್ನೂ ಇದು ಇರಿಸಿಕೊಂಡಿದೆ. ಹೀಗೆ ಇದು ಸರ್ವಭಾಷೆಗಳ ಸಾಮರಸ್ಯದ ಪ್ರತೀಕವಾದ ಸಾಹಿತ್ಯಿಕ ಸಂಸ್ಥೆಯಾಗಿ ಕೆಲಸ ಮಾಡಲಿದೆ. ಭಾಷಾಂತರ ಶಿಕ್ಷಣ, ವಿದೇಶ ಭಾಷೆಗಳ ಶಿಕ್ಷಣ, ತೌಲನಿಕ ಸಾಹಿತ್ಯಾಧ್ಯಯನ, ತರಬೇತಿ ಕಾರ್ಯಕ್ರಮಗಳು, ಪ್ರಕಟಣೆಗಳು – ಹೀಗೆ ಬಹುಮುಖವಾದ ಕಾರ್ಯಚಟುವಟಿಕೆಗಳಿಂದ ಕುವೆಂಪು ಭಾಷಾ ಭಾರತಿ ನಾಡಿನ ಹೆಮ್ಮೆಯ ಸಂಸ್ಥೆಯಾಗಿ ಬೆಳೆದು ಬರಬೇಕೆಂಬ ಆಶಯವನ್ನು ಇರಿಸಿಕೊಳ್ಳಲಾಗಿದೆ. ಕುವೆಂಪು ಭಾಷಾ ಭಾರತಿಯ ಅಂಗವಾಗಿ ಈ ಹಿಂದೆ ಸ್ಥಾಪಿತವಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕುವೆಂಪು ಭಾಷಾ ಭಾರತಿಯಲ್ಲಿ ಈಗ ವಿಲೀನಗೊಂಡಿದ್ದು, ಹೆಚ್ಚಿನ ವೈವಿಧ್ಯ ಮತ್ತು ವ್ಯಾಪ್ತಿಯ ಕಾರ್ಯಕ್ರಮಗಳಲ್ಲಿ ಅದು ತನ್ನನ್ನು ತೊಡಗಿಸಿಕೊಳ್ಳಲಿದೆ. ಈ ಅಕಾಡೆಮಿಯ ಮೂರು ವರ್ಷಗಳ ಅಲ್ಪಾವಧಿಯಲ್ಲಿ ಅಭಿನಂದನೀಯವಾದ ಕಾರ್ಯವನ್ನು ಮಾಡಿದ ಹಿರಿಯ ಬಹುಭಾಷಾ ವಿದ್ವಾಂಸರಾದ ಡಾ. ಪ್ರಧಾನ್ ಗುರುದತ್ತ ಅವರನ್ನು ಕುವೆಂಪು ಭಾಷಾ ಭಾರತಿಯ ಪ್ರಥಮಾಧ್ಯಕ್ಷರಾಗಿ ಕರ್ನಾಟಕ ಸರ್ಕಾರ ನೇಮಕ ಮಾಡಿದ್ದು,



ಅವರು ಈ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸಂಕಲ್ಪಬದ್ಧರಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ.

ಕುವೆಂಪು ಭಾಷಾ ಭಾರತಿ ತನ್ನ ವಿಶಿಷ್ಟ ಕಾರ್ಯಚಟುವಟಿಕೆಗಳಿಂದ ಕನ್ನಡಿಗರ ಮೆಚ್ಚಿನ ಸಾಹಿತ್ಯಿಕ – ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. ಸಂಸ್ಥೆಯ ಉದ್ಘಾಟನೆಯ ಹೊತ್ತಿಗೆ ಅದರ ಅನೇಕ ಪ್ರಕಟಣೆಗಳು ಹೊರತರುತ್ತಿರುವುದು ಅದರ ಕಾರ್ಯಚಟುವಟಿಕೆಗಳ ಪ್ರತೀಕವಾಗಿದೆ. ಈ ಸಂಸ್ಥೆ ಇತೋಪ್ಯತಿಶಯವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಭಾರತೀಯ ಸಂಸ್ಕೃತಿ, ಇತಿಹಾಸ ಸಾಹಿತ್ಯಕ ಕ್ಷೇತ್ರಗಳಿಗೆ ತನ್ನ ಪ್ರಕಟಣೆಗಳ ಮೂಲಕ ಹಾಗೂ ಶೈಕ್ಷಣಿಕ ಕಾರ್ಯಗಳ ಮುಖೇನ ಸ್ಮರಣೀಯ ಸೇವೆಯನ್ನು ಸಲ್ಲಿಸುವ ಮೂಲಕ ಭಾರತೀಯ ವಿದ್ಯಾಭವನ ನಾಡಿನ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿ ಪರಿಣಮಿಸಿದೆ. 'ಹಿಸ್ಟರಿ ಅಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್' ಮಾಲೆಯ ಸಂಪುಟಗಳ ಮೂಲಕ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳ ನೈಜ ಚಿತ್ರಣವನ್ನು ಮುಂದಿರಿಸಿದ ಹಿರಿಮೆಯೂ ಅದರದಾಗಿದೆ. ಜನಸಾಮಾನ್ಯರನ್ನು ದೃಷ್ಟಿಯಲ್ಲಿರಿಸಿಕೊಂಡು ರಚಿಸಲಾದ ಅದರ 'ಬುಕ್ ಯೂನಿವರ್ಸಿಟಿ' ಮಾಲೆಯ ಪುಸ್ತಕಗಳ ಕನ್ನಡ ಆವೃತ್ತಿ ಭಾರತೀಯ ವಿದ್ಯಾಭವನ ಮತ್ತು ಕುವೆಂಪು ಭಾಷಾ ಭಾರತಿಯ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷ ಸಮಾಧಾನಗಳನ್ನು ತಂದಿದೆ. ಈ ಪುಸ್ತಕಗಳನ್ನು ಕನ್ನಡ ಜನತೆ ಎಂದಿನಂತೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

(ಮನು ಬಳಿಗಾರ್)

## ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯುವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು. ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ.ದೇ.ಜವರೇಗೌಡ ಅವರು, 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನಭಾರತಿ ಆವರಣದಲ್ಲಿ ಎರಡು ಎಕರೆಗಳಷ್ಟು
ವಿಶಾಲವಾದ ಸ್ಥಳದಲ್ಲಿ 'ಕುವೆಂಪು ಭಾಷಾ ಭಾರತಿ'ಯ ಕಟ್ಟಡದ ಶಿಲಾನ್ಯಾಸ



ಕಾರ್ಯಕ್ರಮವು ದಿನಾಂಕ:೧೧.೦೯.೨೦೦೫ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎನ್.ಧರ್ಮಸಿಂಗ್ ಅವರಿಂದ ನೆರವೇರಿತು. 'ವಿಶ್ವಚೇತನ' ಮತ್ತು 'ಕಾಜಾಣ' ಎಂದು ಹೆಸರಿಸಲಾಗಿರುವ ಎರಡು ಬೃಹತ್ ಕಟ್ಟಡಗಳ ಸಮುಚ್ಚವನ್ನು ಒಳಗೊಂಡಿರುವ ಕುವೆಂಪು ಭಾಷಾ ಭಾರತಿಯ ಕಟ್ಟಡದ ನಿರ್ಮಾಣಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ೨೦೦೯ರಲ್ಲಿ ಇದರ ಕಾಮಗಾರಿ ಪೂರ್ಣಗೊಂಡಿದೆ. ಇದೇ ದಿನಾಂಕ:೧೯.೦೮.೨೦೦೯ರ ಬೆಳಗ್ಗೆ ೧೧.೦೦ ಗಂಟೆಗೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ಅವರು ಈ ಕಟ್ಟಡ–ಸಮುಚ್ಚಯದ ಉದ್ಘಾಟನ ಸಮಾರಂಭವನ್ನು ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆಗಳ ಮೊದಲ ಕಂತಿನ ಹತ್ತು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಸ್ವರೂಪ ಮೂರು ಮುಖದ್ದಾಗಿರುತ್ತದೆ :

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು
(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು
(ಇ) ಪ್ರಕಟಣೆಗಳು

### (ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು :

(i) "ಕನ್ನಡ ಸಾಹಿತ್ಯ ಹಿರಿಮೆ–ಗರಿಮೆಗಳಲ್ಲಿ ಯಾವ ಭಾರತೀಯ ಸಾಹಿತ್ಯಕ್ಕೂ ಕಡಿಮೆಯಾಗಿಲ್ಲ. ಅದರ ಮಹತ್ವವನ್ನು ಎತ್ತಿತೋರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಅಷ್ಟೇ" ಎಂಬುದಾಗಿ ಕುವೆಂಪು ಅವರು ಉದ್ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ಅಂಗವಾಗಿ ಅನುವಾದ, ತೌಲನಿಕ ಸಾಹಿತ್ಯ, ವಿದೇಶಿ ಭಾಷೆಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಶಿಕ್ಷಣ ಕ್ರಮಗಳನ್ನು ಆರಂಭಿಸಬೇಕೆಂದು ಯೋಜಿಸಲಾಗಿದೆ :

(೧) ಭಾಷಾಂತರ ಡಿಪ್ಲೊಮಾ ಶಿಕ್ಷಣ – ಮೊದಲ ಹಂತದಲ್ಲಿ ಇಂಗ್ಲಿಷ್, ಹಿಂದೀ, ಕನ್ನಡ, ತೆಲುಗು, ತಮಿಳು, ಮಲಯಾಳಂ, ಬಂಗಾಳಿ, ಮರಾಠಿ ಭಾಷೆಗಳಲ್ಲಿ ವಿಶೇಷ ತರಬೇತಿಗೆ ಒತ್ತುಕೊಟ್ಟು ಈ ಶಿಕ್ಷಣವನ್ನು ಪ್ರಾರಂಭಿಸಲಾಗುತ್ತದೆ.
(೨) ಭಾಷಾಂತರದಲ್ಲಿ ಎಂ.ಫಿಲ್ ಶಿಕ್ಷಣ : ವಿಶೇಷ ವಿಷಯಕ್ಕೆ ಒತ್ತುಕೊಟ್ಟು
(೩) ಪತ್ರಿಕೋದ್ಯಮ ಮತ್ತು ಭಾಷಾಂತರ
(೪) ಕಾನೂನುಶಾಸ್ತ್ರ, ಆಡಳಿತ ಭಾಷೆ ಮತ್ತು ಭಾಷಾಂತರ
(೫) ವಿಜ್ಞಾನ ಮತ್ತು ಮಾನವಿಕಶಾಸ್ತ್ರ ಕೃತಿಗಳು ಮತ್ತು ಭಾಷಾಂತರ ; ಮತ್ತು
(೬) ತೌಲನಿಕ ಸಾಹಿತ್ಯ
(೭) ವಿದೇಶೀ ಭಾಷೆಗಳ ಶಿಕ್ಷಣ (ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ)

(ii) ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಮಟ್ಟದಲ್ಲಿ ಪ್ರಚುರಪಡಿಸಬೇಕಾದರೆ – ಜಾಗತಿಕ ಪ್ರಾಚುರ್ಯದ ವಿದೇಶಿ ಭಾಷೆಗಳಿಗೆ ಕನ್ನಡದ ಶ್ರೇಷ್ಠ ಕೃತಿಗಳನ್ನು

ಕೊಂಡೊಯ್ಯುವ ಮಹತ್ವದ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ಮೊದಲ ಹಂತದಲ್ಲಿ ಸ್ಪ್ಯಾನಿಷ್, ಜಪಾನಿ, ಫ್ರೆಂಚ್, ರಷ್ಯನ್, ಜರ್ಮನ್, ಚೀಣೀ, ಆಫ್ರಿಕನ್ ಭಾಷೆಗಳು – ಈ ಎಲ್ಲ ಶಿಕ್ಷಣಗಳಿಗೆ ಸಂಬಂಧಿಸಿದಂತೆ, ತಜ್ಞರೊಂದಿಗೆ ಸಮಾಲೋಚಿಸಿ ಕಾರ್ಯಕ್ರಮಗಳನ್ನು ರೂಪಿಸುವುದು, ಶಿಕ್ಷಣಕ್ಕೆ ಮತ್ತು ತರಬೇತಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಮೊದಲಾದ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತದೆ. ವಿದೇಶಿ ದೂತಾವಾಸಗಳ ನೆರವಿನೊಂದಿಗೆ ಈ ಶಿಕ್ಷಣ ಕ್ರಮಗಳನ್ನು ಯೋಜಿಸಲಾಗುತ್ತದೆ.

ವಿವಿಧ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿರುವಂಥ ತರುಣ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ತರಬೇತಿ ನೀಡಿ ಪ್ರಕಟಣಾವಕಾಶಗಳನ್ನು ಕಲ್ಪಿಸಿಕೊಡಲು ಅನುಕೂಲವಾಗುವಂತೆ ವಿಚಾರಗೋಷ್ಠಿಗಳು, ವಿಚಾರಸಂಕಿರಣಗಳು, ಕಾರ್ಯಶಿಬಿರಗಳು ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕುವೆಂಪು ಅವರು ಸಾಹಿತ್ಯ ಮತ್ತು ವಿಜ್ಞಾನ–ತಂತ್ರಜ್ಞಾನಗಳನ್ನು ಮಾನವ ಸಂಸ್ಕೃತಿಯ ಕಣ್ಣುಗಳೆಂದೇ ಭಾವಿಸಿದ್ದವರು. ಹೀಗಾಗಿ, ಜ್ಞಾನದ ಇತರ ಕ್ಷೇತ್ರಗಳತ್ತಲೂ ಕುವೆಂಪು ಭಾಷಾಭಾರತಿ ಕೈಚಾಚಲಿದೆ. ಈ ದೃಷ್ಟಿಯಲ್ಲಿ ಕನ್ನಡವನ್ನು ಸರ್ವಾಂಗ ಸಮೃದ್ಧವಾಗಿ ಬೆಳೆಸುವ ಅವರ ಆಶಯ ಕಾರ್ಯರೂಪಕ್ಕೆ ಬರಬಹುದಾಗಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಅನುವಾದ ಮಿಶನ್ ಯೋಜನೆ ಕಾರ್ಯರೂಪಕ್ಕೆ ಬರಲಿರುವ ಹಿನ್ನೆಲೆಯಲ್ಲಿ, ಇಂಥ ಶಿಕ್ಷಣಗಳನ್ನು ಪ್ರಾರಂಭಿಸುವುದಕ್ಕೆ ಹೆಚ್ಚಿನ ಅರ್ಥ ಮತ್ತು ಔಚಿತ್ಯ ದೊರೆಯುವಂತಾಗುತ್ತದೆ.

**(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು :**

ಕೇಂದ್ರ ಸಾಹಿತ್ಯ ಅಕಾಡೆಮಿ ರವೀಂದ್ರನಾಥ ಠಾಗೂರ್ ಅವರ ಪ್ರಾತಿನಿಧಿಕ ಸಂಕಲನಗಳನ್ನೊಳಗೊಂಡ 'ರವೀಂದ್ರ ಸಂಚಯ'ವನ್ನು ಹೊರತಂದಿರುವ ರೀತಿಯಲ್ಲಿಯೇ 'ಕುವೆಂಪು ಸಂಚಯ' ಮತ್ತು 'ಪು.ತಿ.ನ ಸಂಚಯ'ಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಹೊರತರಲಾಗುತ್ತದೆ. ಮುಂಬರುವ ದಿನಗಳಲ್ಲಿ ಜಿ.ಎಸ್.ಶಿವರುದ್ರಪ್ಪ ಮೊದಲಾದ ಕನ್ನಡದ ಮಹತ್ವದ ಕವಿಗಳ ಸಂಕಲನಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ತರುವ ಯೋಜನೆಗಳನ್ನು ಹಾಕಿಕೊಳ್ಳಲಾಗುತ್ತದೆ. ಇದೇ ರೀತಿಯಲ್ಲಿ ಭಾರತೀಯ ಜ್ಞಾನಪೀಠ ಮತ್ತು ಇತರ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಗಳಿಸಿರುವ ಶ್ರೇಷ್ಠ ಸಾಹಿತಿಗಳ ಪ್ರಾತಿನಿಧಿಕ ರಚನೆಗಳನ್ನು ಒಳಗೊಂಡ ಸಂಚಯ ಕೃತಿಗಳನ್ನು ಹೊರತರಲೂ ಕ್ರಮಕೈಗೊಳ್ಳಲಾಗುತ್ತದೆ. ಉದಾ: ಮೈಥಿಲಿ ಶರಣಗುಪ್ತ ಸಂಚಯ, ಜಯಶಂಕರ ಪ್ರಸಾದ್ ಸಂಚಯ (ಹಿಂದೀ), ವಿಶ್ವನಾಥ ಸಂಚಯ (ತೆಲುಗು), ಆಶಾಪೂರ್ಣದೇವಿ ಸಂಚಯ (ಬಂಗಾಳಿ), ಶಿವಶಂಕರ ಪಿಳ್ಳೈ ಮತ್ತು ಎಂ.ಟಿ.ವಾಸುದೇವ ನಾಯರ್ ಸಂಚಯ (ಮಲಯಾಳಂ) ಇತ್ಯಾದಿ.

ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮತ್ತು ಜಾಗತಿಕ ಸ್ತರಗಳಲ್ಲಿ ಪ್ರಚುರಪಡಿಸಲು ವಿಚಾರಗೋಷ್ಠಿಗಳನ್ನು ಸಮಾರಂಭಗಳನ್ನು ಏರ್ಪಡಿಸುವಂತೆಯೇ, ಇತರ ಭಾರತೀಯ ಭಾಷಾಸಾಹಿತ್ಯ ಮತ್ತು ವಿಶ್ವಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಇದೇ ಬಗೆಯ ಅರ್ಥಪೂರ್ಣ ಕಾರ್ಯಕ್ರಮಗಳನ್ನೂ ರೂಪಿಸಲಾಗುತ್ತದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಧ್ಯೇಯೋದ್ದೇಶಗಳಿಗೆ



ಪೂರಕವೂ–ಪ್ರೇರಕವೂ ಆಗುವಂತೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅಂತೆಯೇ, ರಾಷ್ಟ್ರಮಟ್ಟದ ಸಾಹಿತ್ಯಿಕ ಸಂಘ–ಸಂಸ್ಥೆಗಳಾಗಿರುವ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಬಿರ್ಲಾ ಪ್ರತಿಷ್ಠಾನ ಮೊದಲಾದವುಗಳಲ್ಲಿನ ಕಾರ್ಯಕ್ರಮಗಳ ಪುನರಾವರ್ತನೆಯಾಗದಂತೆ ವಿಶಿಷ್ಟ ರೀತಿಯಲ್ಲಿ ಕುವೆಂಪು ಭಾಷಾಭಾರತಿ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತದೆ.

ರಾಷ್ಟ್ರೀಯ ಪ್ರಶಸ್ತಿ : ರಾಷ್ಟ್ರಮಟ್ಟದಲ್ಲಿ ಕುವೆಂಪು ಅವರ ಹೆಸರಿನಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿಯೊಂದನ್ನು ಸ್ಥಾಪಿಸಿ, ನಾಡಿನ ಶ್ರೇಷ್ಠ ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸಲು ಹಾಗೂ ಅಂತಹವರ ಪ್ರಮುಖ ಕೃತಿಗಳನ್ನು ಕನ್ನಡದಲ್ಲಿ ಹೊರತರಲು ಯೋಜನೆಗಳನ್ನು ರೂಪಿಸಲಾಗುತ್ತದೆ.

ತರುಣ ಪ್ರತಿಭೆಗಳಿಗೆ ಪ್ರೋತ್ಸಾಹ : ತರುಣ ಪ್ರತಿಭೆಗಳನ್ನು ಗುರುತಿಸಿ, ವಿವಿಧ ಭಾರತೀಯ ಭಾಷೆಗಳಲ್ಲಿ ವಿಶೇಷ ತರಬೇತಿ ಲಭ್ಯವಾಗುವಂತೆ ಮಾಡಿ, ಮುಂದೆ ಸಾಹಿತ್ಯಿಕ ಕೊಳು–ಕೊಡೆ ಕಾರ್ಯದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ವಿವಿಧ ರಾಜ್ಯಸರ್ಕಾರಗಳ ನೆರವಿನೊಂದಿಗೆ ಶಿಷ್ಯವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕೆಂದು ಯೋಜಿಸಲಾಗಿದೆ.

**(ಇ) ಪ್ರಕಟಣೆಗಳು :**

'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಸ್ಥಾಪಿಸಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕಳೆದ ವರ್ಷವಷ್ಟೇ ೫೬ ಪುಸ್ತಕಗಳನ್ನು ಹೊರತಂದಿದ್ದು, ಕಳೆದ ೮ ತಿಂಗಳ ಅವಧಿಯಲ್ಲಿ ಸುಮಾರು ೧೦.೦೦ ಲಕ್ಷ ರೂಗಳನ್ನು ಮಾರಾಟದ ಮೂಲಕವೇ ಗಳಿಸಿಕೊಂಡಿದೆ. ಮುಂದೆ ಹಮ್ಮಿಕೊಳ್ಳಲಿರುವ ಹಾಗೂ ಮುನ್ನಡೆಯುತ್ತಿರುವ ಮಹತ್ವದ ಯೋಜನೆಗಳಲ್ಲಿ ಜೆ.ಡಿ.ಬರ್ನಾಲ್ ಅವರ 'ಸೈನ್ಸ್ ಇನ್ ಹಿಸ್ಟರಿ' ಗ್ರಂಥದ ನಾಲ್ಕು ಸಂಪುಟಗಳು, ವಿಲ್ ಡ್ಯೂರಾಂಟ್ ಅವರ 'ಸ್ಟೋರಿ ಆಫ್ ಸಿವಿಲಿಜೇಷನ್'ನ ಎಂಟು ಸಂಪುಟಗಳು (೪ರಿಂದ ೧೧), ವಿಜ್ಞಾನ–ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸುಮಾರು ೧೦೦ ಗ್ರಂಥಗಳು, ಸೋಮದೇವನ 'ಕಥಾಸರಿತ್ಸಾಗರ'ದ ಐದು ಸಂಪುಟಗಳು (೬ರಿಂದ ೧೦) – ಇವನ್ನು ಮುಖ್ಯವಾಗಿ ಹೆಸರಿಸಬಹುದಾಗಿದೆ. 'ಭಾರತೀಯ ವಿಜ್ಞಾನ ಸಂಸ್ಥೆ'ಯಂಥ ಅಂತರರಾಷ್ಟ್ರೀಯ ಖ್ಯಾತಿಯ ಸಂಶೋಧನ ಸಂಸ್ಥೆಯ ಸಹಕಾರದೊಂದಿಗೆ ಇಂಗ್ಲಿಷ್ ಮತ್ತು ಜಾಪನೀಸ್ ಭಾಷೆಗಳಲ್ಲಿ ಮಾತ್ರ ಲಭ್ಯವಿರುವ 'ಶಾಕ್ ವೇವ್ಸ್'ನಂಥ ಗ್ರಂಥವೂ ಕನ್ನಡದಲ್ಲಿ ಹೊರಬರಲಿದೆ. ಭಾರತೀಯ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾನಿಲಯ ಮಾಲಿಕೆಯ ಮೊದಲಕಂತಿನಲ್ಲಿ ಈ ಮಾಲಿಕೆಯ ೨೫ ಪುಸ್ತಕಗಳು ಸಂಯುಕ್ತ ಪ್ರಕಟಣೆಗಳಾಗಿ ಬರಲಿವೆ. 'ಅಂತರರಾಷ್ಟ್ರೀಯ ಕನಕದಾಸ ಮಿಷನ್' ಸಂಸ್ಥೆಯ ನೆರವಿನೊಂದಿಗೆ ಕನಕದಾಸರ ಸಾಹಿತ್ಯದ ಅನುವಾದ ಕಾರ್ಯವೂ ಆರಂಭಗೊಳ್ಳಲಿದೆ. ಹೀಗಾಗಿ, ಕನ್ನಡ ಪ್ರಕಾಶನದ ಕ್ಷೇತ್ರದಲ್ಲಿಯೂ, ಮಹತ್ವದ ಹೆಜ್ಜೆಗುರುತುಗಳನ್ನು ಕುವೆಂಪು ಭಾಷಾ ಭಾರತಿ ಮೂಡಿಸುತ್ತ ಮುನ್ನಡೆಯಲಿದೆ.

ಖಾಸಗಿ ಪ್ರಕಾಶಕರ ಸಹಭಾಗಿತ್ವ : ಖಾಸಗಿ ಪ್ರಕಾಶಕರ ಸಹಾಯ–ಸಹಕಾರಗಳೊಂದಿಗೆ ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯಮಟ್ಟದಲ್ಲಿ ಪ್ರಚುರಗೊಳಿಸುವ

ಸಲುವಾಗಿ ರಾಜ್ಯ ಸರ್ಕಾರ ವಿಶೇಷ ಯೋಜನೆಯೊಂದಕ್ಕೆ ಅನುಮತಿ ನೀಡಿದೆ. ಅದರ ಮೇರೆಗೆ ಕನ್ನಡ ಸಾಹಿತ್ಯ ಕೃತಿಗಳನ್ನು ಇತರ ಭಾರತೀಯ ಮತ್ತು ವಿದೇಶೀ ಭಾಷೆಗಳಲ್ಲಿ ಹೊರತರುವ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಿಗೆ ಪ್ರಕಟಣೆಯ ಮೂಲಧನವನ್ನು ಮುಂಗಡವಾಗಿ ನೀಡಿ, ಮೂರು ವರ್ಷಗಳಲ್ಲಿ ಅವರು ಈ ಮುಂಗಡ ಹಣವನ್ನು ಹಿಂದಿರುಗಿಸುವಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಇತರ ಕ್ಷೇತ್ರಗಳಿಗೆ ಸರ್ಕಾರಗಳು ಅನೇಕ ರೀತಿಯಲ್ಲಿ ನೆರವಾಗುತ್ತಿದ್ದರೂ, ಪ್ರಕಟಣ ಕ್ಷೇತ್ರಕ್ಕೆ ಈ ಬಗೆಯ ನೆರವು ಇಲ್ಲದಿದ್ದರಿಂದ ಇದೊಂದು ಬಗೆಯ ವಿನೂತನ ಯೋಜನೆ ಆಗಿದೆ ಎಂದೂ, ಇಂಥ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿಯೂ ಅನೇಕ ಪ್ರಕಾಶನ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಈ ದಿಕ್ಕಿನಲ್ಲಿ ವ್ಯವಸ್ಥಿತ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಹೀಗೆ ಪ್ರಕಟಣೆಯ ಕಾರ್ಯಕೈಗೊಳ್ಳುವ ಮೂಲಕ ಕನ್ನಡೇತರ ಭಾಷಾ–ಸಾಹಿತ್ಯವಲಯಗಳಲ್ಲಿ ಕನ್ನಡದ ಮೇರು ಕೃತಿಗಳು ಪರಿಚಯಗೊಳ್ಳಲೂ, ಜನಪ್ರಿಯವಾಗಲೂ ಸಹಾಯವಾಗುತ್ತದೆಂದು ನಂಬಲಾಗಿದೆ.

ಕರ್ನಾಟಕ ಸರ್ಕಾರದ ಉದಾರ ನೆರವಿನಿಂದ ಇಂಥ ಮಹತ್ವದ ಮತ್ತು ಬಹು ಆಯಾಮದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಭಾರತೀಯ ಮತ್ತು ವಿದೇಶಿ ಭಾಷೆಗಳ ನಡುವೆ ಒಂದು ಸಾಂಸ್ಕೃತಿಕ ಸೇತುವೆಯಾಗಿ, ಮಿನಿ ವಿಶ್ವವಿದ್ಯಾನಿಲಯವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಕಾರ್ಯನಿರ್ವಹಿಸಲಿದೆ. ನಾಡಿನ ಗಣ್ಯ ವಿದ್ವಾಂಸರ ಸಹಾಯ–ಸಹಕಾರಗಳನ್ನು ಪಡೆದುಕೊಂಡು ಈ ಕಾರ್ಯ ನಿರ್ವಹಿಸಲಾಗುತ್ತದೆ. ಹೀಗಾಗಿ, ಕುವೆಂಪು ಭಾಷಾ ಭಾರತಿ ಕನ್ನಡ ನಾಡಿನ ಇತಿಹಾಸದಲ್ಲಿ ಮಾತ್ರವಲ್ಲದೆ, ಭಾರತೀಯ ಸಾಹಿತ್ಯಿಕ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಸಂಸ್ಥೆಯಾಗಿ ರೂಪುಗೊಳ್ಳಲಿದೆಯೆಂದೂ, ಕನ್ನಡ ನಾಡಿನ ವಿದ್ವದ್‌ವಲಯಕ್ಕೆ, ಸಾಹಿತ್ಯ ಪ್ರೇಮಿಗಳಿಗೆ, ಕುವೆಂಪು ಅವರ ಅಭಿಮಾನಿಗಳಿಗೆ ಇದು ಸಂತಸದ ಸಂಗತಿ ಆಗಲಿದೆ ಎಂದೂ ನಂಬಿದ್ದೇವೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ.ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ



ಡಾ. ಎ.ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ ವಿದ್ಯಾ ಭವನದ ಬೆಂಗಳೂರು ಶಾಖೆಯ ಕಾರ್ಯಕಾರಿ ನಿರ್ದೇಶಕರಾಗಿರುವ ಪದ್ಮಶ್ರೀ ಡಾ. ಮತ್ತೂರು ಕೃಷ್ಣಮೂರ್ತಿ ಅವರಿಗೂ, ಕಾರ್ಯಕ್ರಮ ಮತ್ತು ಯೋಜನೆಗಳ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಭಾರತೀಯ ವಿದ್ಯಾ ಭವನದ ಕೇಂದ್ರ ಕಛೇರಿಯ ಪದಾಧಿಕಾರಿಗಳಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಅರುತ್ತರ ದಶಕದಲ್ಲಿ ಈ ಮಾಲೆಯನ್ನು ಆರಂಭಿಸಿದಾಹ ಇದನ್ನು 'ಒಂದು ರೂಪಾಯಿ ಮಾಲೆ' ಎಂದೇ ಕರೆಯಲಾಗಿತ್ತು. ಈಗಲೂ ಜನಸಾಮಾನ್ಯರಿಗೆ ಸುಲಭ ದರದಲ್ಲಿ ಈ ಪುಸ್ತಕಗಳನ್ನು ತಲುಪಿಸುವ ಉದ್ದೇಶದಿಂದ ಈ ಮಾಲೆಯ ಎಲ್ಲ ಪುಸ್ತಕಗಳಿಗೂ ಹತ್ತು ರೂಗಳ ಸಾಂಕೇತಿಕ ದರವನ್ನೇ ಗೊತ್ತು ಪಡಿಸಲಾಗಿದೆ. ಪ್ರಕಟಣೆಯ ವೆಚ್ಚದ ಒಂದು ಭಾಗವನ್ನು ವಿದ್ಯಾ ಭವನ ಭರಿಸಿರುವುದು ಇದಕ್ಕೆ ಕಾರಣವಾಗಿದೆ. ಈ ಸೌಹಾರ್ದತೆಗಾಗಿಯೂ ನಾವು ವಿದ್ಯಾಭವನದ ಎಲ್ಲ ಪ್ರಧಾಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಬಯಸುತ್ತೇವೆ.

ಈ ಮಾಲೆಯ ೨೫ ಪುಸ್ತಕಗಳು ಒಮ್ಮೆಗೇ ಹೊರ ಬರುತ್ತಿರುವುದಕ್ಕೆ ಬೆಂಗಳೂರು ಶಾಖೆಯ ತ್ರಿಮೂರ್ತಿಗಳ ಸಹಾಯ ಸಹಕಾರ ಮತ್ತು ಮಾರ್ಗದರ್ಶನಗಳು ಮಾತ್ರವಲ್ಲದೆ ಡಾ. ವಿ.ವಿ. ನರಸಿಂಹಮೂರ್ತಿಯವರ ದಕ್ಷಸಂಪಾದಕತ್ವ ಮತ್ತು ಕಾರ್ಯಪಟುತ್ವಗಳು ಕಾರಣವಾಗಿವೆ. ಇದು ನಮಗೆ ಸಂತೋಷವನ್ನೂ ಹೆಮ್ಮೆಯನ್ನು ತಂದುಕೊಟ್ಟಿದೆ. ಇವನ್ನು ಸುಂದರವಾಗಿ ಹೊರತರುವಲಿಯೂ ಅವರಿಂದ ನಮಗೆ ಸಲಹೆ ಸೂಚನೆಗಳು ದೊರತಿವೆ. ಈ ಎಲ್ಲ ಕೃಪೆಗಾಗಿ ನಾನು ಆ ಎಲ್ಲ ಮಹನೀಯರಿಗೂ ಕೃತಜ್ಞತಾಪೂರಕವಾದ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಈ ಪುಸ್ತಿಕೆಯ ಕನ್ನಡ ಆವೃತ್ತಿಯನ್ನು ಸಿದ್ಧಪಡಿಸಿಕೊಟ್ಟಿರುವ ಶ್ರೀಮತಿ ಬಿ.ಎಸ್. ರುಕ್ಕಮ್ಮ ಅವರಿಗೂ, ಕರಡುಗಳ ಪರಿಶೀಲನೆಯಲ್ಲಿ ಸಹಕರಿಸಿರುವ ಶ್ರೀ ಎಚ್.ಎಂ. ನಾಗರಾಜರಾವ್ ಅವರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ.ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

**ಪ್ರಧಾನ್ ಗುರುದತ್ತ**
ಅಧ್ಯಕ್ಷ

## ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ಈ ಯೋಜನೆಯಲ್ಲಿ ಆಸಕ್ತಿವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಪ್ರಸ್ತುತ, 'ಭಾರತದ ಅಮೂಲ್ಯ ಪರಂಪರೆ' ಎಂಬ ಪುಸ್ತಕ ಖ್ಯಾತ ಲೇಖಕಿ ಶ್ರೀಮತಿ ಬಿ. ಎಸ್. ರುಕ್ಕಮ್ಮನವರು ಮಾಡಿಕೊಟ್ಟ ಅನುವಾದ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

**ಎನ್. ರಾಮಾನುಜ**
ಅಧ್ಯಕ್ಷರು
ಭಾರತೀಯ ವಿದ್ಯಾಭವನ, ಕರ್ನಾಟಕ

**ಎ. ವಿ. ನರಸಿಂಹಮೂರ್ತಿ**
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ



## ಮೂಲ ಸಂಪಾದಕರ ಪ್ರಸ್ತಾವನೆ

ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳು ವಿಶೇಷ ಸಾಫಲ್ಯವನ್ನು ಕಂಡಿವೆ. ಈ ಹನ್ನೊಂದು ವರ್ಷಗಳಲ್ಲಿ ಸುಮಾರು ಒಂದೂಕಾಲು ಮಿಲಿಯನ್ ಪುಸ್ತಕಗಳು ಮಾರಾಟಗೊಂಡಿವೆ. ಆದರೂ ಭವನವು ಆಗಾಗ್ಗೆ ಪ್ರಕಾಶನಗೊಳಿಸುತ್ತಿರುವ ಕಡಿಮೆ ಬೆಲೆಯ ಕೆಲವು ಬಿಡಿ ಪುಸ್ತಕಗಳಿಗೆ ವಿಶೇಷ ಬೇಡಿಕೆ ಇದೆ. ಇದನ್ನು ಪೂರೈಸುವ ದೃಷ್ಟಿಯಿಂದ ಹೊಸ ಒಂದು ರೂಪಾಯಿ ಪುಸ್ತಕಗಳನ್ನು ಹಾಗೂ ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳನ್ನೂ ಒಟ್ಟೊಟ್ಟಿಗೆ ಪ್ರಕಟಿಸಲು ತೀರ್ಮಾನಿಸಿದೆ.

ಈ ಹೊಸ ಒಂದು ರೂಪಾಯಿ ಮಾಲಿಕೆಯ ಪುಸ್ತಕಗಳು, ಇತರ ಮಾಲಿಕೆಯ ಪುಸ್ತಕಗಳಂತೆ ಸಾಫಲ್ಯವನ್ನು ಪಡೆದು ಭಾರತೀಯ ಸಂಸ್ಕೃತಿಯ ಮೌಲ್ಯದಲ್ಲಿ ಆಸಕ್ತಿ ಇರುವವರಿಗೆ ಇಷ್ಟವಾಗಿ, ಹೆಚ್ಚಿನ ಓದುಗರನ್ನು ತಲಪುತ್ತದೆ ಎಂದು ನಾನು ಭಾವಿಸಿದ್ದೇನೆ.

**ಭಾರತೀಯ ವಿದ್ಯಾಭವನ**
ಚೌಪಾಟಿ ರೋಡ್, ಬೊಂಬಾಯಿ–೭
ವಿಜಯದಶಮಿ, ಸೆಪ್ಟೆಂಬರ್ ೨೮, ೧೯೬೩

**ಕೆ. ಎಂ. ಮುನ್ಷಿ**

# ಸಾಮಾನ್ಯ ಸಂಪಾದಕರ ಮುನ್ನುಡಿ

ಮುಂಬಯಿಯಲ್ಲಿರುವ ಭಾರತೀಯ ಸಂಸ್ಕೃತಿ ಅಧ್ಯಯನ ಸಂಸ್ಥೆ ಅಂದರೆ ಭಾರತೀಯ ವಿದ್ಯಾಭವನಕ್ಕೆ ಒಂದು ಬುಕ್ ಯೂನಿವರ್ಸಿಟಿಯ ಅವಶ್ಯಕತೆ ಇತ್ತು. ಇದು ಪ್ರಕಟಿಸುವ ಗ್ರಂಥಗಳನ್ನು ಅಧ್ಯಯನ ಮಾಡಿದರೆ, ಉನ್ನತ ಶಿಕ್ಷಣವನ್ನು ಹೊಂದಿದಂತೆ ಆಗಬೇಕೆನ್ನುವುದೇ ಮುಖ್ಯ ಉದ್ದೇಶ. ಭಾರತೀಯ ಸಂಸ್ಕೃತಿಯ ಆಳವಾದ ಬೇರುಗಳನ್ನು ಜನಗಳಿಗೆ ತಿಳಿಸುವ ಉದ್ದೇಶವೇ ಇದರ ಮುಖ್ಯ ಗುರಿ. ಮೊದಲನೆಯ ಹಂತದಲ್ಲಿ ಒಂದು ನೂರು ಪುಸ್ತಕಗಳನ್ನು ಕೈಗೆತ್ತಿಕೊಂಡು, ಅದರಲ್ಲಿಯೂ ೫೦ ಪುಸ್ತಕಗಳನ್ನು ತಕ್ಷಣವೇ ಪ್ರಕಟಿಸುವ ತೀರ್ಮಾನ ತೆಗೆದುಕೊಳ್ಳಲಾಯಿತು. ಪ್ರತಿ ಪುಸ್ತಕವೂ ೨೦೦ರಿಂದ ೨೫೦ ಪುಟಗಳಷ್ಟಿದ್ದು, ಇದರ ಬೆಲೆ ಎರಡು ರೂಪಾಯಿಗಳೆಂದು ನಿರ್ಧರಿಸಲಾಯಿತು.

ಈ ಪುಸ್ತಕಗಳನ್ನು ಇಂಗ್ಲಿಷಿನಲ್ಲಿ ಮಾತ್ರವಲ್ಲದೆ, ಇತರ ಭಾರತೀಯ ಭಾಷೆಗಳಾದ ಹಿಂದಿ, ಬಂಗಾಳಿ, ಗುಜರಾತಿ, ಮರಾಠಿ, ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂಗಳಲ್ಲಿಯೂ ಪ್ರಕಟಿಸುವುದೆಂದು ತೀರ್ಮಾನಿಸಲಾಯಿತು.

ಈ ರೀತಿಯ ೬೦೦ ಪುಸ್ತಕಗಳ ಪ್ರಕಟನೆಗೆ ಸಾಕಷ್ಟು ಧನ ಹಾಗೂ ಅಖಿಲ ಭಾರತ ಸಂಸ್ಥೆಯ ಅವಶ್ಯಕತೆ ಇದೆ. ವಿದ್ಯಾಭವನವು ಇದನ್ನು ಸಫಲಗೊಳಿಸುವಲ್ಲಿ ಸಾಕಷ್ಟು ಶ್ರಮವಹಿಸುತ್ತಿದೆ.

ಆಧುನಿಕ ಜ್ಞಾನದಡಿಯಲ್ಲಿ ಹಾಗೂ ನಮ್ಮ ಇಂದಿನ ಅವಶ್ಯಕತೆಗಳಿಗನುಗುಣವಾಗಿ ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ತಿಳಿಸುವುದೇ ಭಾರತೀಯ ವಿದ್ಯಾಭವನದ ಮೂಲ ಗುರಿ. ಇದರಿಂದ ನಮ್ಮ ಸಂಸ್ಕೃತಿಯ ನಿಜವಾದ ಕ್ರಿಯಾಶೀಲ ರೂಪ ಹಾಗೂ ಮೌಲ್ಯಗಳನ್ನು ತಿಳಿಸುವುದು ಸಾಧ್ಯವಾಗುತ್ತದೆ.

ನಮ್ಮ ಗುರಿಯನ್ನು ಇನ್ನೂ ವಿಶದವಾಗಿ ತಿಳಿಸಲು ಯತ್ನಿಸುತ್ತೇನೆ. ಪ್ರತಿಯೊಬ್ಬನಿಗೂ ತನ್ನ ಶಕ್ತಿ ಮತ್ತು ಗುಣಗಳಿಗನುಗುಣವಾಗಿ ತನ್ನ ಘನತೆಗೆ ತಕ್ಕಂತೆ ಸಾಮಾಜಿಕ ಸ್ಥಿತಿಗಳನ್ನು ಕಂಡುಕೊಳ್ಳುವುದನ್ನು ನಾವು ಬಯಸುತ್ತೇವೆ; ವೈಯಕ್ತಿಕ ಪ್ರಯತ್ನ ಹಾಗೂ ಸಾಮಾಜಿಕ ಸಂಬಂಧಗಳನ್ನು ನಮ್ಮ ಮೌಲ್ಯದಡಿಯಲ್ಲಿ ನಿರಂತರವಾಗಿ ಸಾಧಿಸುವುದನ್ನು ನಾವು ಆಶಿಸುತ್ತೇವೆ; ಜೀವನ ಕಲೆಯನ್ನು ನಮ್ಮ ಪರಿಮಿತಿಯನ್ನು ದಾಟಿ ಸಾಧಿಸುವುದರ ಮೂಲಕ ಮಾನವನು ದೈವದ ಸಾಧನವಾಗಿ, ಅವನನ್ನು ಎಲ್ಲರಲ್ಲಿಯೂ ಎಲ್ಲವನ್ನೂ ಅವನಲ್ಲಿಯೂ ಕಾಣುವಂತೆ ಮಾಡುವುದೇ ನಮ್ಮ ಗುರಿ.

ಪ್ರಪಂಚ ನಮ್ಮ ಜೊತೆ ವಿಶೇಷವಾಗಿದೆ. ಪುಸ್ತಕಗಳು ನಮಗೆ ಬೋಧಿಸುವಂತೆ, ಇನ್ನಾವುದೂ ನಮಗೆ ಸುಂದರ ಹಾಗೂ ಆಕಾಂಕ್ಷೆಯ ಜೀವನವನ್ನು ತೋರಲಾರರು.



ಆದುದರಿಂದ, ಈ ಮಾಲಿಕೆಯಲ್ಲಿ, ಪ್ರಾಚೀನ ಹಾಗೂ ಆಧುನಿಕ ಸಾಹಿತ್ಯವನ್ನು ಪ್ರತಿಬಿಂಬಿಸುವ ಕೃತಿಗಳನ್ನು, ಎಲ್ಲರಿಗೂ ಸುಲಭವಾಗಿ ದೊರಕುವಂತೆ ಪ್ರಕಟಿಸಲು ಉದ್ದೇಶಿಸಲಾಗಿದೆ. ಪ್ರಪಂಚದ ಇತರ ಸಾಹಿತ್ಯಗಳಲ್ಲಿ ನಾವು ಗೌರವಿಸುವ ಮೌಲ್ಯಗಳ ಈ ಗುಣಗಳು ಕಂಡುಬಂದರೆ ಅವುಗಳನ್ನೂ ಇದರಲ್ಲಿ ಸೇರಿಸಿಕೊಳ್ಳಲಾಗುವುದು.

ಈ ರೀತಿಯ ಸಾಹಿತ್ಯ ವಾಹಿನಿಯು ಬೇರೆ ಬೇರೆ ಭಾಷೆಗಳ ಮೂಲಕ ಹರಿದು ಬಂದರೂ, ಅವುಗಳಲ್ಲಿ ಒಂದೇ ಗುರಿ ಮತ್ತು ಆಕಾಂಕ್ಷೆ ಕಾಣಬರುತ್ತದೆ. ಆದುದರಿಂದ ಇದು ಪೌರ್ವಾತ್ಯ ಅಥವಾ ಪಾಶ್ಚಿಮಾತ್ಯ ಓದುಗರಿಗೆ ಭಾರತದ ಆಂತರ್ಯವನ್ನು ತಿಳಿಯುವ ಹಾಗೂ ಪ್ರಪಂಚದ ಚಿಂತನೆಯನ್ನು ತಿಳಿಸುವ ಸಾಧನವಾಗುತ್ತದೆ ಎಂದು ಭಾವಿಸಲಾಗಿದೆ.

ಇದಕ್ಕನುಗುಣವಾಗಿ ಬುಕ್ ಯೂನಿವರ್ಸಿಟಿಯ ಮೊದಲನೆಯ ಪುಸ್ತಕ, ಅತ್ಯಂತ ಶ್ರೇಷ್ಠ ವಿದ್ವಾಂಸರಾದ ಶ್ರೀ ರಾಜಗೋಪಾಲಾಚಾರಿಯವರ 'ಮಹಾಭಾರತ' ಪ್ರಕಟವಾಗಿರುವುದು ನಮ್ಮ ಸುಯೋಗ; ಎರಡನೆಯ ಪುಸ್ತಕ ಇದರ ಒಂದು ಭಾಗವಾದ, ಖ್ಯಾತ ನ್ಯಾಯವಾದಿಗಳೂ ತತ್ವಶಾಸ್ತ್ರವಿದರೂ ಆದ ಎಚ್. ವಿ. ದವೆಯವರಿಂದ ರಚಿತವಾದ ಭಗವದ್ಗೀತೆ. ಇಲ್ಲಿ ಇಲ್ಲದ್ದು ಇನ್ನೆಲ್ಲಿಯೂ ಇರದು ಎಂದು ಮಹಾಭಾರತವನ್ನು ಕುರಿತು ಹೇಳಲಾಗಿತ್ತು. ಇಪ್ಪತ್ತೈದು ಶತಮಾನಗಳಾದ ನಂತರವೂ ನಾವು ಇದೇ ಮಾತನ್ನು ಪುನರುಚ್ಚರಿಸಬಹುದು. ಯಾರಿಗೆ ಮಹಾಭಾರತವು ಗೊತ್ತಿಲ್ಲವೋ, ಅವರಿಗೆ ಆತ್ಮದ ಆಳ ಮತ್ತು ಎತ್ತರ ತಿಳಿದಿಲ್ಲ; ಅಂತಹವರು ಜೀವನದ ಕಷ್ಟಸುಖಗಳಿಂದ ಹಾಗೂ ವೈಭವದಿಂದ ವಂಚಿತರಾಗಿರುತ್ತಾರೆ.

ಮಹಾಭಾರತವು ಕೇವಲ ಒಂದು ಮಹಾಕಾವ್ಯವಲ್ಲ; ವೀರ ರಮಣಿಯರ ಹಾಗೂ ಪುರುಷರ, ಅದರಲ್ಲಿಯೂ ದೈವಾಂಶ ಸಂಭೂತರಾದ ಕೆಲವರ ಮಹಾಗಾಥೆ, ಜೀವನದ ಗುರಿಯನ್ನು ತೋರಿಸುವ ಪೂರ್ಣ ಸಾಹಿತ್ಯವದು; ಸಾಮಾಜಿಕ ಹಾಗೂ ಮೌಲಿಕ ಸಂಬಂಧಗಳ ತಾತ್ವಿಕ ಚಿಂತನೆ; ಅದೊಂದು ಸರಿಸಾಟಿಯಿಲ್ಲದ ಮಾನವನ ಸಮಸ್ಯೆಗಳ ಕುರಿತಾದ ಚಿಂತನೆ; ಇವೆಲ್ಲವುಗಳಿಗಿಂತ ಮಿಗಿಲಾಗಿ ಅದರ ಮುಖ್ಯ ತಿರುಳು ಗೀತೆ. ಇದೊಂದು ಅತ್ಯಂತ ಉದಾತ್ತವಾದ ಪವಿತ್ರಗ್ರಂಥ: ಇದರ ಹನ್ನೊಂದನೆಯ ಅಧ್ಯಾಯದಲ್ಲಿ ಅದ್ಭುತವಾಗಿ ಭವಿಷ್ಯದ ದರ್ಶನವೇ ಆಗುತ್ತದೆ ಎಂಬುದನ್ನು ಇತ್ತೀಚೆಗೆ ವಿಶ್ವದ ಜನ ತಿಳಿಯಲು ಆರಂಭಿಸಿದ್ದಾರೆ.

ಇಂತಹ ಉತ್ತಮ ಪುಸ್ತಕಗಳಿಂದ ಮಾತ್ರ ನಮ್ಮ ನಿಜವಾದ ಸಂಸ್ಕೃತಿಯ ನೆಲೆ ತಿಳಿಯಬರುತ್ತದೆ ಮತ್ತು ನಮ್ಮ ಆಧುನಿಕ ಜೀವನದ ಸಂಘರ್ಷಗಳಿಗೆ ಒಂದು ದಿನ ಸಾಮರಸ್ಯವನ್ನು ಒದಗಿಸುತ್ತದೆ.

ಭವನದ ಈ ಕಾರ್ಯವನ್ನು ಸಫಲಗೊಳಿಸುವಲ್ಲಿ ಸಹಾಯ ಹಸ್ತ ನೀಡಿರುವ ಎಲ್ಲರನ್ನೂ ನಾನು ಮನಸಾರೆ ವಂದಿಸುತ್ತೇನೆ.

೧. ಕ್ವೀನ್ ವಿಕ್ಟೋರಿಯಾ ರೋಡ್
ನವದೆಹಲಿ
೩, ಅಕ್ಟೋಬರ್, ೧೯೫೧

**ಕೆ. ಎಂ. ಮುನ್ಷಿ**

# ಮುನ್ನುಡಿ

ಶ್ರೀ ನಾನಿ ಎ. ಪಾಲ್ಕಿವಾಲ ಅವರು ತಮ್ಮ ವಕೀಲ ವೃತ್ತಿಯಲ್ಲಿ ವಿವೇಚನಯುತ ನ್ಯಾಯದರ್ಶಿಯಾಗಿ ಪ್ರಸಿದ್ಧರು. ಅವರು ಕಾರ್ಲ್‌ಯಂಗ್ ಎಂಬ ಜೂರಿಚ್‌ನ ಪ್ರಸಿದ್ಧ ಮನಶ್ಶಾಸ್ತ್ರಜ್ಞನ ಅಭಿಪ್ರಾಯಕ್ಕೆ ಉತ್ತಮ ನಿದರ್ಶನವಾಗಿದ್ದಾರೆ. ಸಾಧನೆಗಳಿಗೂ, ಸುಸಂಸ್ಕೃತ ವ್ಯಕ್ತಿತ್ವಕ್ಕೂ ನಡುವೆ ಎಷ್ಟೋ ವ್ಯತ್ಯಾಸವಿರುತ್ತವೆ. ವೇದಾಂತವೂ ಬೇರೆಯ ಮಾತುಗಳಲ್ಲಿ ಇದನ್ನೇ ಹೇಳುತ್ತದೆ. ಕರ್ಮ ಮತ್ತು ಜೀವನಗಳ ನಡುವೆ ಇರುವ ಸಂಬಂಧವನ್ನು ಲೇಖಕರು ಚೆನ್ನಾಗಿ ತಿಳಿದಿದ್ದಾರೆ. ಮಾನವ ತನ್ನ ಜೀವನದ ಮುಂಜಾವಿನಲ್ಲಿ ಮಾಡುವ ಸಾಧನೆಗಳು ಹಲವು. ಅದರಲ್ಲಿ ಲೌಕಿಕವಾದ ಅಭಿವೃದ್ಧಿ ಇರುತ್ತದೆ. ಮಧ್ಯಾಹ್ನದ ನಂತರವೂ ಅವನ ಜೀವನ ಹಾಗೆಯೇ ಮುಂದುವರಿದರೆ ಅದೊಂದು ಗೋಳುಕರೆಯ ಅನುಬಂಧವೇ ಸರಿ. ತನ್ನ ಚಾರಿತ್ರ್ಯಪೂರ್ಣವಾದ ಚೇತನದಿಂದ ಮತ್ತು ಅಪೂರ್ಣ ವ್ಯಕ್ತಿತ್ವದಿಂದ ಆತನು ತನ್ನ ಆತ್ಮಕ್ಕೆ ಬಹಳ ಧಗೆಯನ್ನು, ನಷ್ಟವನ್ನು ಉಂಟುಮಾಡಿಕೊಳ್ಳುತ್ತಾನೆಯೇ ಹೊರತು ಇನ್ನೇನೂ ಅಲ್ಲ.

ಸಾಧನೆಗಳದು ಒಂದು ಪಾತಳಿಯಾದರೆ, ಅಂತರಂಗದ ಸಂಸ್ಕಾರದ ರೀತಿ ಇನ್ನೊಂದು.

ಹಣ ಸಂಪಾದನೆ, ಸಾಮಾಜಿಕ ಸ್ಥಾನಮಾನಗಳು, ಸಂಸಾರ ಮತ್ತು ಸಂತತಿ ಇವೆಲ್ಲ ಪ್ರಕೃತಿಸಹಜ ವ್ಯಾಪಾರವೇ ವಿನಃ ಸಂಸ್ಕೃತಿ ಅಲ್ಲ. ಸಂಸ್ಕೃತಿಯು ಪ್ರಕೃತಿ ಸಹಜವಾದ ಉದ್ದೇಶಗಳನ್ನು ಮೀರಿರುತ್ತದೆ. ಅಲ್ಲದೆ ಮನುಷ್ಯನ ಬೆಳವಣಿಗೆಯಲ್ಲಿ ಪ್ರಕೃತಿಸಹಜವಾದ ವ್ಯಾಪಾರಗಳಲ್ಲಿ ಮೀರಿದ ಒಂದು ಅಂಶವಿದೆ. ಇದು ಮನುಷ್ಯ ಚೈತನ್ಯದ ಪ್ರಕೃತಿ. ಇದು ಪರಾಪ್ರಕೃತಿಯ ಅಂದರೆ ಉನ್ನತ ಪ್ರಕೃತಿಯ ಆವಿಷ್ಕಾರ. ಗೀತೆಯ ಎಂಟನೆಯ ಅಧ್ಯಾಯದಲ್ಲಿ ಈ ಉನ್ನತ ಚೇತನದ ವಿವರಣೆಯಿದೆ. ಆತ್ಮೋನ್ನತಿಯ ಮಾರ್ಗದ ಅವಕಾಶಗಳು ಎಲ್ಲ ಮಾನವರಿಗೂ ಇರುತ್ತದೆ. ಭಾರತವು ಈ ಶಾಸ್ತ್ರವನ್ನು ಮತ್ತು ಇದರ ತಂತ್ರಜ್ಞಾನವನ್ನು ಪರಿಪೂರ್ಣವಾಗಿ ಬೆಳೆಸಿದೆ.

ಮುಂಡಕೋಪನಿಷತ್ ಯಾವ ಪರಾವಿದ್ಯೆಯನ್ನು ವರ್ಣಿಸುವುದೋ ಆ ಪರನು ವಿಜ್ಞಾನವನ್ನು ಮತ್ತು ಅದರ ತಂತ್ರಜ್ಞಾನನ್ನು ಶ್ರೀಮಾನ್ ಪಾಲ್ಕೀವಾಲ ಅವರ ಪುಸ್ತಕದಲ್ಲಿಯೂ ಸ್ವಲ್ಪಮಟ್ಟಿಗೆ ಕಾಣಬಹುದು. ಗ್ರಂಥಕ್ಕೆ "ಭಾರತದ ಅಮೂಲ್ಯ ಪರಂಪರೆ" ಎಂಬ ಹೆಸರು ಅತ್ಯಂತ ಉಚಿತವಾಗಿದೆ. ಓದುಗರು ಗ್ರಂಥವನ್ನು ಅವಗಾಹನೆ ಮಾಡುತ್ತ ಹೋದಂತೆ, ಇವು ಲೇಖಕರ ಅನುಭವದಿಂದ ಕೂಡಿದ ವಿಚಾರಗಳೇ ಹೊರತು ಅವರ ಪಾಂಡಿತ್ಯದಿಂದ ಪ್ರಕಟವಾದುದಲ್ಲ ಎಂಬ ಸಂಗತಿಯನ್ನು ಮನಗಾಣುತ್ತಾರೆ. ಪಾಯಸದ ರುಚಿಯನ್ನರಿಯದ ಬಡಿಸುವ ಸಟ್ಟುಗವಲ್ಲ ಇವರು ಎಂಬ ಸಂಗತಿ ತಾನೇ ತಾನಾಗಿ ವೇದ್ಯವಾಗುತ್ತದೆ.



ಲೌಕಿಕವಾದ ಐಶ್ವರ್ಯವನ್ನು ಸಂಪಾದಿಸುವ ಒಂದು ಹುಚ್ಚಿನಲ್ಲಿ ನಮ್ಮ ಜನ, ರಾಜಕೀಯ ಸ್ವಾತಂತ್ರ್ಯವನ್ನು ಪಡೆದ ಮೇಲೆ, ತಮ್ಮ ಆತ್ಮದ ವಿಚಾರವೂ ದಾರಿದ್ರ್ಯವೂ ಎದ್ದು ತೋರುವಂತೆ, ತಮ್ಮ ಜೀವನ ಸಾಧನೆ ನಡವಳಿಕೆಗಳನ್ನು ಮರೆಸುತ್ತಿದ್ದಾರೆ. ಸುಸಂಸ್ಕೃತ ದೇವಗಂಗೆಯ ನಿರ್ಮಲ ಜಲವನ್ನು ತಿರಸ್ಕರಿಸಿ, ತಾವೊಂದು ಕೊಳೆತ ಕಾಲುವೆಯಾಗಿ, ಸಂಸ್ಕರಣ ದೂರರಾಗಿ, ದುರ್ನಾತ ಹೊಡೆಯುತ್ತ ತಮ್ಮ ದೇಶಕ್ಕೂ ಸಮಾಜಕ್ಕೂ ಒಂದು ಸಮಸ್ಯೆಯಾಗಿ ನಿಂತಿದ್ದಾರೆ. ಅವರು ನಿತ್ಯನೂತನೆಯಾದ ತುಂಬಿ ಹರಿಯುವ ಗಂಗೆಯ ಕರೆಗೆ ಕೈನೀಡಿ ತಮ್ಮ ಮತ್ತು ತಮ್ಮ ದೇಶದ ಚೇತನಗಳಿಗೆ ಸಂಸ್ಕಾರದ ಸ್ಫೂರ್ತಿಯುಂಟಾಗುವಂತೆ ಮಾಡಬೇಕು. ಇಂತಹ ಜನರನ್ನು ಶ್ರೀ ಪಾಲ್ಕೀವಾಲ ಅವರು ಹೊನ್ನಿನ ಮೂಟೆಯನ್ನು ಹೊತ್ತ ಕತ್ತೆಗಳಿಗೆ ಹೋಲಿಸುತ್ತಾರೆ. ಬೆನ್ನಮೇಲೆ ತಾನೇನನ್ನು ಹೊತ್ತುಕೊಂಡಿರುವೆನೆಂಬುದನ್ನರಿಯದೆ, ಕತ್ತೆಯು ಪ್ರಯಾಣ ಮಾಡುತ್ತಲೇ ಇದೆ. ಈ ಪುಟ್ಟ ಪುಸ್ತಕವು ಓದುಗರಿಗೆ ತಮ್ಮ ಅಮೂಲ್ಯ ಪರಂಪರೆಯನ್ನು ತಾವು ಅರಿಯುವಂತೆ, ವ್ಯರ್ಥವಾಗಿ ಅದನ್ನು ಹೊರುವ ಕತ್ತೆಗಳಾಗದಂತೆ ಪ್ರೇರೇಪಿಸಿ, ಪೋಷಿಸುತ್ತದೆ.

**ಲೇಖಕರ ಅಭಿಪ್ರಾಯದಂತೆ–**

"ಈಚೆಗೆ ಅಧ್ಯಾತ್ಮದ ಬಗ್ಗೆ ಅಜ್ಞಾನವೂ ಚೈತನ್ಯ ದಾರಿದ್ರ್ಯವೂ ಉಂಟಾಗಿದೆ. ಮಾನವರ ಸಂಸ್ಕೃತಿ ಎಂಬುದು ನಮ್ಮ ಚಿರನೂತನ ಚೈತನ್ಯದ ಒಂದು ಕ್ರಿಯೆ. ಇಂದಿನ ಜನರಿಗೆ ಹಣವು ಅಗಣಿತವಾಗಿ ಗುಣಿಸಲ್ಪಡುವುದೇ ಹೊರತು ಇನ್ನೇನನ್ನೂ ಸಾಧಿಸಲಾರದು ಎಂಬುದರ ಅರಿವಾಗುವವರೆಗೆ, ಅವರು ನಮ್ಮ ಕಾವ್ಯಮಯ ಚೇತನವನ್ನು ನಾಶಮಾಡಿ, ಅದರ ತೋರಿಕೆಯಿಂದ ತಮ್ಮ ಆತ್ಮವನ್ನು ವಂಚಿಸಿಕೊಳ್ಳುವುದನ್ನು ನಿಲ್ಲಿಸುವವರೆಗೆ, ನಾವು ನಮ್ಮ ಜೀವನ ಮತ್ತು ಸಂಸ್ಕೃತಿಗಳು ನಿತ್ಯನೂತನವಾದ ನಮ್ಮ ಚೇತನದ ಕ್ರಿಯೆ ಎಂಬ ಸಂಗತಿಯನ್ನು ನೆನಪಿಸುತ್ತಿರಬೇಕು. ಐಹಿಕವಾದ ಅಭಿವೃದ್ಧಿಯನ್ನು ನಮ್ಮ ಅಂತರಂಗದ ಅಭಿವೃದ್ಧಿ ಎಂದು ತಪ್ಪಾಗಿ ತಿಳಿಯಬಾರದು. ತಂತ್ರಜ್ಞಾನವು ನಮ್ಮ ನೈತಿಕ ತಳಹದಿಯನ್ನು ಹರಿದೊಗೆದಾಗ ಅದು ಈ ಶತಮಾನದ ಸಾಧನೆಯಾಗುವುದಿಲ್ಲ. ಅದರ ಮುಕ್ತಾಯವಾಗುತ್ತದೆ. ಇದಕ್ಕೆ ನಮ್ಮ ಪ್ರಾಚೀನ ಪರಂಪರೆಯು ಪ್ರತ್ಯೌಷಧದಂತೆ ಕೆಲಸ ಮಾಡಬೇಕು. ನಮ್ಮ ಆತ್ಮಗಳು ಪರಸ್ಪರ ಪಡಿಯಚ್ಚಿನಂತಿವೆಯೆ, ನಾವೆಲ್ಲ ಒಂದೇ ಮಂದೆಯಲ್ಲಿ ಮುಕ್ತಿ ಪಡೆಯುವುದು ಸಾಧ್ಯವೇ? ಇಂತಹ ಹುಚ್ಚಿಗೆ ನಮ್ಮ ಸನಾತನ ಸಂಸ್ಕೃತಿಯು ಭೇಷಜವಾಗಲಿ."

ಈ ಪುಸ್ತಕವು ಭಾರತದಲ್ಲಿಯೂ ಹೊರದೇಶಗಳಲ್ಲಿಯೂ ವ್ಯಾಪಕವಾಗಿ ಓದಲ್ಪಡಲು ಅರ್ಹವಾಗಿದೆ.

ರಾಮಕೃಷ್ಣ ಮಠ, ಹೈದರಾಬಾದು — **ರಂಗನಾಥಾನಂದ**
ದೀಪಾವಳಿ
ನವೆಂಬರ್ ೬, ೧೯೮೦.

## ಕೃತಜ್ಞತೆಗಳು

1980ರಲ್ಲಿ ತಿರುಪತಿಯ ಶ್ರೀ ವೆಂಕಟೇಶ್ವರ ವಿಶ್ವ ವಿದ್ಯಾನಿಲಯದಲ್ಲಿ ಲೇಖಕರು ನೀಡಿದ ಪ್ರಕಾಶಂ ಗೋವಿಂದರಾಜುಲು ಸ್ಮಾರಕ ಉಪನ್ಯಾಸದ ಮೇಲೆ ಆಧಾರಿತವಾಗಿದೆ.

ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಇದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ಅನುಮತಿ ನೀಡಿದ್ದಕ್ಕಾಗಿ ಅವರಿಗೆ ವಂದನೆಗಳನ್ನು ಪ್ರಕಾಶಕರು ಸಲ್ಲಿಸುತ್ತಾರೆ.



## ಪ್ರಸ್ತಾವನೆ

ಭಾರತವು ಸನಾತನ ಮತ್ತು ಶಾಶ್ವತ. ಅವಳ ಅನೇಕ ನಾಗರಿಕತೆಗಳ ಪ್ರಾರಂಭವು ಇತಿಹಾಸ ಪೂರ್ವದ ಗರ್ಭದಲ್ಲಿ ಕಾಣದೇ ಹೋಗಿರುವುದಾದರೂ ಅವಳು ನಿತ್ಯನೂತನ. ಅವಳ ಸಂಸ್ಕೃತಿ ಕಾಲಾತೀತವಾದುದು. ಇಂದು ಇಪ್ಪತ್ತನೆಯ ಶತಮಾನಕ್ಕೆ ಎಷ್ಟರ ಮಟ್ಟಿಗೆ ಅರ್ವಾಚಿನವಾಗಿರುವುದೋ, ಕ್ರಿ.ಪೂ. ಇಪ್ಪತ್ತು ಶತಮಾನಗಳ ಹಿಂದೆಯೂ ಅಷ್ಟೇ ಸಮೀಚೀನವಾಗಿದ್ದಿತು. ಡಾ॥ ಅರ್ನಾಲ್ಡ್ ಟಾಯಿನ್‌ಬಿ ಅವರು ಮಾನವ ಇತಿಹಾಸವನ್ನು ಸಂಪೂರ್ಣವಾಗಿ ಅವಲೋಕಿಸಿ, "ಪಾಶ್ಚಿಮಾತ್ಯ ಸಂಸ್ಕೃತಿಯಲ್ಲಿ ಆರಂಭವಾದುದೆಲ್ಲವೂ ಭಾರತೀಯತೆಯಲ್ಲಿ ಕೊನೆಗಾಣಬೇಕು. ಅಥವಾ ಮಾನವ ಜನಾಂಗವನ್ನೇ ಘಾಸಿಗೊಳಿಸಿ ಸ್ವನಾಶಕ್ಕೆ ಗುರಿಯಾಗಬೇಕು ಎಂಬುದು ಈಚೆಗೆ ವಿಶದವಾಗುತ್ತಿದೆ..... ನೂತನ ಇತಿಹಾಸದಲ್ಲೇ ಅತ್ಯಂತ ಅಸಹಾಯಕರವಾದ ಇಂದಿನ ಸ್ಥಿತಿಗೆ ಬಿಡುಗಡೆಯ ದಾರಿ ಕಾಣುವುದು ಭಾರತೀಯರನ್ನು ಅನುಸರಿಸುವಲ್ಲಿ ಮಾತ್ರ – ಅಶೋಕ ಚಕ್ರವರ್ತಿ ಮತ್ತು ಮಹಾತ್ಮಾ ಗಾಂಧಿಯವರ ಅಹಿಂಸೆಯ ಮಾರ್ಗವನ್ನು ಮತ್ತು ಶ್ರೀರಾಮಕೃಷ್ಣರ ಸರ್ವಧರ್ಮ ಸಮನ್ವಯದಲ್ಲಿ ಮಾತ್ರ – ಇಂದಿನ ಪರಮಾಣು ಯುಗದಲ್ಲಿ ನಮ್ಮನ್ನು ನಾವೇ ನಾಶಮಾಡಿಕೊಳ್ಳದೇ ಇರಲು ಉಳಿದಿರುವ ಪರ್ಯಾಯ ಮಾರ್ಗವೆಂದರೆ, ಮಾನವ ಕುಲದ ಚೇತನಗಳೆಲ್ಲ ಒಂದೇ ಕುಟುಂಬದಂತೆ ಬಾಳುವ ಒಲವನ್ನು ಪಡೆದುಕೊಳ್ಳುವುದು." ಹೀಗೆ ಅಭಿಪ್ರಾಯಪಡುತ್ತ 'ಟಾಯಿನ್‌ಬಿ'ಯವರು ಭಾರತದ ಪ್ರಾಚೀನ ಋಷಿಗಳು ನಮಗೆ ತೋರಿದ ಆದರ್ಶವನ್ನು ಪ್ರತಿಧ್ವನಿಸಿದ್ದಾರೆ: "ವಸುಧೈವ ಕುಟುಂಬಕಂ" (ಪ್ರಪಂಚವೆಲ್ಲ ಒಂದು ಕುಟುಂಬ)

ಪ್ರಾಚೀನ ಭಾರತದ ಅಮೋಘವಾಣಿಯು ಯುಗ ಯುಗಾಂತರಗಳಿಂದ ನಮಗೆ ಅಖಂಡವಾಗಿ, ಸತತವಾಗಿ ಅಸಂಖ್ಯಾತ ಋಷಿಗಳೂ ಮತ್ತು ಸಂತರ ಮೂಲಕ – ಅವರಲ್ಲಿ ಅನಾಮಧೇಯರೂ ಪ್ರಸಿದ್ಧರೂ ಇರಬಹುದು – ದೊರೆಯುತ್ತಲೇ ಇದೆ. ನಮ್ಮ ಸಂಸ್ಕೃತಿಯು ಪ್ರಥಮತಃ ಪಾರಮಾರ್ಥಿಕ ಅಭಿವೃದ್ಧಿಗೆ ವಿಶೇಷವಾಗಿ ಗಮನ ಕೊಟ್ಟಿದೆ. ಇಂದಿನ ಆಧುನಿಕ ಸಂಸ್ಕೃತಿಯಲ್ಲಿ ಐಹಿಕ ಸಾಧನೆಗಳ ಕೋಲಾಹಲದಲ್ಲಿ ಈ ಅಂಶವೇ ಲುಪ್ತವಾಗಿದೆ. ಶ್ರೀ ಅರಬಿಂದೊ ಅವರು ಹೇಳುವಂತೆ "ಯುಗ ಯುಗಾಂತರಗಳ ಭಾರತೀಯ ಸಂಸ್ಕೃತಿ ನಾಶವಾಗಿಲ್ಲ ಅಥವಾ ಅದು ತನ್ನ ಸೃಷ್ಟಿಶೀಲವಾದ ಚಿಂತನೆಗಳಿಗೆ ಅಂತ್ಯವನ್ನೂ ಹಾಡಿಲ್ಲ. ಅವಳು ಮಾನವ ಜನಾಂಗಕ್ಕಾಗಿ ಮತ್ತು ತನ್ನ ಉಳಿವಿಗಾಗಿ ಹೇಳುವುದು ಇನ್ನೂ ಉಳಿದಿದೆ."

ಪ್ರಾಚೀನ ಭಾರತೀಯರಿಗೆ ಗಣಿತಶಾಸ್ತ್ರ ಮತ್ತು ವೈಜ್ಞಾನಿಕ ತಿಳುವಳಿಕೆಗಳೇ ತಳಹದಿಯಾದವು. ದೇಶಕಾಲವನ್ನು ಅಳೆಯುತ್ತ ಅವರು ಆಗಸದ ನಕ್ಷೆಯನ್ನು ಮಾಡಿಕೊಂಡರು. ಅವರು ಚೇತನದ ಸ್ವರೂಪವನ್ನು ತಿಳಿದು ಅಚೇತನವನ್ನು

ವಿಶ್ಲೇಷಿಸಿದರು. ಚದುರಿಕೊಂಡಂತೆ ಕಾಣುವ ಜ್ಞಾನದ ಶಾಖೋಪಶಾಖೆಗಳಾದ ತರ್ಕಶಾಸ್ತ್ರ, ವ್ಯಾಕರಣ, ಅಂಗರಚನಾಶಾಸ್ತ್ರ, ಖಗೋಳಶಾಸ್ತ್ರ, ತತ್ವ ಮತ್ತು ವೇದಾಂತಗಳಲ್ಲಿ, ವೈದ್ಯಕೀಯ ಮತ್ತು ಗಣಿತಗಳಲ್ಲಿಯೂ ಅವರು ಅಪರಿಮಿತವಾದ ಸಾಧನೆಗಳನ್ನು ಮಾಡಿ ತೋರಿಸಿದರು. ನಮ್ಮ ಪ್ರಾಚೀನ ಋಷಿಗಳು ಪಡೆದ ಜ್ಞಾನದ ಮೂಲವು ಪ್ರಕೃತಿಜನ್ಯವಾದುದು ಎಂಬುದರಲ್ಲಿ ಸಂದೇಹವಿಲ್ಲ. ಅವರ ಜ್ಞಾನವು ಧ್ಯಾನ ಗೋಚರವಾದರೆ, ನಮ್ಮದು ಲೌಕಿಕವೂ ಅನುಕೃತವೂ ಮತ್ತು ಪ್ರಮಾಣಿತವೂ ಆಗಿದೆ.

ಚಾರ್ಲ್ಸ್ ರಾಬರ್ಟ್ ರಿಷೆ (Charls Robert Richet) ಎಂಬ ಧೀರೋದಾತ್ತ ವೈದ್ಯನು – ಆತನು ಶರೀರ ವಿಜ್ಞಾನದಲ್ಲಿ ನೊಬೆಲ್ ಬಹುಮಾನ ಪುರಸ್ಕೃತನೂ ಹೌದು – ಹೀಗೆ ವಿಚಾರ ಮಾಡಿದ್ದಾನೆ. "ಅಧ್ಯಾತ್ಮವನ್ನು ಒಂದು ಶಾಸ್ತ್ರವಾಗಿ ಇದುವರೆಗೆ ಪರಿಗಣಿಸಿಲ್ಲ. ಆದರೆ ಇಷ್ಟರಲ್ಲೇ ಹಾಗೆ ಮಾಡಬೇಕಾಗುತ್ತದೆ. ಎಡಿನ್‌ಬರೋದಲ್ಲಿ ನಾನು ನೂರು ಜನ ಶರೀರ ವಿಜ್ಞಾನ ಶಾಸ್ತ್ರಜ್ಞರ ಮುಂದೆ, ನಮ್ಮ ತಿಳಿವಳಿಕೆಗೆ ನಮ್ಮ ಪಂಚೇಂದ್ರಿಯಗಳು ಮಾತ್ರ ಮೂಲವಲ್ಲ ಯಥಾರ್ಥ ಜ್ಞಾನದ ಸ್ವಲ್ಪ ಭಾಗವು ನಮ್ಮ ತಿಳುವಳಿಕೆಯನ್ನು, ಕೆಲವು ವೇಳೆ ಇವುಗಳಿಗೆ ಅತೀತವಾದ ರೀತಿಯಲ್ಲಿ ಬಂದು ಮುಟ್ಟುತ್ತದೆ ಎಂಬುದನ್ನು ಸ್ಥಾಪಿಸಿದ್ದೇನೆ. ಒಂದು ವಿಚಾರವು ಅಪರೂಪವಾದ ಮಾತ್ರಕ್ಕೆ ಅದನ್ನು ಇಲ್ಲವೆನ್ನಲಾಗುವುದಿಲ್ಲ".

ನಮ್ಮ ಆಧುನಿಕ ವಿಜ್ಞಾನಕ್ಕೆ ತಳಹದಿಯಾಗಿರುವ ಕೆಲವು ಮೂಲ ಸಂಗತಿಗಳಲ್ಲಿ ಯಾವುದನ್ನು ನಮ್ಮ ಪ್ರಾಚೀನ ಋಷಿಗಳು ತಮ್ಮ ಧ್ಯಾನದಲ್ಲಿ ಕಂಡುಕೊಂಡರೋ ಅವನ್ನು ನಾವೀಗ ಪರಿಗಣಿಸಬಹುದು.



## ಪರಿವಿಡಿ


| | | |
|---|---|---|
| | ಮೊದಲ ಮಾತು | v |
| | ಶುಭಾಕಾಂಕ್ಷೆ | vi |
| | ಪ್ರಾಸ್ತಾವಿಕ ನುಡಿ | viii |
| | ಪೀಠಿಕೆ | x |
| | ಅರಿಕೆ | xvi |
| | ಮೂಲ ಸಂಪಾದಕರ ಪ್ರಸ್ತಾವನೆ | xvii |
| | ಸಾಮಾನ್ಯ ಸಂಪಾದಕರ ಮುನ್ನುಡಿ | xviii |
| | ಮುನ್ನುಡಿ | xx |
| | ಕೃತಜ್ಞತೆಗಳು | xxii |
| | ಪ್ರಸ್ತಾವನೆ | xxiii |
| ೧. | ಚೇತನ (ಪರಮ–ಅಗಾಧ) | ೧ |
| ೨. | ಬ್ರಹ್ಮ, ಸರ್ವವ್ಯಾಪಿಯಾದ ಸತ್ಯ | ೪ |
| ೩. | ನಮ್ಮ ಅರೆಗುರುಡು ಇಂದ್ರಿಯಗಳು | ೭ |
| ೪. | ಜಡ ಜಗತ್ತೆಲ್ಲ ಚೈತನ್ಯಮಯ | ೧೧ |
| ೫. | ಭಾರತಮಾತೆ | ೧೫ |
| ೬. | ನಾಗರಿಕತೆಯ ಪರಾಕಾಷ್ಠೆ | ೧೯ |
| ೭. | ಭಾರತೀಯ ಧರ್ಮ ಮತ್ತು ಸಂಸ್ಕೃತಿಯ ಸಾರ | ೨೧ |
| ೮. | ಕರ್ಮ ಮತ್ತು ಪುನರ್ಜನ್ಮ | ೨೪ |
| ೯. | ಸ್ವಾತಂತ್ರ್ಯ ಮತ್ತು ಸಹನೆ | ೨೬ |

Blank Page

# ಭಾರತದ ಅಮೂಲ್ಯ ಪರಂಪರೆ

## ೧. ಚೇತನ (ಪರಮ – ಅಗಾಧ)

ನಾವು ಎಲ್ಲಕ್ಕಿಂತ ಮೊದಲು ಅರಿಯಬೇಕಾದದ್ದು, ನಮ್ಮ ವಿಚಾರಗಳಿಗೆ ತಳಹದಿಯಾದ ಒಂದು ಪರಮ ಶಾಶ್ವತ ಚೇತನ. ಅದು ವಿಶ್ವವ್ಯಾಪಿ. ನಮ್ಮ ಕಣ್ಣಿಗೆ ಕಾಣುವ ಈ ಭೌತಿಕ ಪ್ರಪಂಚವು ಮೈದೋರಿದ ಆ ಚೇತನವೇ ಸರಿ.

ಮೂರು ಸಾವಿರ ವರ್ಷಗಳ ಹಿಂದೆಯೇ ಭಾರತವು ಈ ಸತ್ಯವನ್ನು ಅದರ ಸಂಪೂರ್ಣಾರ್ಥದಲ್ಲಿ ವಿಶದವಾಗಿ ತಿಳಿದುಕೊಂಡಿದ್ದಿತು. ಇಂದಿನ ಅತ್ಯಂತ ನಾಗರಿಕವಾದ ದೇಶಗಳಿಗಿಂತ ಹೆಚ್ಚು ಆಳವಾಗಿ ಅದನ್ನು ಅರಿತಿದ್ದಿತು. ನಾವಿದನ್ನು ಒಂದು ತತ್ವವೆಂದು ಕರೆಯಬಹುದು ಅಥವಾ ಪುನರ್ ಸೃಷ್ಟಿ ಎನ್ನಬಹುದು, ಅಥವಾ ಮಹಾ ಚೇತನವೆನ್ನಬಹುದು ಅಥವಾ ದೈವವೆಂದರೂ ಸರಿಯೆ – ಎಲ್ಲವೂ ನೀವು ಕಂಡಂತೆ ಅದರ ಸ್ವರೂಪವನ್ನು ಬಿಂಬಿಸುತ್ತದೆ.

> "ಬೆಂಕಿಯ ಜ್ವಾಲೆಯಾಗಿ ಉದಯಗೆ ಉರುಳಿ
> ಹರಳಾಗಿ ಜೀವಕೋಶವಿದೆ
> ಬಳುಕುವ ಮೀನ ಸರೀಸೃಪವಾಗಿ
> ಗವಿ ಗಹ್ವರಗಳಲಿ ಮಾನವನಾಗಿ
> ಸತ್ಯ ಶಿವ ಸೌಂದರ್ಯ ಬೋಧೆಯಲಿ
> ಮೃಣ್ಮೀಯ ಜೀವಿತಕೆ ವಿಮುಖನಾದೆ
> ಹಲವರು ಕರೆದರಿದವು ವಿಕಸನವೆಂದು
> ಕೆಲರುಲಿದರು ಇದನು ದೈವವೆಂದು"

ಖಚಿತವಾಗಿ ಹೇಳುವುದಾದರೆ ಚೇತನ ಒಂದೇ ಸಾರ್ವಕಾಲಿಕವಾದ ಸತ್ಯ. ಅದು ವಿನಃ ಭೌತ ಜಗತ್ತಿನ ಅನಂತವಾದ ರಹಸ್ಯಗಳನ್ನು ಲೌಕಿಕವಾದ ಶಬ್ದಗಳಲ್ಲಿ ವಿವರಿಸಲಾಗದು. ಲೊರೆನ್ ಈಸ್ಲಿ (Loren Elsely)ಯ ಮಾತುಗಳಲ್ಲಿ ಹೇಳುವುದಾದರೆ, "ನಲವತ್ತೈದು ವರ್ಷಗಳ ನನ್ನ ಬದುಕಿನಲ್ಲಿ ಯಾವುದರಿಂದ ನನ್ನ ಶರೀರವು ರೂಪುಗೊಂಡಿದೆಯೋ, ಆ ಅಣುಗಳೂ ಪರಮಾಣುಗಳೂ ಓಡುತ್ತ ಆಡುತ್ತ ನರ್ತಿಸುತ್ತ ಬೇರೆ ಇನ್ನಾವುದರಲ್ಲೋ ಸೇರಿಕೊಳ್ಳಲು ಹೊರಟು

ಹೋಗಿವೆ. ಹೊಸ ಅಣು ಪರಮಾಣುಗಳು, ಹುಲ್ಲಿನಿಂದಲೂ, ಪ್ರಾಣಿಗಳ ಶರೀರದಿಂದಲೂ ಹೊರಟು ನನ್ನೊಳಗೆ ಬಂದು ನಾನಾಗಿ ಉಳಿದಿವೆ. ಆದರೂ ನನಗೆ ಅವುಗಳೆಲ್ಲದರ ನೆನಪಿದೆ. ಇಪ್ಪತ್ತು ವರ್ಷಗಳ ಹಿಂದಿನ ಆ ಪ್ರೀತ್ಯಾಸ್ಪದವಾದ ಮುಖ ಇನ್ನೂ ನನ್ನ ಮುಂದೆ ಉಳಿದಿದೆ."

ಮನುಜನ ಒಂದು ಯುವ ಶರೀರದಲ್ಲಿ ಸಾವಿರಾರು ಕೋಟಿ ಜೀವಕೋಶಗಳಿವೆ. ಪ್ರತಿಯೊಂದು ಕೋಶವೂ ಕುರುಡು ಮತ್ತು ಇಂದ್ರಿಯಾನುಭವವಿಲ್ಲದುದು. ಆದರೂ ಅಸೀಮವಾದ ಕತ್ತಲೆಯ ದುಡಿಮೆಯಲ್ಲಿಯೂ ಪರಸ್ಪರ ಸಹಕರಿಸುತ್ತ ಅಖಂಡ ಕೋಶಗಳ ಕ್ಷೇಮದಲ್ಲಿ ಅವು ಮಗ್ನವಾಗಿವೆ. ಚಾರ್ಲ್ಸ್ ಶೆರಿಂಗ್‌ಟನ್ (Charles Sherrington) ಎಂಬ ಸುಪ್ರಸಿದ್ಧ ಶರೀರ ಶಾಸ್ತ್ರ ಪ್ರವೀಣನು ಹೇಳುವಂತೆ "ಯಾವುದೋ ಬಿಂದು ಅನನ್ಯವಾದ ತತ್ವದಿಂದ ಸ್ಫೂರ್ತಿಹೊಂದಿ ಪ್ರತಿಯೊಂದು ಜೀವಕೋಶವೂ ತನ್ನೊಳಗಿನ ತಿಳುವಳಿಕೆಯಿಂದ ಒಂದು ರಚನೆಯನ್ನು ಸಾಧಿಸುವುದರಲ್ಲಿ ಮಗ್ನವಾಗಿರುವಂತೆ ಕಾಣುತ್ತದೆ." ಸರ್ ಅರ್ಥರ್ ಎಡಿಂಗ್‌ಟನ್‌ನು (Sir Arther Eddington) ಇದೇ ಅರ್ಥ ಬರುವಂತಹ ಮಾತುಗಳನ್ನಾಡಿದ್ದಾನೆ. "ಭೌತ ವಿಜ್ಞಾನಗಳು ತಮ್ಮ ವಿಸ್ತಾರವನ್ನು ಪರಿಮಿತಿಗೊಳಿಸಿ, ತಮ್ಮ ಹಿನ್ನೆಲೆಯೊಳಗೆ ನೂತನ ಅರ್ಥವನ್ನು ಕಾಣುವುದಕ್ಕೆ ಅಥವಾ ತಾವು ಬಯಸುವ ಅರ್ಥವನ್ನು ಆಮದು ಮಾಡಿಕೊಳ್ಳುವುದಕ್ಕೆ ಸ್ವಾತಂತ್ರ್ಯವನ್ನು ಅವಕಾಶವನ್ನು ಕೊಟ್ಟಿವೆ" ಎನ್ನುತ್ತಾನೆ. ಭಾರತೀಯ ಸಂಸ್ಕೃತಿ ತನ್ನ ಅತ್ಯುನ್ನತವಾದ ಮಜಲನ್ನು ಮುಟ್ಟಿದ ಸಂದರ್ಭದಲ್ಲಿ ಆ ಪರಮ ಶ್ರೇಷ್ಠ ಋಷಿಗಳು, ನಮ್ಮ ಆಧುನಿಕ ವಿಜ್ಞಾನಕ್ಕೆ ತಳಹದಿಯಾಗಬಲ್ಲ, ಆಧಾರವಾಗಿ ಇರಬಲ್ಲ ವಿಚಾರಗಳನ್ನು ತಿಳಿಸಿದ್ದರು.

ಅಸತೋ ಮಾ ಸದ್ಗಮಯ – ಅಸತ್ಯದಿಂದ ಸತ್ಯದ ಕಡೆಗೆ
ತಮಸೋಮಾ ಜ್ಯೋತಿರ್ಗಮಯ – ಕತ್ತಲೆಯಿಂದ ಬೆಳಕಿನೆಡೆಗೆ
ಮೃತ್ಯೋರ್ಮಾ ಅಮೃತಂ ಗಮಯ – ಅಳಿವಿನಿಂದ ಶಾಶ್ವತದ ಕಡೆಗೆ ನಮ್ಮನ್ನು ನಡೆಸು

ಉಪನಿಷತ್ ಹೇಳಿಕೆಯನ್ನು ವಿಚಾರ ಮಾಡಬಹುದು.

ಉಪನಿಷತ್ ನಮಗೆ ತಿಳಿಸಿಹೇಳುವ ಒಂದು ಮುಖ್ಯ ಪಾಠ ಯಾವುದೆಂದರೆ, 'ನಿತ್ಯವು ಸೃಷ್ಟಿಕರ್ತನ ಭಾವನೆ'. ಈ ಮಾತಿನಿಂದ ಅದು ಭೌತಜಗತ್ತಿನ ಸೃಷ್ಟಿಯನ್ನು ಕುರಿತ ನಮ್ಮ ಚರ್ಚೆಯನ್ನೆಲ್ಲ ವ್ಯರ್ಥವೆಂದು ತೂರಿಬಿಡುತ್ತದೆ. ದೇಶ ಕಾಲಗಳನ್ನು ಅನಂತ ಮತ್ತು ಅಗಾಧವೆಂದು ಉಪನಿಷತ್ತುಗಳು ಹೇಳುತ್ತವೆ. ಇದಕ್ಕೆ ಆಧುನಿಕ ವಿಜ್ಞಾನ ಸಂಪೂರ್ಣವಾಗಿ ಸಮ್ಮತಿಸುತ್ತದೆ. ಭಾರತದಲ್ಲಿರುವ ಅತಿದೊಡ್ಡ ರೈಲ್ವೆ ನಿಲ್ದಾಣದಲ್ಲಿ ಐದಾರು ಸೂಕ್ಷ್ಮಾತಿ ಸೂಕ್ಷ್ಮ ಧೂಳಿನ ಕಣಗಳಿವೆ ಎಂದುಕೊಳ್ಳಿ. ಅದು ಕಿಕ್ಕಿರಿದಂತೆ ನಮಗೆ ಭಾಸವಾಗುವುದೆ? ಅನಂತ ಅಗಾಧ ವಿಶ್ವದಲ್ಲಿರುವ



ನಕ್ಷತ್ರ ನೀಹಾರಿಕೆಗಳ ಸಂಖ್ಯೆ ಏನೂ ವಿಶ್ವದ ವಿಸ್ತಾರ ಮತ್ತು ಆಳಕ್ಕೆ ಕಿಕ್ಕಿರಿದಂತೆ ಭಾಸವಾಗುವುದಿಲ್ಲ. ಅದಕ್ಕಿಂತ ರೈಲ್ವೇ ನಿಲ್ದಾಣದ ಧೂಳಿನ ಕಣಗಳ ಕಿಕ್ಕಿರಿತವೇ ಅಧಿಕ. ನಿಮ್ಮ ಬಿಂದು ಕೈ ಅಳತೆಯ ದೂರದಲ್ಲಿ ಒಂದು ಬಿಡಿಗಾಸನ್ನು ಹಿಡಿದುಕೊಂಡಾಗ, ಆ ಕಾಸು ನಿಮ್ಮ ದೃಷ್ಟಿಗೆ ಮುನ್ನೂರೈವತ್ತು ಜ್ಯೋತಿರ್ವರ್ಷಗಳ ಆಚೆಗಿರುವ ಸಾವಿರಾರು ನಕ್ಷತ್ರ ನೀಹಾರಿಕೆಗಳನ್ನು ಮರೆ ಮಾಡುತ್ತದೆ.

ವೇದಗಳು ಮಾನವ ಶರೀರದೊಳಗಿನ ಸೂಕ್ಷ್ಮ ಶರೀರವನ್ನು ಒತ್ತಿ ಹೇಳುತ್ತವೆ. ಆಧುನಿಕ ವಿಜ್ಞಾನದ ಪ್ರಕಾರ ಇದು ಆತ್ಮವೆಂದು ಇಂದ್ರಿಯಾತೀತವಾದ ಅನುಭವದ ವಿಚಾರವೆಂದೂ ತಿಳುವಳಿಕೆ. ಅಲ್ಲದೆ ಸೂಕ್ಷ್ಮ ಶರೀರದ ಇರವು ಮತ್ತು ಚೇತನ, ಅನಂತವೂ ಅಗಾಧವೂ ಆದುದು. ಹೀಗೆ ಬೆಳಗುತ್ತಿರುವ ತತ್ವಶಾಸ್ತ್ರದ ಪ್ರಕಾರ ಜಡರೂಪವು ಗಣನೆಗೇ ಬಾರದುದು. ಡಾ. ಐನ್‌ಸ್ಟೀನನ ವಿಚಾರಗಳನ್ನು ಇಲ್ಲಿ ಹೋಲಿಸಿ ನೋಡಬಹುದು ನಾವು. "ಆದ್ದರಿಂದ ಕ್ಷೇತ್ರವು ಅಲ್ಲಲ್ಲಿ ಮುದುರಿ ಜಡರೂಪವಾಗಿ ಕಾಣುತ್ತದೆ ಎಂದೂ, ಭೌತಶಾಸ್ತ್ರದ ಈ ಹೊಸ ಪರಿಧಿಯಲ್ಲಿ ಕ್ಷೇತ್ರ ಮತ್ತು ಜಡಗಳೆರಡಕ್ಕೂ ಅವಕಾಶವಿಲ್ಲವೆಂದೂ ತಿಳಿಯಬಹುದು. ಏಕೆಂದರೆ ಕ್ಷೇತ್ರ ಒಂದೇ ಸತ್ಯ".

* * * *

# ೨. ಬ್ರಹ್ಮ, ಸರ್ವವ್ಯಾಪಿಯಾದ ಸತ್ಯ

ಮನುಷ್ಯನ ತಿಳುವಳಿಕೆಯ ಸಂಪೂರ್ಣ ಇತಿಹಾಸದಲ್ಲಿ ಪ್ರಾಚೀನ ಭಾರತೀಯರ 'ಬ್ರಹ್ಮ' ತತ್ವದಂತಹ ಆಳವಾದ ಮಹತ್ತರವಾದ ಕಲ್ಪನೆ ಇನ್ನೊಂದಿಲ್ಲ. ಸಮಸ್ತ ಸೃಷ್ಟಿಯ ಆಳದಲ್ಲಿ ಒಂದು ಏಕತೆಯಿದೆ. ಅದರ ಎಲ್ಲ ಶಾಖೋಪಶಾಖೆಗಳು ಒಂದಕ್ಕೊಂದು ಸಂಬಂಧಿಸಿಯೂ, ಅವಲಂಬಿಸಿಯೂ ಇವೆ. ಬ್ರಹ್ಮವು ಒಂದು ಅತ್ಯುನ್ನತವಾದ ಸರ್ವವ್ಯಾಪಿಯಾದ ಸತ್ಯ. ಸಮಸ್ತ ಸೃಷ್ಟಿಯ ತಿರುಳು. ಐನ್‌ಸ್ಟೈನನು ದಶಕಗಳ ಕಾಲ ಏಕೀಕೃತ ತತ್ವದ ಬಗೆಗೆ, ಅಂದರೆ ಬ್ರಹ್ಮನ ಒಂದು ಅಂಶದ ಬಗೆಗೆ ದುಡಿದನು ಎನ್ನಬಹುದು.

ಡಾ. ಜಗದೀಶ್ ಚಂದ್ರಬೋಸರು ತಮ್ಮದೇ ಹೆಸರಿನ ಒಂದು ಸಂಸ್ಥೆಯನ್ನು ಉದ್ಘಾಟಿಸುತ್ತ ಹೀಗೆಂದರು, "ನಾನು ಇಂದಿಗೆ ಈ ಸಂಸ್ಥೆಯನ್ನು ಒಂದು ಪ್ರಯೋಗಾಲಯವೆಂದಲ್ಲ ದೇವಸ್ಥಾನವೆಂದು ತಿಳಿದು ಜನತೆಗೆ ಸಮರ್ಪಿಸಿದ್ದೇನೆ. ಜ್ಞಾನದ ಅನ್ವೇಷಣೆಯಲ್ಲಿ, ನಾನು ಅರಿಯದೆ ಭೌತವಿಜ್ಞಾನ ಮತ್ತು ಶರೀರ ವಿಜ್ಞಾನಗಳ ಪರಿಧಿಯೊಳಗೆ ಕಾಲಿಟ್ಟಿದ್ದೇನೆ. ಜಡ ಮತ್ತು ಚೇತನಗಳ ಸಾಮ್ರಾಜ್ಯವು ಹೊಂದಿಕೊಂಡಿದ್ದುದನ್ನು, ಅವೆರಡರ ನಡುವಿನ ಎಲ್ಲೆ ಮಾಯವಾಗಿದ್ದುದನ್ನು ಕಂಡು ಆಶ್ಚರ್ಯಚಕಿತನಾದೆನು. ಜಡಪದಾರ್ಥವು ನಿಷ್ಕ್ರಿಯವಾಗೇನೂ ಇರಲಿಲ್ಲ. ಪ್ರಚಂಡವಾದ ಶಕ್ತಿಯಿಂದ ಅದು ಕ್ರಿಯಾಶೀಲವಾಗಿದ್ದುದನ್ನು ಕಂಡು ರೋಮಾಂಚಿತನಾದೆ. ಕಾಲಾನುಕಾಲಕ್ಕೆ ಪ್ರಪಂಚದ ಪ್ರಮುಖ ವೈಜ್ಞಾನಿಕ ಸಂಸ್ಥೆಗಳು ನನ್ನ ವಾದಗಳನ್ನು, ನಾನು ಕಂಡುಕೊಂಡ ಸತ್ಯಗಳನ್ನು ಗುರುತಿಸಿದವು. ವಿಜ್ಞಾನಕ್ಕೆ ಭಾರತೀಯರ ಕೊಡುಗೆಯ ಮಹತ್ವವನ್ನು ಅವು ಅರಿತವು. ಎಂದಿಗಾದರೂ ಅಲ್ಪವಾದದ್ದೂ ಪರಿಮಿತವಾದದ್ದೂ ಭಾರತೀಯ ಮನಸ್ಸಿಗೆ ಸಮಾಧಾನವನ್ನು ಕೊಡಬಹುದೆ? ಸತತವಾದ ಜೀವಂತ ಪರಂಪರೆಯಿಂದ, ಸತ್ವಯುತವಾದ ಶಕ್ತಿಯಿಂದ ಪುನರುಜ್ಜೀವನಗೊಳ್ಳುತ್ತ ಈ ದೇಶವು ಎಣಿಕೆಗೂ ಮೀರಿ ಪರಿವರ್ತನೆಗೊಂಡಿದೆ. ಭಾರತೀಯರು ತತ್ಕಾಲದ ಆಮಿಷಗಳನ್ನು ತೊರೆದು ಯಾವಾಗಿನಂತೆಯೇ ಜೀವನದ ಅತ್ಯುನ್ನತವಾದ ಆದರ್ಶಗಳ ಸಾಧನೆಯ ಕಡೆಗೆ ಕೈನೀಡಿದ್ದಾರೆ – ಅನಾಸಕ್ತಿಯ ತ್ಯಾಗದಿಂದಲ್ಲ. ಸಕ್ರಿಯವಾದ ಹೋರಾಟಗಳ ಮೂಲಕ –".

ಎಮರ್ಸನ್ನನು ಬ್ರಹ್ಮತತ್ವದಿಂದ ಆಕರ್ಷಿತವಾಗಿದ್ದನು. "ಎಲ್ಲ ವಿಜ್ಞಾನವು



ಇಂದ್ರಿಯಾತೀತವಾದುದು. ಹಾಗಿಲ್ಲದ ಪಕ್ಷಕ್ಕೆ ಅದು ನಶ್ವರವೇ ಸರಿ. ಸಸ್ಯಶಾಸ್ತ್ರದ ಇತ್ತೀಚಿನ ಗ್ರಹಿಕೆ ಸರಿಯಾದುದು. ಇನ್ನು ಮುಂದೆ ಪ್ರಕೃತಿ ವಿಜ್ಞಾನದ ಪಠ್ಯ ಗ್ರಂಥಗಳಲ್ಲಿ ಬ್ರಹ್ಮನ ಅವಸ್ಥಾಂತರಗಳನ್ನು ಕುರಿತು ಹೇಳಲೇ ಬೇಕಾಗುತ್ತದೆ."

ಭಾರತೀಯ ಋಷಿಗಳಿಗೆ ಧ್ಯಾನಗೋಚರವಾದ ವಿಶ್ವ ಏಕರೂಪತೆಯು ಆಧುನಿಕ ಭೌತವಿಜ್ಞಾನಿಗಳಿಗೆ ಇಂದು ಪ್ರಮುಖ ಸತ್ಯವಾಗಿ ಗೋಚರಿಸುತ್ತದೆ. ಜಾನ್ ವೀಲರನಂತಹ ಪ್ರಮುಖ ವಿಜ್ಞಾನಿಗಳ ಅಭಿಪ್ರಾಯದಂತೆ, "ಆಧುನಿಕ ವಿಜ್ಞಾನದಲ್ಲಿ ಗಮನಿಸುವವನ ಮತ್ತು ಗಮನಕ್ಕೆ ಒಳಪಟ್ಟಿದ್ದರ ನಡುವೆ ಭೇದವು ಇಲ್ಲದೇ ಹೋಗಿದೆ. ಹಾಗಾಗಿ ನಾವು 'ಗಮನಿಸುವವ' ಎಂಬ ಶಬ್ದಕ್ಕೆ ಪ್ರತಿಯಾಗಿ 'ಭಾಗವಹಿಸುವವ' ಎನ್ನಬೇಕು. ಒಂದು ವಿಚಿತ್ರವಾದ ರೀತಿಯಲ್ಲಿ ಭಾಗವಹಿಸುವವನು ವಿಶ್ವದ ಭಾಗವೇ ಆಗಿಬಿಟ್ಟಿದ್ದಾನೆ."

ವ್ಯಕ್ತಿ ಮತ್ತು ವಸ್ತುಗಳು ಒಂದೇ ಎಂದು, ಅವು ಭಿನ್ನತೆಯಿಲ್ಲದ ಏಕಮೇವ ಸ್ವರೂಪವೆಂದೂ ಉಪನಿಷತ್ತುಗಳು ನಮಗೆ ಕಲಿಸಿವೆ:

"ಎಲ್ಲಿ ದ್ವಂದ್ವವಿದೆಯೊ ಅಲ್ಲಿ ಒಂದು ಇನ್ನೊಂದನ್ನು ಕಾಣುವಂತೆ, ಒಂದು ಇನ್ನೊಂದರ ಗಂಧವನ್ನು ಗ್ರಹಿಸುವಂತೆ, ಒಂದು ಇನ್ನೊಂದರ ರುಚಿಯನ್ನು ಸವಿಯುವಂತೆ ತೋರುತ್ತದೆ....... ಆದರೆ ಎಲ್ಲಿ ಪ್ರತಿಯೊಂದೂ ಏಕಮೇವಾದ್ವಿತೀಯವಾಗಿರುವುದೋ ಅಲ್ಲಿ ಯಾವುದನ್ನು ಯಾವುದು ನೋಡುತ್ತದೆ? ಯಾವುದರ ಗಂಧವನ್ನು ಯಾವುದು ಗ್ರಹಿಸುತ್ತದೆ? ಯಾವುದರ ಸವಿಯನ್ನು ಯಾವುದು ಸವಿಯುತ್ತದೆ"?

ಶ್ರೀ ಅರವಿಂದೊ ಅವರು ತಮ್ಮ ದೃಷ್ಟಿಯಲ್ಲಾದ ಒಂದು ಸೂಕ್ಷ್ಮ ಬದಲಾವಣೆಯನ್ನು ಕುರಿತು ಹೇಳುತ್ತಾರೆ. ಅಲ್ಲಿ ನಾಲ್ಕನೆಯದೊಂದು ಆಯಾಮ ಅವರ ನೋಟಕ್ಕೆ ಒದಗಿದೆ. ಭಾರತೀಯ ಅನುಭಾವಿಗಳ ಪ್ರತಿಭೆಯು ಅವರಿಗೆ ನಾನಾ ಆಯಾಮಗಳನ್ನುಳ್ಳ ಸತ್ಯವನ್ನು ಅರಿಯುವಂತೆ ಮಾಡಿತು. ಆಧುನಿಕ ಸಾಪೇಕ್ಷತಾವಾದಕ್ಕೆ ತಳಹದಿಯಾಗಿದ್ದ, ಕಾಲ ದೇಶಗಳನ್ನು ಒಳಗೊಂಡ ಅಖಂಡ ದ್ರವ್ಯವು ಅದೇ ಆಗಿತ್ತು.

ಮೇಧಾವಿಯಾದ ಶ್ರೀ ಡಿ. ಟಿ. ಸುಜುಕಿಯು, ಮಹಾಯಾನ ಬೌದ್ಧಮತದ ಅವತಂಸಕ ಪಂಥದ ವಿಶೇಷತೆಯನ್ನು ಕುರಿತು ಹೇಳುತ್ತ "ನಾನು ಒಮ್ಮೆಯಾದರೂ ವ್ಯಕ್ತಿ ಮತ್ತು ವಸ್ತುವಿನ ನಡುವೆ, ಮನಸ್ಸು ಮತ್ತು ಶರೀರದ ನಡುವೆ ಇರುವ ಭೇದವು ಸಂಪೂರ್ಣ ಬಯಲಾಗಿಹೋದುದನ್ನು ಅಥವಾ ಕರಗಿಹೋದದ್ದನ್ನು ಅನುಭವಿಸದೆ ಹೋದರೆ, ಈ ತತ್ವಗಳು ನಮಗೆ ಅರ್ಥವಾಗುವುದಿಲ್ಲ" ಎಂದಿದ್ದಾನೆ. "ನಮ್ಮ ಸುತ್ತಣ ನೋಟಕ್ಕೆ ಒಂದು ವಸ್ತು ಇನ್ನೊಂದರೊಡನೆ ಸಂಬಂಧ ಹೊಂದಿರುವುದು ಆಕಾಶ (space)"ದಲ್ಲಿ ಮಾತ್ರವಲ್ಲ ಲೌಕಿಕದಲ್ಲಿಯೂ ಸಹ.....

ನಮ್ಮ ಅನುಭವವನ್ನು ಪ್ರಾಮಾಣಿಕವಾಗಿ ಹೇಳುವುದಾದರೆ ಕಾಲವಿಲ್ಲದ ದೇಶವಿಲ್ಲ, ದೇಶವಿಲ್ಲದ ಕಾಲವೂ ಇಲ್ಲ. ಅವು ಒಂದರೊಡನೊಂದು ಸೇರಿಹೋಗಿವೆ.

ವೇದಾಂತವು ಆತ್ಮಾಭಿವೃದ್ಧಿಯ (ಪರಿಷ್ಕರಣೆಯ) ಮಾರ್ಗವನ್ನೂ ಕಲಿಸಿತು. ಮನುಷ್ಯನಿಗೆ ಸ್ವಸ್ವರೂಪವನ್ನು ಅರಿಯುವುದೇ ಅವನ ಅಂತಿಮ ಧ್ಯೇಯ. ಏಕೆಂದರೆ ಪರಿವರ್ತನಶೀಲತೆಯ ಹಿನ್ನೆಲೆಯಲ್ಲಿ ಹುದುಗಿರುವ ಪರಿಪೂರ್ಣತೆಯನ್ನು, ಅರಿವಿನ ಹಿಂದೆ ಅಡಗಿರುವ ಶಾಶ್ವತತೆಯನ್ನು, ಛಾಂದೋಗ್ಯ ಉಪನಿಷತ್ತು ಮಹತ್ತರವಾದ ಜ್ಞಾನವನ್ನು ಮೂರು ಶಬ್ದಗಳಲ್ಲಿ ಅಡಕಮಾಡಿ ತಿಳಿಸಿದೆ. ಅನಂತ ಚೇತನದ ಒಂದು ಅಂಶವೇ ಮಾನವನ ಆತ್ಮ (ಆತ್ಮವು ಪರಿಮಾತ್ಮನ ಅಂಶ) ತತ್–ತ್ವಂ–ಅಸಿ. ಅದು ನೀನೇ ಆಗಿರುವೆ.

ವೇದಾಂತವು ಇದೇ ವಿಚಾರವನ್ನು ಸುಂದರವಾಗಿ ಹೇಳುತ್ತ "ಸಂವಿತ್ ಅಥವಾ ಪರಿಶುದ್ಧಾತ್ಮವು ದ್ವಂದ್ವಾತೀತವಾದುದು. ಶಾಶ್ವತ ಸ್ವಯಂಪ್ರಭೆಯುಳ್ಳದ್ದು. ಭೂತಭವಿಷ್ಯದ್ವರ್ತಮಾನಗಳಲ್ಲಿಯಾಗಲೀ, ದಿನ, ತಿಂಗಳು, ವರ್ಷ, ಯುಗಗಳಲ್ಲಿಯಾಗಲಿ ಅದಕ್ಕೆ ಹುಟ್ಟು ಸಾವುಗಳಿಲ್ಲ".

* * * *



## ೩. ನಮ್ಮ ಅರೆಗುರುಡು ಇಂದ್ರಿಯಗಳು

ನಮ್ಮ ಸಂಸ್ಕೃತಿಯು ನಮಗೆ ಕಲಿಸುವ ಮೊದಲನೆಯ ಪಾಠವೆಂದರೆ, ನಮ್ಮ ಕಣ್ಣು ಮತ್ತು ಇತರ ಇಂದ್ರಿಯಗಳ ಮೂಲಕ, ನಮ್ಮ ಬುದ್ಧಿಗೆ ಗೋಚರವಾಗುವ ವಿಷಯಗಳು ನಮಗೆ ಸ್ಪಷ್ಟವೆಂದೂ, ವಿಶದವೆಂದೂ ತೋರಿದರೂ ಅದು ಪರಮಸತ್ವದ ಬಿಂದು ಕಣವೂ ಆಗಿರುವುದಿಲ್ಲ ಎಂಬುದೇ ಆಗಿದೆ. ನಿಮ್ಮ ಅಂತರಾತ್ಮವನ್ನು ನೀವು ಬಡಿದೆಚ್ಚರಿಸಿದಾಗ ಮಾತ್ರ ನಿಮಗೆ ಮಣ್ಣಿನ ಕಣಗಳೊಳಗೆ ಹುದುಗಿರುವ –

"ಉದಿಸಲಿರುವ ಹಗಲಿನ ಜ್ವಾಲೆಯ ರೋಮಾಂಚನವೂ ಸರ್ವವ್ಯಾಪಿಯಾದ ಅದರ ನಿಗೂಢತೆಯೂ" ಅರಿವಿಗೆ ಬಂದೀತು.

ಒಂದು ಜೀವಮಾನವೆಲ್ಲ ವ್ಯಾಸಂಗ ಮಾಡಿದರೂ ಅರಿಯಲು ಸಾಧ್ಯವಿಲ್ಲದ, ಪ್ರಯೋಗಶಾಲೆಗಳ ಪ್ರಯೋಗಗಳಿಗೆ ನಿಲುಕದ ಅರಿವು ಒಂದು ಅಧ್ಯಾತ್ಮಯೋಗದ ಅನುಭಾವದಲ್ಲಿ ನಮಗೆ ದೊರಕಬಹುದು. ನಮ್ಮ ಅಪರಿಪೂರ್ಣವಾದ ಬುದ್ಧಿಯೂ, ಪರಿಮಿತವಾದ ಇಂದ್ರಿಯಗಳೂ ಅರಿಯಲಾರದ ಸಂಗತಿಗಳನ್ನು ಚೇತನವು ಅರಿಯಬಲ್ಲದು.

ಕೆಂಪು ಬೆಳಕಿನ ತರಂಗಾಂತರವು ೦.೦೦೦೦೭ ಸೆಂ.ಮೀ. ನೀಲವರ್ಣದ ಬೆಳಕಿನ ತರಂಗಾಂತರವು ೦.೦೦೦೦೪ ಸೆಂ.ಮೀ. ಮನುಷ್ಯರ ಕಣ್ಣಿನ ಸೂಕ್ಷ್ಮತೆಯು ವಿಕಿರಣದ ಈ ಅಲ್ಪಭಾಗಕ್ಕೆ ಮಾತ್ರ ಅಂದರೆ ಕೆಂಪು ಮತ್ತು ನೀಲಿಯ ನಡುವಿಗೆ ಸೀಮಿತವಾಗಿದೆ. ಒಂದು ಸೆಂಟಿಮೀಟರಿನ ಮೂರನೆಯ ಒಂದು ಭಾಗದ, ಸಾವಿರದ ಒಂದು ಭಾಗದ ವ್ಯತ್ಯಾಸವು, ಗೋಚರ ಅಗೋಚರಗಳ ನಡುವಿನ ವ್ಯತ್ಯಾಸವನ್ನು ಉಂಟುಮಾಡಿದೆ. ಒಬ್ಬ ಪ್ರಸಿದ್ಧ ವಿಜ್ಞಾನಿಯು ಅಭಿಪ್ರಾಯಪಟ್ಟಂತೆ,

"ನಮ್ಮ ಕಣ್ಣಿಗೆ ಗೋಚರವಾಗುವ ಬೆಳಕಿಗೆ ಹಗಲಾಗಿ, ಕ್ಷ–ಕಿರಣಗಳನ್ನು ಗ್ರಹಿಸುವ ಶಕ್ತಿಯಿದ್ದರೆ, ನಮಗೆ ನಮ್ಮ ಸುತ್ತಣ ಪ್ರಪಂಚ ಬೇರೆಯೇ ರೀತಿಯಲ್ಲಿ ಕಾಣುತ್ತಿತ್ತು. ಒಂದು ಬ್ಲೇಡಿನ ಅಲಗು ಗರಗಸದಂತೆ ತೋರಬಹುದಾಗಿತ್ತು. ಈಗ ನಮ್ಮ ಕಣ್ಣಿಗೆ ಯಾವುದು ಅಪಾರದರ್ಶಕವೋ ಅದು ಪಾರದರ್ಶಕವಾಗಿಯೂ, ರಂಧ್ರಮಯವಾಗಿಯೂ ತೋರಬಹುದಾಗಿತ್ತು. ನಾವು ಒಬ್ಬ ಮನುಷ್ಯನನ್ನು ನಮಗೆ ಗೋಚರವಾಗುವ ಬೆಳಕಿಗೆ ಸ್ಪಂದಿಸಲಾರದೆ, ನೀರಾತೀತ ಕಿರಣಗಳಿಗೋ ಅಥವಾ ರಕ್ತಾತೀತ (intrared) ಕಿರಣಗಳಿಗೋ ಸಂವೇದನೆಯುಳ್ಳವನಂತೆ ಕಲ್ಪಿಸಿಕೊಂಡರೆ,

ಅವನ ಕಣ್ಣಿಗೆ ಕ್ಯಾನ್ವಾಸಿನ ಮೇಲೆ ಚಿತ್ರವೇ ಇರುವುದಿಲ್ಲ."

ತಮಗೆ ವಿಶ್ವವು ಅರ್ಥವಾಗಿಲ್ಲ ಎಂಬ ವಿಚಾರಕ್ಕೆ ವಿಜ್ಞಾನಿಗಳೆಲ್ಲರೂ ಒಮ್ಮತಕ್ಕೆ ಬಂದು ಸಮ್ಮತಿಸುತ್ತಾರೆ. ನಮ್ಮ ವಿಜ್ಞಾನಿಗಳ ತಿಳುವಳಿಕೆಯನ್ನು ಒಂದು ಮಾತಿನಲ್ಲಿ ಹೇಳಬಹುದಾದರೆ, ಐನ್‌ಸ್ಟೈನನ ಮಾತಿನಲ್ಲಿ ಹೀಗೆ ಹೇಳಬಹುದು: "ಅರ್ಥವಾಗದ ಒಂದು ಸಂಗತಿಯಿಂದ, ಅರ್ಥವಾಗದ ಇನ್ನೊಂದು ಸಂಗತಿಯನ್ನು ಪಡೆಯುತ್ತಿದ್ದೇನೆ".

ಭೌತಿಕ ಜಗತ್ತಿನ ಒಂದು ನಿಗೂಢತೆಯಿಂದ ಇನ್ನೊಂದು ನಿಗೂಢತೆಯೆಡೆಗೆ ಸಂಚಾರ ಮಾಡುತ್ತ (ಹೋಗುತ್ತ) ವಿಜ್ಞಾನವು ದಿಗ್ಭ್ರಮೆಗೊಂಡಿದೆ. ಎಡಿಸನ್ನನು ಒಮ್ಮೆ ಅಸಹಾಯಕತೆಯಿಂದ ಸೋತು ಕೂಗಿಕೊಂಡನು. "ನಮಗೆ ಯಾವ ವಿಷಯದ ಬಗ್ಗೆಯೂ ಕೋಟಿಯಲ್ಲಿ ಒಂದಂಶವೂ ತಿಳಿದುಬಂದಿಲ್ಲ".

ಶಕಲ ಭೌತ ವಿಜ್ಞಾನದ (Quantum Physics) ದಿಗ್ಗಜ ಹೈಸನ್ ಬರ್ಗ್ ತನ್ನ ಆತ್ಮ ಕಥನದಲ್ಲಿ, "ಅಣುಗಳು ರಾಶಿಗಳಲ್ಲಿ, ಪರಮಾಣುವಿನ ರಚನೆಯಲ್ಲಿ ಪಾಲ್ಗೊಳ್ಳುವ ಎಲೆಕ್ಟ್ರಾನ್‌ಗಳು ಭೌತವಿಜ್ಞಾನ ರೀತ್ಯಾ ರಾಶಿಗಳಲ್ಲ. ಅನುಮಾನಕ್ಕೆಡೆಯಿಲ್ಲದಂತೆ ವರ್ಣಿಸಬಹುದಾದರೆ ಅವುಗಳ ಪರಿಕಲ್ಪನೆಯಲ್ಲಿ ಸ್ಥಾನವಾಗಲಿ, ವೇಗವಾಗಲಿ, ಶಕ್ತಿಯಾಗಲಿ, ಗಾತ್ರವಾಗಲಿ ಇಲ್ಲ" ಎಂದಿದ್ದಾನೆ. ಪರಮಾಣುವಿನ ನೆಲೆಯಿಂದ ಯೋಚಿಸಬಹುದಾದರೆ, ದೇಶ ಮತ್ತು ಕಾಲವನ್ನೊಳಗೊಂಡ ಭೌತಿಕ ಜಗತ್ತು ಅಸ್ತಿತ್ವದಲ್ಲಿಲ್ಲ. ತಾತ್ವಿಕ ಭೌತವಿಜ್ಞಾನದಲ್ಲಿನ, ಗಣಿತದಲ್ಲಿನ ಪ್ರತೀಕಗಳು ಸಂಭಾವ್ಯತೆಯನ್ನು ಎತ್ತಿ ಹಿಡಿಯುವುದಲ್ಲದೆ ಯಥಾರ್ಥವನ್ನಲ್ಲ.

ಎಲೆಕ್ಟ್ರಾನ್‌ಗಳು ಸೋಮವಾರ, ಬುಧವಾರ, ಶುಕ್ರವಾರಗಳಲ್ಲಿ ತರಂಗ ರೂಪದಲ್ಲಿಯೂ, ಮಂಗಳ, ಗುರು, ಶನಿವಾರಗಳಲ್ಲಿ ಕಣರೂಪದಲ್ಲಿಯೂ ಇರುವಂತೆ ತೋರುತ್ತದೆ ಎಂದು ಸರ್ ವಿಲಿಯಂ ಬ್ರಾಗ್ ವಿನೋದವಾಗಿ ಹೇಳುತ್ತಿದ್ದುದುಂಟು.

ಭೌತಿಕ ಜಗತ್ತಿನ ಸ್ವರೂಪ ಲಕ್ಷಣಗಳು (The Nature of the Physical World, 1928) ಎಂಬ ತನ್ನ ಗ್ರಂಥದಲ್ಲಿ ಅರ್ಥರ್ ಎಡಿಂಗ್‌ಟನ್ನನು ಪರಿಚಯಿಸಿರುವ 'ಬರೆಯುವ ಮೇಲಿನ ದೃಷ್ಟಾಂತ'ವು ಪ್ರಸಿದ್ಧವಾಗಿದೆ. ಅದೊಂದು ಪುರಾತನವಾದ ಪೀಠೋಪಕರಣ. ಅದರ ಮೇಲೆ ಅವನು ತನ್ನ ಮೊಣಕೈಗಳನ್ನು ಬಲವಾಗಿ ಊರಿಕೊಂಡು ಬರೆಯುತ್ತಾ ಕುಳಿತಿದ್ದಾನೆ. ಅವನಿಗಾಧಾರವಾಗಿರುವುದು ಭೌತವಿಜ್ಞಾನಿಗಳು ಹೇಳುವಂತೆ ಒಂದು ಮರದ ಮೇಜು. ಆದರೆ ಸಂಪೂರ್ಣವಾಗಿ ಬಂದಾಗ ಕ್ಷೇತ್ರವನ್ನು ಒಳಗೊಂಡಿದೆ. ಅದರಲ್ಲಿ ಏನಿಲ್ಲದ ಬರಿಯ ಬಯಲೇ ಇರುವುದು – ಅದರ ತಂಬ ನೀವು ಕಲ್ಪಿಸಿಕೊಳ್ಳಲಾರದಂತಹ ಸಣ್ಣ ಸಣ್ಣ ಚುಕ್ಕೆಗಳಂತೆ ಎಲೆಕ್ಟ್ರಾನ್‌ಗಳು ತಮ್ಮ ಕೇಂದ್ರದ ಸುತ್ತ ವೇಗವಾಗಿ ಸುತ್ತುತ್ತಿದೆ. ಆದರೆ ಅವೆಲ್ಲ ಬಿಡಿ ಬಿಡಿಯಾಗಿ ತಮ್ಮ ಆಕಾರಕ್ಕೆ ಅನುಗುಣವಾದ ನೂರು ಸಾವಿರ ಕಣಗಳ ದೂರದಲ್ಲಿವೆ.



ಅವುಗಳ ನಡುವೆ ಏನೂ ಇಲ್ಲ. ಅದರ ಪರಮಾಣುವಿನ ಒಳಭಾಗವು ಬರಿದು. ಹೀಗೆ ವರ್ಣಿಸಿ ಎಡಿಂಗ್‌ಟನ್ನನು ಕೊನೆಗೆ ಉಪಸಂಹಾರ ಮಾಡುತ್ತ –

"ಭೌತವಿಜ್ಞಾನಿಯು ಪ್ರಪಂಚದಲ್ಲಿ ನಮಗೆ ಪರಿಚಿತನಾದ ಜೀವನದ ನೆರಳಿನಂತಹ ಅಭಿನಯವನ್ನು ಕಾಣುತ್ತೇವೆ. ನಮ್ಮ ಮೊಣಕೈಯ ನೆರಳು ಮೇಜಿನ ನೆರಳಿನ ಮೇಲೆ ಆಧಾರಪಟ್ಟಿದೆ. ಮಸಿಯ ನೆರಳು ಕಾಗದದ ನೆರಳಿನ ಮೇಲೆ ಓಡುತ್ತಿದೆ. ಭೌತವಿಜ್ಞಾನವು ಪ್ರಪಂಚದ ನೆರಳಿನಾಟವನ್ನು ಕುರಿತು ಅರಿಯುವ ದಿಟ್ಟತನವನ್ನು ಪಡೆದಿದೆ ಎನ್ನಲೇಬೇಕು. ಆಧುನಿಕ ತಿಳುವಳಿಕೆಗಳಲ್ಲೇ ಇದು ಅತ್ಯಂತ ವಿಶಿಷ್ಟವಾದದ್ದು."

"ಭೌತ ವಿಜ್ಞಾನವು ಹೆಚ್ಚು ಕಡಿಮೆ ಸರ್ವಸಮ್ಮತವಾಗಿ ಒಂದು ವಿಚಾರದಲ್ಲಿ ವ್ಯಾಪಕವಾದ ಒಪ್ಪಿಗೆಯನ್ನು ಪಡೆದುಕೊಳ್ಳುತ್ತಾ ಇದೆ ನಮ್ಮ ಮಹತ್ತರವಾದ ಜ್ಞಾನ ಪ್ರವಾಹವು ಯಾಂತ್ರಿಕವಾದ ಇರುವಿಕೆಯಲ್ಲಿ. ವಿಶ್ವವು ಒಂದು ಮಹತ್ತರವಾದ ಆಲೋಚನೆಯಂತಿದೆಯೇ ಹೊರತು ಒಂದು ಮಹಾಯಂತ್ರದ ಹಾಗಿಲ್ಲ" ಎಂಬುದಾಗಿ ಸರ್ ಜೇಮ್ಸ್ ಜೀನ್ಸ್‌ನು ತನ್ನ ಅವಿಸ್ಮರಣೀಯವಾದ "ರೀಡಿಲೆಕ್ಚರ್ಸ್" ಎಂಬ ಉಪನ್ಯಾಸದ ಸಂದರ್ಭದಲ್ಲಿ ತಿಳಿಸಿದ್ದಾನೆ.

ನಾವು ಕೆಳಗೆ ಕಾಣಿಸಿರುವ ಎರಡು ಹೇಳಿಕೆಗಳನ್ನು ಅಕ್ಕಪಕ್ಕದಲ್ಲಿಟ್ಟು ಗಮನಿಸಿದರೆ ಆಧುನಿಕ ಅನ್ವೇಷಣೆಗೂ ಪ್ರಾಚೀನ ಋಷಿವಾಣಿಗೂ ಇರುವ ಹೋಲಿಕೆಯು ನಮ್ಮನ್ನು ಚಕಿತರನ್ನಾಗಿಸುತ್ತದೆ. ಒಂದು ಮಹಾಭೌತವಿಜ್ಞಾನಿಯಾದ ನೀಲ್ಸ್ ಬೋರ್ ಹೇಳಿಕೆ. ಇನ್ನೊಂದು ಮಹರ್ಷಿ ಅರವಿಂದರ ಅಮೃತವಾಣಿ.

"ನಮ್ಮ ವಿಸ್ತಾರವಾದ ನೂತನ ಅನುಭವಗಳು, ಇತ್ತೀಚಿನ ವರ್ಷಗಳಲ್ಲಿ ನಮಗೆ ತಿಳಿಸುವುದೇನೆಂದರೆ ನಮ್ಮ ಸರಳ ಯಾಂತ್ರಿಕವಾದ ಪರಿಕಲ್ಪನೆಗಳಲ್ಲಿ ಇರುವ ಕೊರತೆಯು ವೇದ್ಯವಾಗುತ್ತದೆ. ಅದರ ಪರಿಣಾಮವಾಗಿ ನಾವು ನಿಂತ ನೆಲೆಯೇ ಅಲುಗಾಡಿಹೋಗಿದೆ. ನಮ್ಮ ಇದುವರೆಗಿನ ಸಾಂಪ್ರದಾಯಿಕ ವ್ಯಾಖ್ಯಾನಗಳಿಗೆ, ಅರಿವು ಯಾವ ನೆಲೆಯನ್ನು ಆಧರಿಸಿಕೊಂಡಿದ್ದವೋ ಅದರ ತಳಹದಿಯೇ ಈಗ ಕಂಪಿಸುತ್ತಿದೆ" ಎಂದು ನೀಲ್ಸ್ ಬೋರ್ ಅಭಿಪ್ರಾಯಪಟ್ಟಿದ್ದಾರೆ.

ಶ್ರೀ ಅರವಿಂದರ ಹೇಳಿಕೆ ಹೀಗಿದೆ: "ಒಬ್ಬಾತನ ಪರಿಪೂರ್ಣ ದೃಷ್ಟಿಗೆ ಪ್ರಪಂಚವು ಮೂಲದಲ್ಲಿಯೇ ಭಿನ್ನವಾಗಿ ಕಾಣತೊಡಗುತ್ತದೆ. ಸರಿಯಾಗಿ ಹೇಳುವುದಾದರೆ ಪ್ರತಿಯೊಂದೂ ತಮ್ಮ ಸ್ವರೂಪವನ್ನು ಆಕಾರವನ್ನೂ ಭಿನ್ನವಾಗಿಯೇ ತೋರ್ಪಡಿಸುತ್ತವೆ....... ಒಂದು ವಿಸ್ತಾರವೂ ಆಳವೂ ಆದ ಅನುಭವಕ್ಕೆ, ನೋಟಕ್ಕೆ, ತಿಳುವಳಿಕೆಗೆ, ಸಂಸರ್ಗಕ್ಕೆ ಒಳಪಡುತ್ತೇವೆ."

ಲಾಸ್ ಆಲ್ಮೋಸ್ ಯೋಜನೆಯ ಅಧ್ಯಕ್ಷನಾಗಿದ್ದ ಜೆ.ಆರ್. ಒಪನ್‌ಹೀಮರನು ಒಂದು ಸಂಗತಿಯನ್ನು ವಿಷಾದದಿಂದ ಒಪ್ಪಿಕೊಂಡಿದ್ದಾನೆ. "ಉದಾಹರಣೆಗೆ ಒಂದು

ಎಲೆಕ್ಟ್ರಾನ್‌ನ ಸ್ಥಾನವು ಯಾವಾಗಲೂ ಒಂದೇ ಆಗಿರುತ್ತದೆಯೇ ಎಂದು ಕೇಳಿದರೆ ನಾವು 'ಇಲ್ಲ' ಎನ್ನಬೇಕಾಗುತ್ತದೆ. ಎಲೆಕ್ಟ್ರಾನಿನ ಸ್ಥಾನವು ಕಾಲಕ್ರಮೇಣ ಬದಲಾಗುತ್ತದೆಯೇ ಎಂದು ಕೇಳಿದರೆ ನಾವು 'ಇಲ್ಲ' ಎನ್ನಬೇಕಾಗುತ್ತದೆ. ನಮ್ಮನ್ನು ಯಾರಾದರೂ ಎಲೆಕ್ಟ್ರಾನ್ ವಿಶ್ರಾಂತಿಯಲ್ಲಿದೆಯೇ ಎಂದು ಕೇಳಿದರೆ ನಾವು 'ಇಲ್ಲ' ಎನ್ನಬೇಕಾಗುತ್ತದೆ; ಹಾಗಾದರೆ ಅದು ಚಲಿಸುತ್ತಿದೆಯೇ ಎಂದು ಕೇಳಿದರೆ ನಾವು 'ಇಲ್ಲ' ಎನ್ನಬೇಕಾಗುತ್ತದೆ".

ಸಂಕುಚಿತ ಚೌಕಟ್ಟಿನಲ್ಲಿ ನಿಷೇದಾರ್ಥವುಳ್ಳದ್ದೂ, ವಿರುದ್ಧಾರ್ಥವುಳ್ಳದ್ದೂ, ಆದ ಭಾವನೆಗಳಿಂದ, ಪರಮಾಣು ವಿಜ್ಞಾನಿಯ ಯಥಾರ್ಥವಾದವು ಪೂರ್ವ ದೇಶಗಳ ಋಷಿಗಳ ದರ್ಶನದಂತೆ ಇಂದ್ರಿಯಾತೀತವಾದುದು. ಒಪನ್‌ಹೀಮರನು ಪ್ರತಿಪಾದಿಸುವ ಈ ವಿಚಾರಗಳು ಭೌತತತ್ವಗಳನ್ನು ಕುರಿತ ಉಪನಿಷತ್ತುಗಳ ಅಭಿಪ್ರಾಯಗಳನ್ನು ಪ್ರತಿಧ್ವನಿಸುತ್ತವೆ.

"ಅದು ಚಲನೆಯುಳ್ಳದು ಆದರೆ ಅಚಲ
ಅದು ದೂರವಾಗಿದೆಯೆ ಅಂದರೆ ಅಲ್ಲಿ ಹತ್ತಿರವೇ ಇದೆ
ಅದು ಎಲ್ಲದರ ಒಳಗೆ ವ್ಯಾಪಿಸಿದೆ
ಮತ್ತು ಅದು ಎಲ್ಲದರ ಹೊರಗೂ ಹರಡಿದೆ."

ತನ್ನ ಆತ್ಮಕಥನದಲ್ಲಿ ಐನ್‌ಸ್ಟೀನನು ಪರಮಾಣು ವಿಜ್ಞಾನದ ಯಥಾರ್ಥವಾದವನ್ನು ಕಂಡು ಬೆರಗುಪಟ್ಟುದನ್ನು ಹೇಳುತ್ತಾನೆ:

"ತಾತ್ವಿಕ ಭೌತ ವಿಜ್ಞಾನದ ತಳಹದಿಯ ಮೇಲೆ ಈ ಹೊಸ ಜ್ಞಾನವನ್ನು ಅರ್ಥಮಾಡಿಕೊಳ್ಳಲು ನಾನು ಪಟ್ಟ ಪ್ರಯತ್ನವೆಲ್ಲ ಸಂಪೂರ್ಣವಾಗಿ ವ್ಯರ್ಥವಾಯಿತು. ಕಾಲ್ಕೆಳಗಿನ ನೆಲವೇ ಮಾಯವಾದಂತೆಯೂ, ನಿಲ್ಲಲು ನೆಲೆಯೇ ಇಲ್ಲದಂತೆಯೂ ಭಾಸವಾಯಿತು."

ನಮ್ಮ ಋಷಿವಾಣಿ ಪುನಃ ಒತ್ತಿ ಹೇಳುವುದೇನೆಂದರೆ ವಿಶ್ವಸತ್ಯವು ನಮ್ಮ ಇಂದ್ರಿಯಗಳಿಗೆ ಗೋಚರವಾಗುವುದಿಲ್ಲ. ನಮ್ಮ ಬುರುಡೆಗಳೊಳಗಿನ ಮಬ್ಬು ಮಸ್ತಿಷ್ಕಕ್ಕೂ ಒಳಪಡುವುದಿಲ್ಲ. ಉಪನಿಷತ್ತಿನ ಈ ವಾಣಿಯನ್ನು ಕೇಳಿ:

"ಎಲ್ಲಿ ಕಣ್ಣನೋಟವು ಹೋಗಲಾಗದೋ
ಮಾತು ಮುಟ್ಟಲಾರದೋ
ಮನವು ಸಮೀಪಿಸಲಾಗದೋ ಅದನ್ನು
ನಾವು ಅರಿಯೆವು (ಅರ್ಥೈಸಲಾರೆವು)
ನಾವದನ್ನು ನಿಮಗೆ ತಿಳಿಸುವುದು ಹೇಗೆ?"

* * * *



## ೪. ಜಡ ಜಗತ್ತೆಲ್ಲ ಚೈತನ್ಯಮಯ

ಶಿವತಾಂಡವದ ಪ್ರತಿಮಾ ವಿಧಾನದಲ್ಲಿ ಸೂಚಿತವಾದಂತೆ ಚಲನಶೀಲತೆಯು ವಿಶ್ವದ ಒಂದು ಮಹಾನಿಯಮ. ಇಲ್ಲಿ ಸರ್ವದಾ ರೂಪಾಂತರವೂ ಚಲನೆಯೂ ಆಗುತ್ತಲೇ ಇರುತ್ತದೆ.

ಪ್ರಪಂಚದ ಸೃಷ್ಟಿಯನ್ನು ದೇವನು ತನ್ನೊಡಲಲ್ಲೇ ಸಮರ್ಪಿಸಿ ರೂಪಿಸಿದ್ದಾನೆ ಎಂಬ ವಿಚಾರವನ್ನು ಹಿಂದೂ ಪುರಾಣಗಳು ಪುನಃ ಪುನಃ ಸಾರುತ್ತವೆ. ಆತ್ಮತ್ಯಾಗ ಅಥವಾ ಸಮರ್ಪಣೆ ಎಂದರೆ ಮೂಲಾರ್ಥದಲ್ಲಿ ಅದು ಪೂಜ್ಯವೆಂದರ್ಥ. ಆ ಮೂಲಕ ದೇವನೇ ವಿಶ್ವವಾಗಿ ಪರಿಣಮಿಸುತ್ತಾನೆ.

ಲೀಲೆ ಎಂದರೆ ದೇವನ ಆಟ. ಅದು ಸೃಷ್ಟಿಶೀಲವಾದ ದೈವೀ ಕ್ರಿಯೆ. ಪ್ರಪಂಚವು ದೇವನ ಲೀಲಾ ವಿನೋದಕ್ಕಾಗಿ ರಚಿತವಾದ ರಂಗಸ್ಥಳ. ಬ್ರಹ್ಮನು ಮಹಾಮಾಂತ್ರಿಕ. ಅವನು ತಾನೇ ವಿಶ್ವವಾಗುತ್ತಾನೆ. ತನ್ನ ಮಾಯಾ ಸೃಷ್ಟಿ ಶಕ್ತಿಯಿಂದ ಇದನ್ನೆಲ್ಲ ಸಾಧ್ಯವಾಗಿಸುತ್ತಾನೆ. ಋಗ್ವೇದವು ಹೇಳುವ ಮಾಯಾ ಎಂಬ ಶಬ್ದಕ್ಕೆ, ಬ್ರಹ್ಮನ ಮಾಂತ್ರಿಕ ಸೃಷ್ಟಿಶಕ್ತಿ ಎಂದೇ ಅರ್ಥ. ನಾವು ದೇವನ ಅಸಂಖ್ಯಾತ ರೂಪಗಳ ಲೀಲೆಯನ್ನು ಲೋಕವೃತ್ತದೊಡನೆ ಗೊಂದಲ ಮಾಡಿಕೊಳ್ಳುವುದರಿಂದಲೇ ಅಲ್ಲ, ಅಡಗಿರುವ ಬ್ರಹ್ಮ ತತ್ವವನ್ನು ಅರಿಯಲಾರದೆ ಮಾಯಾ ಪಾಶಕ್ಕೆ ಒಳಗಾಗುತ್ತೇವೆ. ಲೋಕವೃತ್ತವನ್ನು ಸತ್ವವೆಂದು ನಂಬಿಕೊಂಡು ಮಾಯೆಗೆ ನಾವು ವಶರಾಗುತ್ತೇವೆ. ಇದು ಹೇಗೆಂದರೆ ಭೂಪಟವನ್ನೇ ದೇಶವೆಂದು ನಂಬಿಕೊಂಡ ಹಾಗೆ (ಡಾ. ಫ್ರಿಟೋಫ್‌ಕಾಪ್ರಾ)

ಋಷಿಗಳ ಪ್ರಕಾರ ದೈವಲೀಲೆಯು ಕಾಲಾಂತರಗಳ ಕಾಲ ನಡೆದ ವ್ಯವಸ್ಥಿತವಾದ ವಿಶ್ವವಿಕಾಸ. ಅಗಾಧವಾದ ಈ ವಿಶ್ವದಲ್ಲಿ ಅಸಂಖ್ಯಾತವಾದ ಸೃಷ್ಟಿಕಾರ್ಯ ನಡೆದಿದೆ. ಒಂದು ದೃಷ್ಟಿಯ ಪ್ರಾರಂಭ ಮತ್ತು ಅಂತ್ಯದ ನಡುವಿನ ಕಲ್ಪನಾತೀತವಾದ ಕಾಲಾಂತರವನ್ನು 'ಕಲ್ಪ'ವೆಂದು ಕರೆದರು. ಅವರು ನಮ್ಮ ಮನ ತತ್ತರಿಸುವಂತಹ ದೈವಲೀಲೆಯನ್ನು ಅರ್ಥಮಾಡಿಕೊಂಡಿದ್ದರು. ಎಷ್ಟೋ ಶತಮಾನಗಳ ಅನಂತರವೂ, ವೈಜ್ಞಾನಿಕ ಬುದ್ಧಿಯು ಈ ಸೃಷ್ಟಿಯ ಕಾಲವನ್ನು ಅರಿಯಲು ತಡವರಿಸುತ್ತಿರುವುದರಿಂದಲೇ, ಅಗಾಧತೆಯ ಒಂದು ಕಲ್ಪನೆ ಅರಿವಿಗೆ ಬರುವುದು ಸಾಧ್ಯವಾಗುವುದು. ಮನಕ್ಕೆ ಅಬೋಧವಾದಂತಹ ಸೃಷ್ಟಿಯ ಒಂದು ಬಹಳ

ಮುಖ್ಯವಾದ ಗುಣ ಎಂದರೆ ಋಷಿಗಳು ವಿಶದವಾಗಿ ತಿಳಿದಂತೆ ನಿರಂತರ ಚಲನಶೀಲತೆಯಿಂದ ಪ್ರವಹಿಸುವಂತಿರುವ, ರೂಪಾಂತರವನ್ನು ತಾಳುವಂತಹ ಗುಣ. ಲೀಲೆ ಎಂಬುದು ಒಂದು ಲಯಬದ್ಧವಾದ ಸಂಖ್ಯೆ. ಅದು ನಿರಂತರ, ಪರಿಭ್ರವತಾ ಶೀಲವಾಗಿ ಒಂದು ನೂರಾಗಿ, ನೂರು ಒಂದಾಗಿ ಪರಿಣಮಿಸುತ್ತಲೇ ಇರುತ್ತದೆ. ಭಗವದ್ಗೀತೆಯಲ್ಲಿ ಕೃಷ್ಣಪರಮಾತ್ಮನು ಲಯಬದ್ಧವಾದ ಸೃಷ್ಟಿಯ ಲೀಲೆಯನ್ನು ಹೀಗೆ ವರ್ಣಿಸುತ್ತಾನೆ :

(ಇಲ್ಲಿ ಸ್ವಾಮಿ ಆದಿದೇವಾನಂದರ ಅನುವಾದವನ್ನು ಬಳಸಿದೆ)

ಎಲ್ಲ ಪ್ರಾಣಿಗಳೂ ಪ್ರಳಯ ಕಾಲದಲ್ಲಿ ನನ್ನ ಪ್ರಕೃತಿಯನ್ನು ಸೇರುತ್ತವೆ. ಪುನಃ ಸೃಷ್ಟಿಯ ಕಾಲದಲ್ಲಿ ಅವುಗಳನ್ನು ನಾನು ಸೃಷ್ಟಿಸುವೆನು.

ನನ್ನ ಪ್ರಕೃತಿಯನ್ನು ಅಧಿಷ್ಠಾನವಾಗಿ ಮಾಡಿಕೊಂಡು, ಪ್ರಕೃತಿಯ ವಶದಿಂದ ಅಸ್ವತಂತ್ರವಾದ ಈ ಪ್ರಾಣಿವರ್ಗವನ್ನೆಲ್ಲ ಪುನಃ ಪುನಃ ಸೃಷ್ಟಿಸುತ್ತಿರುವೆನು.

ಆ ಕರ್ಮದಲ್ಲಿ ಆಸಕ್ತವಾದ ಮತ್ತು ಉದಾಸೀನನಂತೆ ಇರುವ ನನ್ನನ್ನು ಆ ಕರ್ಮಗಳು ಬಂಧಿಸುವುದಿಲ್ಲ.

ಅಧ್ಯಕ್ಷನಾದ ನನ್ನಿಂದ ಪ್ರಕೃತಿಯು ಚರಾಚರಾತ್ಮಕವಾದ ಜಗತ್ತನ್ನು ಉತ್ಪತ್ತಿಮಾಡುತ್ತಿದೆ. ಈ ಕಾರಣದಿಂದ ಜಗತ್ತು ಸುತ್ತುತ್ತಿರುತ್ತದೆ.

ಆಧುನಿಕ ವಿಜ್ಞಾನದ ತೀರ್ಮಾನಗಳೂ ಋಷಿವಾಣಿಯೂ ಒಂದೇ ರೀತಿಯಲ್ಲಿರುವುದು, ನಂಬುವುದಕ್ಕೆ ಕಷ್ಟವಾಗುವಂತಿದೆ. ಫ್ರಿಜೋಕಾಸ್ತ ಎಂಬಾತನು ರಚಿಸಿರುವ, ದಿ ಟಾವೋ ಆಫ್ ಫಿಸಿಕ್ಸ್ ಎಂಬ ಗ್ರಂಥದಲ್ಲಿ ಇವೆಲ್ಲ ವಿಷಯಗಳು ಆಕರ್ಷಕವಾಗಿ ಸಂಗ್ರಹವಾಗಿವೆ.

"ಭೌತ ವಿಜ್ಞಾನದಲ್ಲಿ ನಾವು ವಿಶ್ವದ ಕ್ರಿಯಾಶೀಲ ಪ್ರಕೃತಿಯನ್ನು ಬಹಳ ಕಿರಿದಾದ ಆಕಾರಗಳಾದ ಪರಮಾಣು ಮತ್ತು ಅದರ ಬೀಜದಲ್ಲಿ ಕಾಣುತ್ತೇವೆ. ಮತ್ತು ಬಹಳ ಹಿರಿಯ ಆಕಾರಗಳಾದ ಭೂಗೋಲ, ನಕ್ಷತ್ರಗಳು ಮತ್ತು ನಕ್ಷತ್ರಪುಂಜ (ನೀಹಾರಿಕೆ)ಗಳಲ್ಲಿಯೂ ಕಾಣುತ್ತೇವೆ. ನಾವು ಅತ್ಯಂತ ಸಮರ್ಥ ದೂರದರ್ಶಕಗಳ ಮೂಲಕ ವಿಶ್ವವು ನಿರಂತರ ಚಲನೆಯಲ್ಲಿರುವುದನ್ನು ಕಾಣುತ್ತೇವೆ. ಪರಿಭ್ರಮಿಸುತ್ತಿರುವ ಜಲಜನಕ ಅನಿಲದ ಮೇಘಗಳು ಸಂಕುಚನಗೊಂಡು, ನಕ್ಷತ್ರಗಳಾಗಿ ರೂಪುಗೊಳ್ಳುವುದನ್ನು, ಈ ಪ್ರಕ್ರಿಯೆಯಲ್ಲಿ ಶಾಖಗೊಳ್ಳುತ್ತ ಅವು ಜ್ವಾಲೆಯಾಗಿ ಉರಿಯುತ್ತಿರುವುದನ್ನು ನಾವು ಆಕಾಶದಲ್ಲಿ ಕಾಣುತ್ತೇವೆ."

ನಾವು ಬ್ರಹ್ಮಾಂಡವನ್ನು ಕೋಟ್ಯಂತರ ನೀಹಾರಿಕೆಗಳುಳ್ಳ ಒಂದೇ ಸಮೂಹವಾಗಿ ಅವಲೋಕಿಸಿದಾಗ, ಬಹಳ ಹಿರಿದಾದ ದೇಶ ಕಾಲಗಳ ಕಲ್ಪನಾತೀತವಾದ ಅನುಭವವನ್ನು ಮುಟ್ಟಿರುತ್ತೇವೆ ಮತ್ತು ಆ ಬ್ರಹ್ಮಾಂಡದ ನೆಲೆಯಲ್ಲಿ ವಿಶ್ವವು ಸ್ಥಗಿತವಾಗಿಲ್ಲ, ವಿಕಸಿಸುತ್ತದೆ ಎಂಬುದನ್ನು ಕಾಣುತ್ತೇವೆ. ಆಧುನಿಕ ಖಗೋಳ



ವಿಜ್ಞಾನದಲ್ಲಿ ಇದೊಂದು ಅತ್ಯಂತ ಪ್ರಮುಖವಾದ ಅನ್ವೇಷಣೆ ..... ನೀವು ಯಾವ ನೀಹಾರಿಕೆಯಲ್ಲಿ ನೆಲಸಿದ್ದರೂ, ಇತರ ನೀಹಾರಿಕೆಗಳು ನಿಮ್ಮಿಂದ ದೂರಕ್ಕೆ ಓಡುತ್ತಿರುವುದನ್ನು ಅರಿಯುತ್ತೀರಿ. ನಿಮ್ಮ ಹತ್ತಿರದಲ್ಲಿರುವ ನೀಹಾರಿಕೆಗಳು ಕ್ಷಣಕ್ಕೆ ಸಾವಿರ ಮೈಲಿಗಳಂತೆ ವೇಗದಲ್ಲಿ ಓಡುತ್ತಿದ್ದರೆ, ನಿಮ್ಮಿಂದ ದೂರದಲ್ಲಿರುವ ನೀಹಾರಿಕೆಗಳೂ ಇನ್ನೂ ಅತಿಶಯವಾದ ಬೆಳಕಿನ ವೇಗದಂತಹ ವೇಗದಲ್ಲಿ ಓಡುತ್ತಿರುವುದನ್ನು ಕಾಣುತ್ತೀರಿ. ಇನ್ನೂ ದೂರದ ನೀಹಾರಿಕೆಗಳು ಬೆಳಕಿನ ವೇಗಕ್ಕಿಂತ ಅಧಿಕವಾದ ವೇಗದಿಂದ, ನಿಮ್ಮಿಂದ ದೂರಕ್ಕೆ ಓಡುತ್ತವೆ. ಆಕಾಂಕ್ಷೆಗಳಿಂದ ಹೊರಟ ಬೆಳಕು ನಮ್ಮನ್ನು ತಲಪುವುದು ಸಾಧ್ಯವೇ ಇಲ್ಲ. ಏಕೆಂದರೆ ಅವು ನಮ್ಮಿಂದ ದೂರಕ್ಕೆ ಬೆಳಕಿಗಿಂತ ವೇಗವಾಗಿ ಪ್ರಯಾಣಿಸುತ್ತಿವೆ. ಅದು ಹೇಗೆಂದರೆ, ಸರ್. ಆರ್ಥರ್ ಎಡಿಂಗ್‌ಟನ್ ಹೇಳುತ್ತಾನೆ, "ಓಟಗಾರನು ಹೆಚ್ಚುತ್ತಲೇ ಇರುವ ದಾರಿಯನ್ನು ಓಡುತ್ತಲೇ ಇದ್ದಾನೆ. ಅವನು ಮುಟ್ಟ ಬೇಕಾಗಿರುವ ಗೆಲುವಿನ ಕಂಬ ಅವನಿಗಿಂತ ವೇಗವಾಗಿ ದೂರಕ್ಕೆ ಸರಿಯುತ್ತಿದೆ........"

ಆಧುನಿಕ ಭೌತವಿಜ್ಞಾನವು, ದ್ರವ್ಯರಾಶಿಯು ಕೇವಲ ಶಕ್ತಿ ರೂಪವಲ್ಲದೆ ಬೇರೇನೂ ಅಲ್ಲ ಎನ್ನುತ್ತದೆ. ಐನ್‌ಸ್ಟೈನನ ಲೋಕಪ್ರಸಿದ್ಧವಾದ ಹೇಳಿಕೆ ಹೀಗಿದೆ... "$E=mc^2$. E ಎಂದರೆ ಶಕ್ತಿ. m ಎಂದರೆ ದ್ರವ್ಯರಾಶಿ, c ಎಂಬುದು ಬೆಳಕಿನ ವೇಗ.

ಒಂದು ಕಣದಲ್ಲಿ ಅಡಗಿರುವ ಶಕ್ತಿಯು, ಕಣದ ದ್ರವ್ಯರಾಶಿಯನ್ನು ಬೆಳಕಿನ ವೇಗದ ವರ್ಗದಿಂದ ಗುಣಿಸಿದಾಗ ದೊರೆಯುವ ಗುಣಲಬ್ಧಕ್ಕೆ ಸಮವಾಗಿರುತ್ತಿದೆ. ಐನ್‌ಸ್ಟೈನ್‌ನ ಈ ಸೂತ್ರದಲ್ಲಿ ಅಡಗಿರುವ ತತ್ವವನ್ನು ಸಾಪೇಕ್ಷತಾವಾದದ ತಳಹದಿಯನ್ನು ಕಾಲದೇಶಗಳನ್ನು ವಿಶಿಷ್ಟ ಗುಣವಾಗುಳ್ಳ ವಿಶ್ವದ ರೀತಿಯನ್ನು ಭಾರತದ ಋಷಿಗಳು ತಮ್ಮ ಧ್ಯಾನದ ಆಂತರ್ಯದಲ್ಲಿ ಮೊದಲೇ ಕಂಡುಕೊಂಡಿದ್ದರು– ಎಂದು ಹೇಳುವುದು ಉತ್ಪ್ರೇಕ್ಷೆಯಾಗದು. ತಮ್ಮ ಅತ್ಯುನ್ನತ ಧ್ಯಾನದಲ್ಲಿ ಶಕ್ತಿ ಮತ್ತು ದ್ರವ್ಯರಾಶಿಯೂ, ಕಣಗಳೂ ಮತ್ತು ತರಂಗಗಳೂ ಒಂದೇ ತಳಹದಿಯಲ್ಲಿ ನಡೆಯುತ್ತಿರುವ ಪ್ರಕ್ರಿಯೆಯ ವಿಭಿನ್ನ ಮುಖಗಳು ಎಂದೂ, ಬ್ರಹ್ಮಾಂಡವನ್ನೇ ವ್ಯಾಪಿಸಿರುವ ಏಕಸೂತ್ರತೆಯೇ ಇದೆಂದೂ, ಇದು ವಿಶ್ವದ ಅಂತಿಮಾಂಶವೆಂದೂ ಕಂಡುಕೊಂಡರು. ಇಂದು ವಿಜ್ಞಾನವು ಅಂದಿನ ಆ ಪಾಠವನ್ನು ಪುನಃ ಕಲಿತಿದೆ. ಎ. ಎನ್. ವೈಟ್‌ಹೆಡ್ ಅವರ ಮಾತುಗಳಲ್ಲಿ ಹೇಳುವುದಾದರೆ: "ದ್ರವ್ಯರಾಶಿಯನ್ನು ಶಕ್ತಿಯೇ ಎಂದು ಗುರುತಿಸಲಾಗಿದೆ ಮತ್ತು ಶಕ್ತಿಯು ಬರಿಯ ಚಲನಶೀಲತೆಯೇ ಆಗಿದೆ. ಆಧುನಿಕ ದೃಷ್ಟಿಕೋನವು, ಶಕ್ತಿ ಚಲನಶೀಲತೆ ಮತ್ತು ದೇಶಕಾಲಗಳಲ್ಲಿ ಕಂಡುಬರುವ ಕಂಪನಗಳ ವ್ಯತ್ಯಾಸ ಇವುಗಳನ್ನು ಒಳಗೊಂಡಿದೆ. ಒಂದು ಸ್ಥಳೀಯ ಘರ್ಷಣೆಯು ವಿಶ್ವವನ್ನೇ ಕಂಪಿಸುವಂತೆ ಮಾಡುತ್ತದೆ. ಘರ್ಷಣೆಯ ಪರಿಣಾಮಗಳು ಅತ್ಯಲ್ಪವಾಗಿಯಾದರೂ ಇದ್ದೇ ಇರುತ್ತವೆ. ಅತಿ ದೂರದಲ್ಲಾದರೂ ಸರಿಯೆ.

ದ್ರವ್ಯರಾಶಿಯ ಕಲ್ಪನೆಯು ಮೊದಲು ಸರಳವೂ ಸ್ಥಳೀಯವೂ ಆಗಿದ್ದಿತು. ಆದರೆ ಆಧುನಿಕವಾದ ಪರಿಕಲ್ಪನೆಯಲ್ಲಿ ಘರ್ಷಣೆಗಳ ಮೊತ್ತವು ದ್ರವ್ಯರಾಶಿಯಾಗಿ ವಾತಾವರಣಕ್ಕೆ ಸೇರಿಹೋಗುತ್ತದೆ. ನಿರ್ಲಿಪ್ತನಾದ ಸ್ವಾಯತ್ತವಾದ ಇರುವಿಕೆ ಇಂದು ಅಸಾಧ್ಯವಾಗಿದೆ."

ನಾವು ಮಾನವರು ಬಹಳ ಹಳಬರು. ಜೀವನದ ಮಹಾನಾಟಕದಲ್ಲಿ ನಾವು ಪಾತ್ರಧಾರಿಗಳಾಗಿಯೂ, ಪ್ರೇಕ್ಷಕರಾಗಿಯೂ ಎಂದಿನಿಂದಲೊ ಯಾವಾಗಲೂ ಇರುತ್ತೇವೆ. ಮಹಾಚೇತನದಿಂದ ದೂರ ಸರಿಯುತ್ತ, ನಮ್ಮ ಪುಟ್ಟ ಮನಸ್ಸುಗಳ ಮೂಲಕ ಅದನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸುತ್ತ, ದ್ರವ್ಯರಾಶಿ ಎಂದರೆ 'ಬರಿಯ ಬಯಲು' ಎಂಬ ತಿಳಿವಳಿಕೆ ಹುಟ್ಟಿ ದಿಗ್ಭ್ರಮೆಯಿಂದ ಹತಬದ್ಧರಾಗಿ ನಾವು ಬೆಚ್ಚಿಬೀಳುತ್ತೇವೆ. ಇಂದಿನ ವಿಸ್ತೃತ ಜ್ಞಾನವು ಅಂದಿನ ಋಷಿಗಳ ಅತೀಂದ್ರಿಯ ಜ್ಞಾನವನ್ನು ಪಡೆದ ಬುದ್ಧಿಯನ್ನೇನೂ ಮೀರಿಸುವಂತಿಲ್ಲ. ವಿಜ್ಞಾನವು ತನ್ನ ಅತ್ಯಂತ ಆಧುನಿಕವಾದ ಸ್ಥಿತಿಯಲ್ಲಿ ಹಿಂದೆಂದಿಗಿಂತಲೂ ಇಂದು ವೇದಾಂತವನ್ನು ಸಮೀಪಿಸುತ್ತಿದೆ.

* * * *



## ೫. ಭಾರತಮಾತೆ

ಬಹಳ ಕಾಲದಿಂದ ನನ್ನ ಮನಸ್ಸಿನಲ್ಲಿ ಒಂದು ಭಾವನೆ ಇದೆ – ಅಥವಾ ಚಿತ್ರ ಎಂದುಕೊಳ್ಳಿ. ಅದರ ಪ್ರಕಾರ ಭಾರತವು ಹೊನ್ನಿನ ಮೂಟೆಯನ್ನು ಹೊತ್ತೊಯ್ಯುವ ಕತ್ತೆಯಂತೆ ಕಾಣುವುದು. ತಾನು ಹೊತ್ತಿರುವುದೇನು ಎಂಬುದನ್ನು ಕತ್ತೆ ಅರಿಯದು. ಆದರೆ ಮೂಟೆಯನ್ನು ಹೊತ್ತಿರುವ ಕಾರಣ ಅದಕ್ಕೆ ತೃಪ್ತಿ ಸಂತೋಷಗಳು ಉಂಟಾಗಿವೆ.

ಆ ಚಿನ್ನದ ಮೂಟೆಯು ಭ್ರಮೆಯನ್ನುಂಟುಮಾಡುವಂತಹ ವಿಪರೀತ ಅಮೂಲ್ಯವಾದ ನಿಧಿ, ಕಲೆ ಸಾಹಿತ್ಯ ಸಂಸ್ಕೃತಿ ಆಯುರ್ವೇದವೇ ಮುಂತಾದ ವಿಜ್ಞಾನಗಳು ಅಲ್ಲಿವೆ. ಭಾರತ ತನ್ನ ಉತ್ಕರ್ಷದ ಕಾಲದಲ್ಲಿ ಸಾಧಿಸಿದಂತಹ ಐಸಿರಿಯನ್ನು ನಾವಿಂದು ಪಿತ್ರಾರ್ಜಿತ ಆಸ್ತಿ ಎಂಬಂತೆ ಪಡೆದಿದ್ದೇವೆ. ಆದಿಶಂಕರಾಚಾರ್ಯರು ಅದನ್ನು "ಋಷಿಗಳು ಕಂಡುಕೊಂಡ ಸಂಗ್ರಹಿಸಿದ ಅಮೂಲ್ಯ ತಪೋನಿಧಿ" ಎಂದಿದ್ದಾರೆ. ರಬೀಂದ್ರನಾಥ ಟಾಗೋರರು, "ಇತರ ಎಲ್ಲ ದೇಶಗಳಿಗೂ ಭಾರತವೇ ಗುರುವಾಗತಕ್ಕ ನಾಡು" ಎಂದಿದ್ದಾರೆ.

ಅರವಿಂದ ಮಹರ್ಷಿಗಳ ಪಾಲಿಗೆ, ಭರತಮಾತೆಯು ಭೂಗೋಲದ ಒಂದು ತುಣುಕಲ್ಲ. ಆಕೆಯೊಬ್ಬ ದೇವತೆ. ಒಂದು ಶಕ್ತಿ ಎಂದಿರುವುದಾದರೆ ಭಾರತವು ಪ್ರಪಂಚಕ್ಕೇ ಮಾರ್ಗದರ್ಶಿಯಾಗುವಳೆಂದು ಭವಿಷ್ಯ ನುಡಿದಿದ್ದಾರೆ. ಮುಂದಕ್ಕೆ ಅವರು "ಭಾರತೀಯರು ಅಚಲ ಶ್ರದ್ಧೆಯಿಂದ ಶ್ರಮಿಸಬೇಕು. ಭಾರತವು ಜಾಗೃತವಾಗಬೇಕು. ನಡೆದುದೆಲ್ಲದರಲ್ಲಿಯೂ ಅವಳ ಮಹತ್ವ ಗೋಚರಿಸಬೇಕು. ಪ್ರತಿಯೊಂದು ಕಷ್ಟ ವ್ಯಸನಗಳೂ ಹಿಮ್ಮೆಟ್ಟಿ, ಅವು ಅವಳ ಬೆಳವಣಿಗೆಗೆ ಸಹಾಯವಾಗಬೇಕು" ಎಂದಿದ್ದಾರೆ. ಮುಂದುವರೆಸಿ ಅವರು "ಮುಂಜಾವು ಇನ್ನೇನು ಕೈಗೆಟುಕದೆ ಬೆಳಕು ತಾನಾಗಿ ಅರಳುತ್ತಿದೆ. ಇನ್ನು ಇರುಳಿನ ಭಯವಿಲ್ಲ. ಇಷ್ಟರಲ್ಲೇ ಮುಂಜಾವು ಬಲಿದು, ದಿಗಂತದ ಮೇಲೆ ಸೂರ್ಯೋದಯವಾಗುತ್ತಿದೆ. ಭಾರತದ ಅದೃಷ್ಟದೇವತೆ ಈಗ ಉದಯಿಸಿ ಭಾರತವನ್ನು ಬೆಳಕಿನಿಂದ ತುಂಬುತ್ತಾಳೆ. ಭಾರತದ ಆಚೆಗೂ ಬೆಳಕು ಸೂಸುತ್ತದೆ. ಏಷಿಯಾ ಖಂಡವನ್ನೆಲ್ಲ ಬೆಳಕು ವ್ಯಾಪಿಸಿ ಹರಿಯುತ್ತದೆ. ಪ್ರಪಂಚದ ತುಂಬ ಪ್ರವಾಹದಂತೆ ಹರಿದು ವ್ಯಾಪಿಸುತ್ತದೆ. ಇಲ್ಲಿಂದ ಮುಂದೆ ಪ್ರತಿಯೊಂದು ಗಂಟೆ, ಪ್ರತಿಯೊಂದು ನಿಮಿಷವೂ ಭಾರತವನ್ನು ಬೆಳಕಿನೆಡೆಗೆ

ನಡೆಸುತ್ತ, ದೇವನ ಅಪ್ರತಿಹತವಾದ ಆಜ್ಞೆಯನ್ನು ಸಮೀಪಿಸಲಿ". ಭಾರತ ನಮಗೆ ಕೊಟ್ಟಿರುವ ಸಂದೇಶ (India what can it teach us) ಎಂಬ ಗ್ರಂಥದಲ್ಲಿ ಎಫ್. ಮಾಕ್ಸ್ ಮುಲ್ಲರನು ಅದ್ವಿತೀಯವಾದ ಮಾತುಗಳಲ್ಲಿ ಬೇರೆ ಯಾವ ದೇಶಕ್ಕೂ ನೀಡದ, ಅರ್ಹವಾದ ಪ್ರಶಂಸೆಯನ್ನು ಭಾರತಕ್ಕೆ ಸಲ್ಲಿಸಿದ್ದಾನೆ. ಪ್ರಕೃತಿಯು ಕೊಡುಗೈಯಿಂದ ದಯಪಾಲಿಸಿದ ಸೌಂದರ್ಯ, ಶಕ್ತಿ, ಸಮಸ್ತ ರೀತಿಯ ಐಶ್ವರ್ಯ ಇವುಗಳಿಂದ ಕೂಡಿದ ಒಂದು ದೇಶವು ಇರಬಹುದಾದರೆ, ಅದರಲ್ಲಿಯೂ ಕೆಲವು ಪ್ರದೇಶಗಳು ಸ್ವರ್ಗಸಮಾನವಾಗಿ ಇರಬಹುದಾದರೆ ಅದು ಭಾರತವೇ ಸರಿ. ಯಾವ ದೇಶದಲ್ಲಿ ಮಾನವ ಚೇತನವು ತನ್ನನ್ನು ಸಂಪೂರ್ಣವಾಗಿ ಅರಳಿಸಿಕೊಂಡು, ತನ್ನ ಅತ್ಯಂತ ಶ್ರೇಷ್ಠವಾದ ಪ್ರತಿಭೆಯಿಂದ ಆಳವಾಗಿ ಆಲೋಚಿಸಿ, ಜೀವನದ ಮಹತ್ತರವಾದ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಂಡಿದೆಯೋ, ಅಂತಹ ವಿಚಾರಗಳಿಂದ, ಪ್ಲೇಟೋ ಮತ್ತು ಕ್ಯಾಂಟ್ ಎಂಬ ಮಹಾ ಚಿಂತಕರನ್ನು ವ್ಯಾಸಂಗಮಾಡಿದವರೂ ಸಹ, ಗಮನವಿಟ್ಟು ವ್ಯಾಸಂಗ ಮಾಡಬಯಸುತ್ತಾರೆಯೋ ಅಂತಹ ದೇಶವೆಲ್ಲಿ ಎಂದು ಯಾರಾದರೂ ಕೇಳಿದರೆ ನಾನು ಭಾರತದೆಡೆಗೆ ಕೈ ತೋರಿಸುತ್ತೇನೆ. ನನ್ನನ್ನೇ ನಾನು ಪ್ರಶ್ನಿಸಿಕೊಳ್ಳಬಹುದಾದರೆ, ಗ್ರೀಕ್ ಮತ್ತು ರೋಮನ್ನರ ಆಲೋಚನೆಗಳ ಆಧಾರದಿಂದಲೇ ಬೆಳೆದ ಸಾಹಿತ್ಯವನ್ನು ವ್ಯಾಸಂಗ ಮಾಡುತ್ತ, ಸೆಮೆಟಿಕ್ ಜನಾಂಗ ಮತ್ತು ಜ್ಯೂಗಳು ಮುಂತಾದವರಿಂದ ತಿದ್ದಲ್ಪಟ್ಟು, ನಮ್ಮ ಅಂತರಂಗ ಜೀವನವನ್ನು ಹೆಚ್ಚು ಪರಿಪೂರ್ಣವಾಗಿಸಿಕೊಳ್ಳಲು, ಅರ್ಥಮಾಡಿಕೊಳ್ಳಲು, ಅಂದರೆ ನಿಜವಾದ ಅರ್ಥದಲ್ಲಿ ಮಾನವೀಯವಾಗಿ ಆಲೋಚಿಸಲು ಕಲಿಯಬೇಕಾದರೆ, ಬರಿಯ ಐಹಿಕ ಜೀವನಕ್ಕಲ್ಲ ಶಾಶ್ವತ ಜೀವನಕ್ಕೆ ತಕ್ಕಂತೆ ಆಲೋಚಿಸಲು ಕಲಿಯುವುದಾದರೆ ನಾನು ಪುನಃ ಭಾರತದ ಕಡೆಗೆ ಕೈ ತೋರಿಸುತ್ತೇನೆ."

ಕಳೆದ ಶತಮಾನದಲ್ಲಿ ವೇದಗಳನ್ನು ಯೂರೋಪಿಯನ್ ಭಾಷೆಗಳಿಗೆ ಅನುವಾದ ಮಾಡಲಾಯಿತು. ಆಗ 'ಶೋಪನ್ ಹೋರ್'ನೆಂಬ ಜರ್ಮನ್ ತತ್ವಜ್ಞಾನಿಯು ಹೀಗೆ ಅಭಿಪ್ರಾಯಪಟ್ಟನು. "ಹಿಂದಿನ ಎಲ್ಲ ಶತಮಾನಗಳಿಗಿಂತ, ಈ ಶತಮಾನದಲ್ಲಿ ದೊರಕಿದ ಮಹತ್ತರವಾದ ಸದವಕಾಶ ಎಂದರೆ, ನಮಗೆ ವೇದಗಳನ್ನು ಪ್ರವೇಶಮಾಡಲು ಸಾಧ್ಯವಾದದ್ದು." ಅನಂತರ ಮುಂದೆ ಆತನು, "ಇಡೀ ಪ್ರಪಂಚದಲ್ಲಿ ಇನ್ನು ಯಾವ ವ್ಯಾಸಂಗದಿಂದಲೂ ನಾನು ಹೀಗೆ ಉಪಕೃತನಾಗಲಿಲ್ಲ. ನನ್ನ ಚೇತನದ ಉನ್ನತಿಗೆ ಉಪನಿಷತ್ತುಗಳು ಸಹಾಯಕವಾದಂತೆ ಇನ್ನು ಯಾವುದೂ ಆಗಲಿಲ್ಲ. ಈ ಕೃತಿಗಳು ನನ್ನ ಜೀವನಕ್ಕೆ ಶಾಂತಿಯನ್ನು ಎರೆದವು. ಈ ಕೃತಿಗಳು ಸಾವಿನಲ್ಲಿ ನನಗೆ ಸಮಾಧಾನವನ್ನು ಕೊಡುತ್ತವೆ".



ತನ್ನ ದಿನಚರಿಯಲ್ಲಿ 'ರಾಲ್ಫ್ ವಾಲ್ಡೊ ಎಮರ್ಸನ್'ನು ವೇದಾಂತಕ್ಕೆ ಗೌರವವನ್ನು ಅರ್ಪಿಸಿದ್ದಾನೆ.

"ಅದು ಇರುಳಿನಂತೆ ಉನ್ನತವಾದುದು, ಸಾಗರದಂತೆ ಸ್ತಬ್ಧವಾದುದು, ಎಲ್ಲ ಬಗೆಯ ಧಾರ್ಮಿಕ ಭಾವನೆಗಳನ್ನು ಒಳಗೊಂಡುದು. ಬಹು ಗಂಭೀರವಾದ ಕವಿ ಚೇತನವು ಕಾಣಬಲ್ಲ ಮಹತ್ತರವಾದ ನೀತಿಯನ್ನು ಬಲ್ಲುದು. ಈ ಗ್ರಂಥವನ್ನು ಕೆಳಗಿಡುವುದು ಸಲ್ಲದು. ನಾನು ಕಾಡಿನಲ್ಲಿ ಅಲೆಯುವಾಗ, ಸರೋವರದ ದೋಣಿಯ ಮೇಲೆ ಸಂಚರಿಸುವಾಗ ಈ ಪುಸ್ತಕವು ನನ್ನ ಸಂಗಾತಿಯಾಗಿ ಇರುತ್ತದೆ. ಪ್ರಕೃತಿಯ ಸಾನ್ನಿಧ್ಯದಲ್ಲಿ ನಾನೊಬ್ಬ ಬ್ರಾಹ್ಮಣನಾಗುತ್ತೇನೆ. ಅಗಾಧ ಶಕ್ತಿಯ ನಿರಂತರ ಕೊಡುಗೆ, ಇದು ಅಖಂಡವಾದ ಮೌನ..... ಅವಳಲ್ಲಿ ಶಾಂತಿ, ಪವಿತ್ರತೆ, ಸಂಪೂರ್ಣ ಪರಿತ್ಯಾಗ, ಸರ್ವ ರೋಗಗಳನ್ನು, ಪಾಪಗಳನ್ನು ಹೊರದೂಡಿ ನಿಮ್ಮನ್ನು ಕಾಯುವ ಪರಿಣತಿ ಅಲ್ಲಿದೆ. ಅಷ್ಟದಿಕ್ಪಾಲಕರ ಲಯದಲ್ಲಿ ನೀವು ಕರಗಿರುತ್ತೀರಿ".

ಸಂಸ್ಕೃತ ಭಾಷೆ ಬಹಳ ಶ್ರೀಮಂತವಾದುದು. ಎಷ್ಟೋ ಶತಮಾನಗಳ ಹಿಂದೆಯೇ ಆ ಭಾಷೆಯು ಮನಸ್ಸಿನ ನಾನಾ ಸ್ತರಗಳನ್ನು ಕಲ್ಪಿಸಿಕೊಳ್ಳುವಷ್ಟು, ವರ್ಣಿಸುವಷ್ಟು ಪ್ರಬುದ್ಧವಾಗಿದ್ದಿತು. ಜಾಗೃತ, ಸುಪ್ತಮಾನಸ, ಅಜಾಗೃತ ಮನಸ್ಸನ್ನು ಕೂಡ ಅದು ಗುರುತಿಸಿದ್ದಿತು. ಆಧುನಿಕ ಮನಶ್ಶಾಸ್ತ್ರವು ವ್ಯವಹರಿಸುವ ಮನಶ್ಶಾಸ್ತ್ರೀಯ ವಿಶ್ಲೇಷಣ ಮತ್ತು ಸೂಕ್ತ ಸಂಮೋಹನಗಳಿಂದ ಸಾಧ್ಯವಾಗುವ ಮನೋಚಿಕಿತ್ಸೆಗಳನ್ನು ಕೂಡ ಕುರಿತು ಹಿಂದೆಯೇ ಸಂಸ್ಕೃತದಲ್ಲಿ ಶಬ್ದಗಳು ಸೃಷ್ಟಿಯಾಗಿದ್ದವು. ಅದೂ ಅಲ್ಲದೆ ಅತ್ಯಂತ ಆಧುನಿಕವಾದ ಶ್ರೀಮಂತ ಭಾಷೆಗಳಲ್ಲಿ ಕೂಡ ಇನ್ನೊಂದು ಸಮಾನಾರ್ಥಕ ಪದವಿಲ್ಲದ ಕಲ್ಪನೆಗಳನ್ನು ಅಲ್ಲಿ ಕಂಡಿದ್ದೇನೆ. ಆದ್ದರಿಂದಲೇ ಒಮ್ಮೊಮ್ಮೆ ತುಂಬಾ ವ್ಯಾಪಕವಾದ ವಿದ್ವತ್‌ವುಳ್ಳ ಆಂಗ್ಲ ಲೇಖಕರು ಕೆಲವು ವಿಚಾರಗಳಿಗೆ ಸಂಸ್ಕೃತದ ಪದಗಳನ್ನೇ ಬಳಸಬೇಕಾಗಿ ಬಂದದ್ದು ಕಂಡುಬರುತ್ತದೆ.

ಉದಾಹರಣೆಗೆ 'ರೇನರ್ ಜಾನ್‌ಸನ್'ನ 'ಸೆರೆ ಸಿಕ್ಕ ಪ್ರಭೆ' (The Imprisoned Splendor) ಎಂಬ ಕೃತಿಯ ಗದ್ಯಭಾಗವೊಂದನ್ನು ನೋಡಬಹುದು.

"ವಿಚಾರಮಾಡುವ ಸೌಲಭ್ಯಕ್ಕಾಗಿ ನಾನು ಅದನ್ನು ಉನ್ನತ ಮಟ್ಟದ 'ಬುದ್ಧಿ' ಎಂದು ಕರೆಯಲು ಬಯಸುತ್ತೇನೆ. (ಸಂಸ್ಕೃತದ ಈ ಶಬ್ದಕ್ಕೆ ವಿವೇಕ (wisdom) ಎಂದು ಅರ್ಥ). ಬುದ್ಧಿಯು ನೇರವಾಗಿ ಸತ್ಯವನ್ನು ಅರಿಯುತ್ತದೆ. ಸತ್ಯದ ಅಂಶಗಳನ್ನು ಎಂದು ತಿಳಿಯುವುದು ಸರಿಯಾದೀತು. ಅದು ತನ್ನ ತಿಳುವಳಿಕೆಗೆ ಯಾವ ಕಾರಣವನ್ನು ಕೊಡುವುದಿಲ್ಲ. ತಪ್ಪುಗಳನ್ನು ಮಾಡುವುದಿಲ್ಲ. ಈ ವಿವೇಕವು ಮನೋವ್ಯಾಪಾರವಾಗಿ ಕಂಡುಬರುತ್ತದೆ. ಏಕೆಂದರೆ ಅಲ್ಲಿ ಅದಕ್ಕೊಂದು ಗ್ರಾಹ್ಯವಾದ ರೂಪ ದೊರೆಯುತ್ತದೆ".

ಐನ್‌ಸ್ಟೀನನನ್ನು ಕುರಿತ ಒಂದು ಶತಮಾನೋತ್ಸವ ಸಂಪುಟದಲ್ಲಿ ಜೆ. ರಾಬರ್ಟ್ ಓಪನ್‌ಹೀಮರನು ಹೀಗೆಂದಿದ್ದಾನೆ: "ಐನ್‌ಸ್ಟೀನನು ವಿಜ್ಞಾನಿ ಮಾತ್ರವಲ್ಲದೆ ಒಬ್ಬ

ಮಹಾ ಸಜ್ಜನನೂ, ಮಾನವ ಪ್ರೇಮಿಯೂ ಆಗಿದ್ದನೆಂಬುದು ನನ್ನ ಖಚಿತವಾದ ತಿಳುವಳಿಕೆ. ನಿಜವಾಗಿ ಒಂದೇ ಶಬ್ದದಲ್ಲಿ ಅವನ ಸ್ವಭಾವವನ್ನು ಕುರಿತು ಹೇಳಬಹುದಾದರೆ, ಮಾನವರ ಸಮಸ್ಯೆಗಳನ್ನು ಕುರಿತು ಅವನು ಯೋಚಿಸುತ್ತಿದ್ದ ರೀತಿಯನ್ನು ಹೇಳಬಹುದಾದರೆ ಅದನ್ನು ಒಂದು ಸಂಸ್ಕೃತದ ಪದದಲ್ಲಿ ಹೇಳಲು ಬಯಸುತ್ತೇನೆ. ಆ ಶಬ್ದವೇ 'ಅಹಿಂಸೆ'. ಇತರರನ್ನು ನೋಯಿಸದಿರುವವನು, ಯಾರಿಗೂ ಕೇಡು ಬಯಸದವನು".

* * * *



## ೬. ನಾಗರಿಕತೆಯ ಪರಾಕಾಷ್ಠೆ

ಮಾನವ ಇತಿಹಾಸದ ಅತ್ಯಂತ ಉಜ್ವಲವಾದ ಸಮಯವೆಂದರೆ ಭಾರತದಲ್ಲಿ ಅನೇಕ ನಾಗರಿಕತೆಗಳು ಅರಳಿದ ಕಾಲ. ಉಪನಿಷತ್ತಿನಲ್ಲಿ ಕಿಕ್ಕಿರಿದು ತುಂಬಿರುವ ಆಲೋಚನೆಗಳು ಎಂದಿನಿಂದಲೂ ಜನರ ಮನಸ್ಸನ್ನು ವ್ಯಾಪಿಸಿ ಆಲೋಚಿಸುವಂತೆ ಮಾಡಿವೆ. ಉಪನಿಷದ್ವಾಣಿ ನಮ್ಮ ಮನಸ್ಸನ್ನು ಪ್ರಶ್ನಿಸುತ್ತದೆ. ವಿಜಯವನ್ನು ಮೀರಿಸಿದುದು ಜೀವನದಲ್ಲಿ ಇನ್ನೇನೊ ಇದ್ದೀತು ಅಲ್ಲವೆ? ಶ್ರೀಮಂತಿಕೆಗಿಂತ ಮುಖ್ಯವಾದದ್ದು ಗೆಲ್ಲುವಿಕೆಯೋ? ತುದಿಮೊದಲಿಲ್ಲದ ಸತ್ಯಾನ್ವೇಷಣೆಯೇ ಮಾನವ ಜೀವನದ ಪರಮಗಂತವ್ಯ ಎನ್ನೋಣವೆ? ಟಿ. ಎಸ್. ಎಲಿಯಟ್ಟನು ಎತ್ತಿದ ಅವಿಸ್ಮರಣೀಯವಾದ ಪ್ರಶ್ನೆಗಳಿಗೆ ಉಪನಿಷತ್ತುಗಳು ಸುಸ್ಮರಣೀಯವಾದ ಉತ್ತರಗಳನ್ನು ಕೊಟ್ಟಿವೆ.

"ಬದುಕಿನ ಓಟದಲ್ಲಿ ನಮ್ಮನ್ನೇ ನಾವು ಕಳೆದುಕೊಂಡೆವೆ?

ಜ್ಞಾನ ಸಂಪಾದನೆಯ ಮಾರ್ಗದಲ್ಲಿ ವಿವೇಕವು ಎಲ್ಲಿ ಮರೆಯಾಯಿತು?

ಮಾಹಿತಿಗಳನ್ನು ಕಲೆ ಹಾಕಲು ಹೋಗಿ ಸುಜ್ಞಾನವು ಕಳೆದುಹೋಯಿತೆ?

ಪಾಶ್ಚಿಮಾತ್ಯರಲ್ಲಿ ಕಂಡುಬರುವ ಅಸಂಖ್ಯಾತವಾದ ಮಾನಸಿಕ ಚಿಕಿತ್ಸಾಲಯಗಳು ನಮ್ಮನ್ನು ಎಚ್ಚರಿಸುತ್ತಿವೆ. ಐಹಿಕವಾದ ಉನ್ನತಿಯನ್ನು ಸಾಧಿಸುವ ನಾಗರಿಕತೆಯು ಆತ್ಮದ ಹಸಿವನ್ನು ಎಂದಿಗೂ ಹಿಂಗಿಸಲಾರದು. ಕಾರ್ಲ್ ಜಿ. ಯಂಗನ ಅನುಭವವನ್ನು ನಾವಿಲ್ಲಿ ನೆನಪುಮಾಡಿಕೊಳ್ಳಬಹುದು. ಆತನು ಮನೋವೈದ್ಯನಾಗಿ ಅರವತ್ತು ವರ್ಷಗಳಿಗೂ ಮೀರಿದ ತನ್ನ ಅನುಭವದಲ್ಲಿ, ದೈವಬಲವನ್ನು ನಂಬಿದ್ದ, ದೈವ ಶ್ರದ್ಧೆಯುಳ್ಳ ಒಬ್ಬನೇ ಒಬ್ಬ ರೋಗಿಯೂ ತನಗೆ ಸಿಗಲಿಲ್ಲ ಎಂದಿದ್ದಾನೆ. ಮಹಾ ಚೇತನವು ಎಂತಹ ಅಪರಿಮಿತ ಶಕ್ತಿಯ ಗಣಿ ಎಂದರೆ, ಅದು ನಮ್ಮ ಜೀವನದ ಎಲ್ಲ ಒತ್ತಡಗಳನ್ನು ಉದ್ವೇಗಗಳನ್ನು ತುಂಬ ಪರಿಣಾಮಕಾರಿಯಾಗಿ ಸಮಾಧಾನಪಡಿಸುತ್ತದೆ. ಇದರೆದುರಿಗೆ ಯಾವ ಉಪಶಮನಕಾರಿ ಮಾತ್ರೆಯೂ ನಿಲ್ಲದು."

'ನಮ್ಮ ಸಂಸ್ಕೃತಿ' ಎಂಬ ಸಿ. ರಾಜಗೋಪಾಲಾಚಾರಿ ಅವರ ಗ್ರಂಥದಲ್ಲಿ ಒಂದು ಮುಖ್ಯ ವಿಷಯವು ಪ್ರಸ್ತಾಪಿಸಲ್ಪಟ್ಟಿದೆ. ಇತರ ದೇಶಗಳಿಗಿಂತ ಅಧಿಕವಾಗಿ ಭಾರತವು ಉತ್ತಮ ಆಡಳಿತಗಳ ನಡುವೆ ದೀರ್ಘವಾದ ಬಿಡುವುಗಳನ್ನು ಅನುಭವಿಸಿದೆ.

ಇಂತಹ ಸಂದರ್ಭಗಳಲ್ಲಿ ಸಾಮಾನ್ಯ ಪ್ರಜೆಗಳಿಗೆ ಸಶಕ್ತವಾದ ಕೇಂದ್ರವಾಗಲೀ ಸ್ಥಳೀಯ ಸರ್ಕಾರವಾಗಲೀ ಆಳ್ವಿಕೆಯನ್ನು ನಡೆಸಿದ್ದು ಕಾಣಲಿಲ್ಲ. "ಅರಾಜಕತೆಯ ಇಂತಹ ಕಾಲಗಳಲ್ಲಿ ಜನರು ತಮ್ಮ ಸುಸಂಸ್ಕೃತವಾದ ನಡವಳಿಕೆಯಿಂದಲೋ ಅಥವಾ ಕುಟುಂಬದ ಹಿಡಿತಕ್ಕೆ ಒಳಪಟ್ಟು, ಅಥವಾ ಜಾತಿಯ ಕಟ್ಟುಪಾಡುಗಳಿಂದಲೋ ತಮ್ಮನ್ನು ತಾವು ಕಾಯ್ದುಕೊಂಡರೇ ವಿನಃ ಅನ್ಯಥಾ ಅಲ್ಲ. ಸಮಾಜ ಜೀವನದಲ್ಲಿ ನೀತಿ ನಿಯಮಗಳ ಪಾಲನೆ ನಡೆಯುತ್ತಿದ್ದುದು ಅಷ್ಟೇ ಅಲ್ಲ, ವ್ಯಾಪಾರ ವ್ಯವಹಾರಗಳಲ್ಲಿಯೂ, ಕಲೆಯಲ್ಲಿಯೂ ಉನ್ನತಿ ಸಾಧ್ಯವಾಗಿದ್ದಿತು. ಕುಶಲಕಲೆಗಳಲ್ಲದೆ ಸಾಮಾನ್ಯ ಜನಜೀವನಕ್ಕೆ ಆಧಾರವಾಗಿದ್ದ ಜೀವನಾವಶ್ಯಕವಾದ ಕಲೆಗಳಲ್ಲಿಯೂ ಉತ್ತಮವಾದ ಸ್ಥಿತಿಯೇ ಇದ್ದಿತು. ಸರ್ಕಾರವಿಲ್ಲದಿದ್ದರೂ ಸಮಾಜ ಜೀವನದಲ್ಲಿ ಅಂತಹ ವ್ಯತ್ಯಾಸವೇನೂ ಆಗಲಿಲ್ಲ. ನಾಮಕಾವಸ್ಥೆಯ ಒಬ್ಬ ರಾಜನ ಹೆಸರಿದ್ದರೇ ಸಾಕು, ಕೆಲವು ವೇಳೆ ಅದೂ ಇಲ್ಲದಿದ್ದರೂ ಜನರ ಜೀವನ ನಿರಾತಂಕವಾಗಿದ್ದಿತು."

"ದೇಶವನ್ನು ವ್ಯಾಪಿಸಿಕೊಂಡ ಧರ್ಮದಿಂದಾಗಿ, ಕುಟುಂಬಗಳಲ್ಲಿ ಇದ್ದಂತಹ ಕಟ್ಟುಪಾಡಿನಿಂದಾಗಿ, ಜಾತಿವ್ಯವಸ್ಥೆಯಲ್ಲಿ ಇದ್ದಂತಹ ಒಂದು ನೀತಿಯಿಂದಾಗಿ ದೇಶವು ಮುರಿದು ಚೂರಾಗದೆ ಒಂದಾಗಿಯೇ ಇದ್ದಿತು. ಜೀವನದ ನಾನಾ ಹಂತಗಳಲ್ಲಿ ಒಂದು ಅಂಶವು ಜನರಲ್ಲಿ ಸನ್ನಡತೆಯನ್ನು ಕಾಯ್ದಿಟ್ಟುದು ಕಂಡುಬರುತ್ತದೆ. ಅದೇ ಕುಲಧರ್ಮ, ಜಾತಿಧರ್ಮ ಮತ್ತು ಭಾರತ ಧರ್ಮ........."

"ಪ್ರಪಂಚದ ಇನ್ನಾವುದೇ ಜನಾಂಗದಲ್ಲಿಯೂ ಸರ್ಕಾರವೇ ಇಲ್ಲದಾದಂತಹ ಕಾಲಗಳಲ್ಲಿ ಸಂಸ್ಕೃತಿಯು ಇಷ್ಟು ವ್ಯಾಪಕವಾಗಿ, ಇಷ್ಟು ಪರಿಣಾಮಕಾರಿಯಾಗಿ ಜನರನ್ನು ಕಟ್ಟಿ ಆಳಿದುದನ್ನು ನಾನು ಅರಿತಿಲ್ಲ".

ಭಾರತೀಯ ಧರ್ಮವು ಆತ್ಮಸಂಯಮವನ್ನು ಒತ್ತಿ ಹೇಳುತ್ತದೆ. ಬಲಿಷ್ಠರಾದವರು ದುರ್ಬಲರನ್ನು ಸಹಾನುಭೂತಿಯಿಂದ ಕಾಣಬೇಕೆಂದು ಅದು ಹೇಳುತ್ತದೆ. ದೇಶ ಧರ್ಮಕ್ಕೋಸ್ಕರ ಮತ್ತು ಆತ್ಮೋನ್ನತಿಯ ಸಾಧನೆಗಳಿಗಾಗಿ ನಮ್ಮ ಸಧ್ಯದ ಸ್ವಾರ್ಥಮಯವಾದ ಸುಖಗಳನ್ನು ಸಂಯಮಕ್ಕೆ ಒಳಪಡಿಸಿ, ಅಂಕೆಯಲ್ಲಿಟ್ಟುಕೊಳ್ಳಬೇಕೆಂದು ಭಾರತೀಯ ಧರ್ಮವು ಸೂಚಿಸುತ್ತದೆ.

ಎಲ್ಲಕ್ಕಿಂತ ಮಿಗಿಲಾಗಿ ಭಾರತೀಯ ಸಂಸ್ಕೃತಿಯು ಜ್ಞಾನೋನ್ನತಿಯ ಸಾಧನೆಗೆ ಉತ್ತೇಜನ ಕೊಡುತ್ತದೆ. ಸಂತೆಯಲ್ಲಿ ನಮ್ಮ ಬುದ್ಧಿವಂತಿಕೆಯನ್ನು ಪ್ರದರ್ಶಿಸಿ ಮಾರಾಟದ ಸರಕನ್ನಾಗಿ ಮಾಡುವುದಕ್ಕಲ್ಲ, ಅಂತರಂಗದ ಸಂತೋಷಕ್ಕಾಗಿ, ಮನಸ್ಸಿನ ಕುತೂಹಲದ ತಣಿವಿಗಾಗಿ ನಾವು ಜ್ಞಾನೋಪಾಸನೆಯನ್ನು ಕೈಗೊಳ್ಳಬೇಕು.

* * * *



## ೭. ಭಾರತೀಯ ಧರ್ಮ ಮತ್ತು ಸಂಸ್ಕೃತಿಯ ಸಾರ

ಭಾರತೀಯ ಸಂಸ್ಕೃತಿಯ ಸಾರರೂಪವಾದ ಗುಣಗಳು ಆತ್ಮ ಶಿಕ್ಷಣ, ಆತ್ಮಸಂಯಮ, ಮತ್ತು ಆತ್ಮೋನ್ನತಿ. ಮೂರು ಸಾವಿರ ವರ್ಷಗಳ ಹಿಂದೆ ಅವುಗಳನ್ನು ಪ್ರತಿಪಾದಿಸಿದ ಕಾಲದಲ್ಲಿ ಅವು ಹೇಗೆ ಸಂಗತವಾಗಿದ್ದವೋ ಈಗಲೂ ಅವು ಅಷ್ಟೇ ಪ್ರಕೃತ. ಅಬರ್ಡೀನ್ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಂದರ್ಭದಲ್ಲಿ ಸರ್ ಥಾಮಸ್ ಟೇಲರ್ ಅವರು ಮಾಡಿದ ಭಾಷಣದಲ್ಲಿ ನೀವು ಇದರ ಪ್ರತಿಧ್ವನಿಯನ್ನು ಕೇಳಬಹುದು:

"ಕಾನೂನಿಗೆ ಒಳಪಟ್ಟು ನಾವು ನಡೆಸಬೇಕಾದ ನೈತಿಕ ಕರ್ತವ್ಯಗಳು ಎಷ್ಟೋ ಇವೆ. ಈ ಕರ್ತವ್ಯಗಳಿಂದಾಚೆಗೂ ನಮ್ಮ ನಡವಳಿಕೆಯನ್ನು ನಿಯಂತ್ರಿಸುವ ಯಾವುದೋ ಒಂದು ಅಂಶವಿದೆ. ಅದು ಕಾನೂನಿಗೆ ಒಳಪಡದ ಸೂಕ್ಷ್ಮ ಸಂಗತಿ. ಯಾರ ಬಲವಂತಕ್ಕೂ ತಗ್ಗದ ಈ ಸೂಕ್ಷ್ಮ ವಿಧೇಯತೆಯು ನಿಯಮಾನುಸಾರ ಮಾಡಬಹುದಾದದ್ದನ್ನೆಲ್ಲ ಮಾಡಬಹುದು ಎಂಬ ಭಾವನೆಗೆ ವಿರುದ್ಧವಾಗಿದೆ. ಆತ್ಮವನ್ನು ಶಿಸ್ತಿಗೆ ಒಳಪಡಿಸುವ ಶಕ್ತಿಯು ನಮ್ಮ ಅಹಂಕಾರವನ್ನು ಮಟ್ಟ ಹಾಕುವಂತಹುದು. ಕಾನೂನು ರೀತ್ಯಾ ಸರ್ಕಾರದಲ್ಲಾಗಲೀ, ವಿಜ್ಞಾನದಲ್ಲಾಗಲೀ, ಕೈಗಾರಿಕೆಗಳಲ್ಲಾಗಲೀ, ಅಥವಾ ವೈಯಕ್ತಿಕವಾದ ನಡವಳಿಕೆಗಳಲ್ಲಾಗಲೀ, ಯಾವುದು ತಾಂತ್ರಿಕವಾಗಿ ಸಾಧ್ಯವೋ, ಕಾನೂನುಬದ್ಧವೋ ಅದಕ್ಕೆ ವ್ಯತಿರಿಕ್ತವಾಗಿ ಈ ಭಾವನೆ ಹರಿಯುತ್ತದೆ. ಇತಿಹಾಸದ ಉದ್ದಕ್ಕೂ ಮನುಷ್ಯರನ್ನು ಈ ಶಿಸ್ತು ಜನರ ಹೃದಯವನ್ನು ಕೋಪತಾಪಗಳಿಂದ ಕಲ್ಲಾಗದಂತೆ, ಅವರ ವಿವೇಕದ ವಿರುದ್ಧ ತಿರುಗಿ ಬೀಳದಂತೆ ಕಾಪಾಡಿದೆ. ನಮ್ಮ ತಲೆಮಾರಿನ ಜನರ ಉಳಿವಿಗೆ ಇದೇ ಮುಖ್ಯವಾದ ತಳಹದಿ ಎನ್ನಬಹುದು".

ಪ್ರಾಚೀನ ಭಾರತವನ್ನು ಒಂದು ಮಹಾನ್ ದೇಶವಾಗಿ ಮಾಡಿದ ಈ ಮೌಲ್ಯಗಳ ಕಲ್ಪನೆಯನ್ನು ಇನ್ನೂ ಉತ್ತಮಪಡಿಸುವುದು ಕಷ್ಟಸಾಧ್ಯ. ನಮ್ಮ ಹಿಂದಿನ ಋಷಿಗಳು ಒಂದು ದೇಶದ ಹಿರಿಮೆಯನ್ನು ಅದರ ವಿಸ್ತಾರದಿಂದಾಗಲೀ, ಐಶ್ವರ್ಯದಿಂದಾಗಲೀ ನಿರ್ಧರಿಸಲಿಲ್ಲ. ಆದರೆ ಅಲ್ಲಿನ ಸರ್ಕಾರ ಆಡಳಿತದಲ್ಲಿಯೂ ಮತ್ತು ಪ್ರಜೆಗಳ ಆಂತರಿಕ ಜೀವನದಲ್ಲಿಯೂ ಕಂಡುಬರುವ ನ್ಯಾಯಯುತವಾದ ಋಜುಮಾರ್ಗವನ್ನು ಅವರು ಅಳತೆಗೋಲಾಗಿ ಭಾವಿಸಿದ್ದರು.

ಅವರ ಚಿರಂತನ ಉಪದೇಶಗಳ ಸಾರವೆಂದರೆ ಮನುಷ್ಯನ ಜೀವಿತದ ಅಭಿವೃದ್ಧಿಯನ್ನು ಸೂಚಿಸುತ್ತಿರುವುದು, ನೈತಿಕ, ಧಾರ್ಮಿಕ ಜೀವನವೇ ಹೊರತು ಅವರ ಐಶ್ವರ್ಯ, ಭೌತಿಕ ಸಾಧನೆಗಳು ಅಲ್ಲ. ತ್ಯಾಗವು ವಿಜಯಕ್ಕಿಂತ ಎಷ್ಟೋ ಪಾಲು ಮೇಲೆಂದೂ ಭಾವಿಸಲಾಗಿತ್ತು. ಅವರಿಗೆ ವೈರಾಗ್ಯವೇ ಕಿರೀಟಪ್ರಾಯವಾದ ಪರಮ ಗಂತವ್ಯವಾಗಿದ್ದಿತು. ಸಮಾಜದಲ್ಲಿ ಒಬ್ಬ ಪ್ರಜೆಯ ಸ್ಥಾನಮಾನಗಳು ಅವನ ಐಶ್ವರ್ಯ ಅಥವಾ ಅಧಿಕಾರದಿಂದ ನಿರ್ಣಯವಾಗುತ್ತಿರಲಿಲ್ಲ. ಅವನ ವಿದ್ವತ್ತು, ಗುಣಗಳು ಮತ್ತು ಅವನು ಸಾಧಿಸಿದ ಶೀಲಸ್ವಭಾವಗಳೂ ಆತನ ಹಿರಿಮೆಯನ್ನು ನಿರ್ಣಯಿಸುತ್ತ ಇದ್ದವು. ಇದಕ್ಕೆ ಅತ್ಯುತ್ತಮ ಉದಾಹರಣೆ ಎಂದರೆ ಸುಪ್ರಸಿದ್ಧವಾದ ಅಶೋಕನ ಕತೆ. ಅವನು ಬುದ್ಧನ ಅನುಯಾಯಿಯಾಗಿರುತ್ತ, ಬೌದ್ಧ ಭಿಕ್ಷುಗಳು ಎದುರಾದಾಗ ಅವರಿಗೆ ತುಂಬ ಗೌರವದಿಂದ ನಮಸ್ಕರಿಸುವ ಅಭ್ಯಾಸವನ್ನಿಟ್ಟುಕೊಂಡಿದ್ದನು. ಅವನ ಮಂತ್ರಿಯಾದ 'ಯಷ'ನು 'ಒಬ್ಬ ಸಾರ್ವಭೌಮನಾಗಿ ಸನ್ಯಾಸಿಗಳ ಮುಂದೆ ತಲೆ ಬಾಗುವುದು ಸರಿಯಲ್ಲ' ಎಂದು ಅಭಿಪ್ರಾಯಪಟ್ಟಾಗ, ಅಶೋಕನು ಕೊಟ್ಟ ಉತ್ತರವೇ ಬೇರೆ. "ನಾನು ಅವರಿಗೆ ತಲೆಬಾಗಿ ನಮಿಸುವುದು ಅವರ ವಿದ್ವತ್ತು ವಿವೇಚನೆ ಮತ್ತು ತ್ಯಾಗಗಳಲ್ಲಿ ನನಗಿರುವ ಅಸೀಮವಾದ ಗೌರವದಿಂದ. ಮಂತ್ರಿ ಯಷನೇ, ಮನುಷ್ಯರ ಜೀವನದಲ್ಲಿ ಪ್ರಮುಖವಾಗಿ ಪರಿಣಮಿಸುವುದು ಅವರ ಅಧಿಕಾರವಲ್ಲ. ಗುಣಗಳೂ ವಿವೇಕವೂ ಮನುಷ್ಯರನ್ನು ಹಿರಿಯರನ್ನಾಗಿ ಮಾಡುತ್ತವೆ. ಬಾಡಿ ಬಸವಳಿದ ಈ ಮಾನವ ಶರೀರಗಳಲ್ಲಿ ಅತ್ಯಂತ ಸುಂದರವಾದ, ಉತ್ತಮವಾದ ಮನಸ್ಸುಗಳು ನೆಲಸಿವೆ. ನೀನು ನಿನ್ನ ಅಜ್ಞಾನವನ್ನು ಕೊಡವಿ ಮೇಲೆದ್ದಾಗ ಇಂತಹ ಕೆಲವೇ ಕೆಲವು ಮಹನೀಯರು ಮಾನವ ಸಾಗರದಲ್ಲಿ ದೊರಕುತ್ತಾರೆಂಬುದನ್ನು ಗುರುತಿಸುವೆ. ಒಬ್ಬ ಒಳ್ಳೆಯ ಅಕ್ಕಸಾಲಿಯು ಕೆಲಸಕ್ಕೆ ಬಾರದ ಕಲ್ಲುಗಳ ನಡುವೆ ಇರುವ ರತ್ನಗಳನ್ನು ಗುರುತಿಸುತ್ತಾನಲ್ಲವೆ?"

ಸಂಸ್ಕೃತದ 'ಧರ್ಮ' ಎಂಬ ಶಬ್ದದ ಅರ್ಥವನ್ನು ಆಂಗ್ಲ ಭಾಷೆಗೆ ಸುಲಭವಾಗಿ ತರ್ಜುಮೆ ಮಾಡಲಾಗದು. ಈ ಶಬ್ದವು ತನ್ನೊಳಗೆ, ಕಾನೂನು, ಋಜುತ್ವ, ಕರ್ತವ್ಯ ಮತ್ತು ನೈತಿಕ ಮೌಲ್ಯಗಳ ತಳಹದಿ ಇವೆಲ್ಲದರ ಪರಿಕಲ್ಪನೆಯ ಅಂಶಗಳನ್ನು ಒಳಗೊಂಡಿದೆ. ನಮ್ಮ ಸಮಾಜದ ಇತರರನ್ನು ಸೇವಿಸುವುದೇ ಜೀವನದ ಅತ್ಯಂತ ಶ್ರೇಷ್ಠವಾದ ಗುರಿ ಎಂದು ಧರ್ಮವು ಆಜ್ಞೆಮಾಡುತ್ತದೆ. ಸ್ವಾಮಿ ವಿವೇಕಾನಂದರ ಅಭಿಪ್ರಾಯ ಹೀಗಿದೆ:

"ದೇವರು ಎಲ್ಲಾ ಜೀವಿಗಳಲ್ಲಿಯೂ ನೆಲೆಸಿದ್ದಾನೆ ಎಂಬುದು ಪರಮ ಸತ್ಯ. ಅವರೆಲ್ಲ ಅವನ ಅಗಣಿತ ಆಕಾರಗಳು. ದೇವರನ್ನು ಬೇರೆ ಎಲ್ಲಿಯೂ ಹುಡುಕಬೇಕಾಗಿಲ್ಲ. ಎಲ್ಲ ಪೂಜೆಗಳಿಗಿಂತ ಮುಖ್ಯವಾದುದು ನಮ್ಮ ಸುತ್ತಮುತ್ತ



ಬಾಳುತ್ತಿರುವವರ ಉಪಚಾರ. ಎಲ್ಲರನ್ನೂ ಯಾರು ಸೇವಿಸುತ್ತಾನೋ ಅವನು ಮಾತ್ರ ದೇವರನ್ನು ಸೇವಿಸುತ್ತಾನೆ".

* * * *

# ೮. ಕರ್ಮ ಮತ್ತು ಪುನರ್ಜನ್ಮ

ಕರ್ಮ ಎಂಬ ಸಂಸ್ಕೃತದ ಪದವನ್ನು ಆಂಗ್ಲ ಭಾಷೆಗೆ ಒಂದು ಶಬ್ದದಲ್ಲಿ ಪರಿವರ್ತಿಸಿ ಹೇಳುವುದು ಸಹ ಕಷ್ಟವೇ; ಕರ್ಮ ಸಿದ್ಧಾಂತವು ನೈತಿಕ ಕಾರ್ಯಕಾರಣ ಸಂಬಂಧದ ಸಾರವೆಂದು ಹೇಳಬಹುದು. ಇದು ಮಾನವನ ಚಿಂತನೆಗಳಲ್ಲಿ ಒಂದು ಶ್ರೇಷ್ಠವಾದ ಕೊಡುಗೆ. ಕರ್ಮ ಸಿದ್ಧಾಂತವನ್ನು ಎಲ್ಲರೂ ಅರ್ಥಮಾಡಿಕೊಂಡು ಅದಕ್ಕೆ ಬೆಲೆಕೊಟ್ಟಿದ್ದರೆ ಮಾನವ ಜನಾಂಗದಲ್ಲಿ ಆನಂದವು ನೆಲೆಸುತ್ತಿದ್ದಿತು. ಕರ್ಮ ಸಿದ್ಧಾಂತದ ಔಚಿತ್ಯವನ್ನರಿತರೆ ಜನಾಂಗಕ್ಕೆ ಶಾಂತಿಯೂ ಭೂಮಿಯ ಮೇಲಿನ ಬದುಕಿನಲ್ಲಿ ನ್ಯಾಯವೂ ನೆಲೆಸುತ್ತದೆ – ಎಂಬ ವಿಚಾರವು ಅರಿವಿಗೆ ಬರಬೇಕಾದರೆ ಮಾನವ ಜನಾಂಗವು ಇನ್ನೂ ಎಷ್ಟೋ ತಲೆಮಾರುಗಳನ್ನು ಬಹುಶಃ ಶತಮಾನಗಳನ್ನೇ ಕಳೆಯಬೇಕಾಗುತ್ತದೆ ಎಂದು ಕಾಣುತ್ತದೆ.

ಈ ಭೂಮಿಯ ಮೇಲೆ ಯಾರಿಗೂ ಶಿಕ್ಷೆಯಾಗಲೀ ಬಹುಮಾನವಾಗಲೀ ದೊರಕುತ್ತದೆ ಎಂದು ಕರ್ಮಸಿದ್ಧಾಂತವು ಒಪ್ಪುವುದಿಲ್ಲ. ಅವೆಲ್ಲವೂ ಸುಮ್ಮನೆ ಅನಿವಾರ್ಯವಾದ ಪರಿಣಾಮಗಳು ಎನ್ನುತ್ತದೆ. ನೀವು ಬಿತ್ತಿದ್ದನ್ನು ನೀವು ಬೆಳೆಯುತ್ತೀರಿ. ಕೆಲವೊಮ್ಮೆ ನೀವು ಬಿತ್ತಿದ್ದನ್ನು ಇತರರು ಕೊಯ್ದುಕೊಳ್ಳುತ್ತಾರೆ. ದೇಶಕಾಲಗಳ ಒಡನಾಟದಲ್ಲಿ ಒಂದು ಬಗೆಯ ಆಂತರಿಕ ಸಂಬಂಧವೂ, ಬೆಸೆದ ಒಳಕೊಂಡಿಗಳೂ ಎಲ್ಲೆಲ್ಲಿಯೂ ಕಂಡುಬರುತ್ತವೆ. ಯಾರೊಬ್ಬರೂ ತಮ್ಮ ಪಾಡಿಗೆ ತಾವು ಬದುಕಿಕೊಂಡಿರುವುದು ಸಾಧ್ಯವಿಲ್ಲ. ಭೂತವು ಭವಿಷ್ಯತ್ತಿನೊಡನೆ ಬೆಸೆದುಕೊಂಡಿದೆ. ಈ ಲೋಕವು ಮತ್ತೊಂದು ಲೋಕದೊಡನೆ ಬೆಸೆದುಕೊಂಡಿದೆ. ಮನುಷ್ಯರು ಇತರ ಮನುಷ್ಯರೊಡನೆ ಆಲೋಚನೆಗಳಲ್ಲಿ ಕ್ರಿಯೆ ಮತ್ತು ಪ್ರತಿಕ್ರಿಯೆಗಳಲ್ಲಿ, ಬದುಕಿರುವವರು ಕಳೆದುಹೋದವರೊಡನೆಯೂ ಹೇಗೋ ಹೆಣೆದುಕೊಂಡಿರುತ್ತಾರೆ. ಕರ್ಮ ಸಿದ್ಧಾಂತವು ಎಲ್ಲರನ್ನು ಕಟ್ಟಿ ಆಳುತ್ತಿದೆ.

ಒಬ್ಬ ಮಾನವನು ತನ್ನ ಕರ್ಮಫಲವನ್ನು ತಾನನುಭವಿಸಿದಂತೆ, ಪ್ರತಿಯೊಂದು ಗುಂಪೂ, ಜನಾಂಗವೂ, ದೇಶದ ಜನತೆಯೂ, ಮಾನವ ಕುಲವೂ ತನ್ನ ಕರ್ಮ ಫಲವನ್ನು ಅನುಭವಿಸುತ್ತದೆ. ಒಂದು ಗುಂಪಿನ, ಜನಾಂಗದ ಸಾಮೂಹಿಕ ಕರ್ಮದ ಪರಿಕಲ್ಪನೆಯು ಬಹಳ ಗಂಭೀರವುಳ್ಳದ್ದು. ಅದನ್ನು ಯಾರಾದರೂ ಅನ್ವೇಷಣೆ ಮಾಡುವುದು, ಚಿಂತಿಸುವುದು ಹಾಗಿರಲಿ ಅರ್ಥಮಾಡಿಕೊಂಡೇ ಇಲ್ಲ.



ಪುನರ್ಜನ್ಮವು ಕರ್ಮದೊಡನೆ ಹೆಣೆದುಕೊಂಡಿದೆ. ನಮ್ಮ ಪ್ರಾಚೀನ ಕರ್ಮಗಳನ್ನು ಅನುಭವಿಸುವುದಕ್ಕೆ ಅಥವಾ ಇತರ ಸಾಧನೆಗಳಿಗಾಗಿ ಪುನರ್ಜನ್ಮಗಳಲ್ಲಿ ಅವಕಾಶವಿದೆ. ಕೃಷ್ಣನು ಅರ್ಜುನನಿಗೆ ಹೀಗೆಂದಿದ್ದಾನೆ. "ನಾವಿಬ್ಬರೂ ಎಷ್ಟೋ ಜನ್ಮಗಳನ್ನು ಎತ್ತಿದ್ದೇವೆ. ನಿನಗೆ ಅವುಗಳ ನೆನಪಿಲ್ಲ. ಆದರೆ ನಾನು ಎಲ್ಲವನ್ನೂ ಬಲ್ಲೆ".

ಕವಿಗಳು ತಮ್ಮ ದಿವ್ಯ ಸ್ಫೂರ್ತಿಯಲ್ಲಿ ಮತ್ತು ಪ್ರತಿಭೆಯ ಉನ್ಮೇಷಗಳಲ್ಲಿ ಪುನರ್ಜನ್ಮದ ಬಗೆಗೆ ಬರೆದಿದ್ದಾರೆ. ಶೆಲ್ಲಿ, ವರ್ಡ್ಸ್‌ವರ್ತ್, ಟೆನಿಸನ್, ಬ್ರೌನಿಂಗ್ ರೊಸೆಟ್ಟಿ, ಲಾಂಗ್‌ಫೆಲೊ ಮತ್ತು ವ್ಹಿಟ್‌ಮನ್‌ರ ಕಾವ್ಯ ಭಾಗಗಳಲ್ಲಿ ಪುನರ್ಜನ್ಮದ ಬಗೆಗೆ ಕವಿಗಳಲ್ಲಿ ಆಸಕ್ತಿ ಇರುವುದು ಕಂಡುಬರುತ್ತದೆ.

ತನ್ನ ಹದಿನಾರನೆಯ ವಯಸ್ಸಿನಲ್ಲಿಯೇ ಸಾವಿನಿಂದ ಬಾಡಿಹೋದ ಎವಲಿನ್‌ಹೋಪ್ ಎಂಬ ಬಾಲಿಕೆಯನ್ನು ಕುರಿತ ಕವಿತೆಯಲ್ಲಿ ಬ್ರೌನಿಂಗ್‌ನು ಮರುಜನ್ಮಗಳನ್ನು ಕುರಿತು ಹೀಗೆಂದಿದ್ದಾನೆ:

"ನನ್ನ ಪ್ರೀತಿಯ ಚಲುವೆಯೆ! ನೀನು ಮರುಹುಟ್ಟು ಪಡೆದು ತಡವಾಗಿಯಾದರೂ ಧರೆಗೆ ಬರುವೆ ಎಂದು ಬಯಸುವೆ.
ನಾವೆಷ್ಟೋ ಜನ್ಮಗಳಲಿ ಸಂಚರಿಸಿ ಕಲಿಯಬೇಕಾದುದೆಷ್ಟೋ ಇರಬಹುದು.
ಮರೆಯಲ್ಲಿ ಏನಾದರೂ ಇದ್ದೀತು. ಆದರೂ ನಿನ್ನ ಸೇರುವುದು ಖಚಿತ".

ಜಾನ್ ಮೇಸ್‌ಫೀಲ್ಡನು ಅಷ್ಟೇ ವ್ಯಕ್ತವಾಗಿ ಪುರ್ನಜನ್ಮವನ್ನು ಕುರಿತು ಹೇಳಿದ್ದಾನೆ:

"ಮನುಜನೊಬ್ಬ ಸಾವನಪ್ಪಿ
ಹಿಂದಿರುಗುವನು ಧರೆಗೆ ಪುನಃ ಆತ್ಮರೂಪಿ
ನವ ಶರೀರವ ಧರಿಸಿ, ಇನ್ನೊಬ್ಬ ಜನನಿಯಲಿ ಮತ್ತೆ ಮೂಡಿ
ಹೊಸ ಬಿಗಿಯ ಮೈ, ಚುರುಕಿನ ಬುದ್ಧಿ ಪಡೆದ ಹಳೆಯ
ಆತ್ಮ ಪಯಣಿಸುವುದು ಪುನಃ".

* * * *

# ೯. ಸ್ವಾತಂತ್ರ್ಯ ಮತ್ತು ಸಹನೆ

ಧಾರ್ಮಿಕ ಸ್ವಾತಂತ್ರ್ಯ ಮತ್ತು ಸಹಿಷ್ಣುತೆಯ ಅಪ್ರತಿಮವಾದ ಸಂಪ್ರದಾಯವನ್ನು ಭಾರತವು ಎಂದಿನಿಂದಲೊ ಪಡೆದುಕೊಂಡಿದೆ. ಇಂತಹ ಸಂಪ್ರದಾಯಕ್ಕೆ ಕಾರಣವಾದ ಸತ್ಯದ ಅರಿವು ಯಾರೊಬ್ಬರ ಅಥವಾ ಒಂದು ಜನಾಂಗದ ಸ್ವತ್ತಲ್ಲ ಎಂದು ತಿಳುವಳಿಕೆ. ಋಗ್ವೇದದ ಜಗತ್ಪ್ರಸಿದ್ಧವಾದ ಮಾತುಗಳನ್ನು ಕೇಳಿ :

"ಎಲ್ಲಾ ದಿಕ್ಕುಗಳಿಂದಲೂ ನಮ್ಮ ಮನಸ್ಸಿಗೆ ಉನ್ನತವಾದ ಆಲೋಚನೆಗಳು ಬರಲಿ."

ಪ್ರತಿಯೊಬ್ಬ ಮನುಷ್ಯನೂ ತನ್ನ ಮುಕ್ತಿಗಾಗಿ ತಾನೇ ಶ್ರಮಿಸಬೇಕು ಎಂಬ ವಿಚಾರವನ್ನು ಆತ್ಮೋನ್ನತಿಯ ಸಾಧನೆಗೂ, ಅವನ ಮುಕ್ತಿಗೂ ಕಾರಣವಾಗುತ್ತದೆ ಎಂಬ ವಿಷಯವನ್ನು ಋಷಿಗಳು ಅರಿತಿದ್ದರು. ಯಾರ ಅಧಿಕಾರವನ್ನಾದರೂ ಮೂಢರಂತೆ ಅನುಸರಿಸುವುದು ನಮ್ಮ ಆಧ್ಯಾತ್ಮಿಕ ಬೆಳವಣಿಗೆಗೆ ನ್ಯೂನತೆಯಾಗಿ ಪರಿಣಮಿಸುವುದರಲ್ಲಿ ಸಂದೇಹವೇ ಇಲ್ಲ. ಶ್ರುತಿಯ ಅಭಿಪ್ರಾಯಗಳನ್ನು ಸುಮ್ಮನೆ ಒಪ್ಪಿಕೊಳ್ಳುವುದು ಕೂಡ ಸರಿಯಾಗದು. ಮುಕ್ತಿ ಎನ್ನುವುದು ಅಗ್ಗವಲ್ಲ. ಆತ್ಮೋನ್ನತಿಯನ್ನು ಹಣದಿಂದ ಕೊಂಡುಕೊಳ್ಳಲಾಗುವುದೂ ಇಲ್ಲ. ಅದಕ್ಕೆ ಯಾವ ಸಿದ್ಧ ಸೂತ್ರಗಳೂ ಇಲ್ಲ. ಯಾರ ತೋರುಬೆರಳಿನ ಸಹಾಯವೂ ಸಿಗಲಾರದು. ಯಾವ ಸಿದ್ಧೌಷಧವೂ ನಡೆಯುವುದಿಲ್ಲ. ಆತ್ಮದ ದಾರಿಯು ಇಕ್ಕಟ್ಟಾದುದು. ಎರಡು ಕಡೆಗಳಲ್ಲಿಯೂ ಬಾಯ್ದೆರೆದುಕೊಂಡ ವರ್ಣನೆಗಳು ಕಾದಿವೆ. ಕಠೋಪನಿಷತ್ತಿನ ಪ್ರಕಾರ,

"ಮುನಿಪ್ರಣೀತವಾದಂತೆ ಅದು ಅಸಿಧಾರಾವ್ರತ ದುರ್ಗಮವಾದ ಹಾದಿ."

ಅದು ಕಷ್ಟಕರವಾದ ಹಾದಿಯಾದರೂ ಧ್ಯಾನ ಮತ್ತು ತಪಸ್ಸುಗಳಿಂದ ದೈವಾನುಭವವು ಸಾಧ್ಯವಾಗುತ್ತದೆ. ಅಂತರಾತ್ಮವು ಶಾಶ್ವತವಾದ ಉನ್ನತ ನೆಲೆಗಳಲ್ಲಿ ನೆಲಸಿ ಸಂಚಯಿಸುವಾಗ ಇದು ಸಾಧ್ಯ. ಹೇಗೇ ಆದರೂ ಕ್ರಿಯಾಶೀಲತೆಯೂ ಧ್ಯಾನ ತಪಸ್ಸುಗಳಷ್ಟೇ ಫಲಕಾರಿಯಾದದ್ದು. ಮುಕ್ತಿಗೆ ಮಾರ್ಗವು ಪ್ರಾರ್ಥನೆಯ ಮೂಲಕವೂ ಆಗಬಹುದು. ಧ್ಯಾನದ ಮೂಲಕವೂ ಆಗಬಹುದು. ಶ್ರೀ ಅರವಿಂದ ಮಹರ್ಷಿಗಳಂತಹವರು ಮಾತ್ರ ನಿರಂತರ ಕ್ರಿಯಾಶೀಲತೆ ಮತ್ತು ನಿರಂತರವಾದ ತಪಸ್ಸು ಎರಡನ್ನು ಏಕಕಾಲದಲ್ಲಿ ಸಮಾನವಾಗಿ ಸಾಧಿಸಬಹುದು. ಇದೇ ನಮಗೆ ಭಗವದ್ಗೀತೆ ಕೊಡುವ ಆದರ್ಶ.



"ಯಾರು ಕ್ರಿಯಾಶೀಲತೆಯಲ್ಲಿ ನಿಶ್ಚಲನಾಗಿರುತ್ತಾನೋ
ಮತ್ತು ನಿಶ್ಚಲನಾಗಿದ್ದು ಕ್ರಿಯಾಶೀಲನಾಗಿರುತ್ತಾನೊ
ಅವನನ್ನು ಮನುಷ್ಯರ ನಡುವೆ ಜ್ಞಾನಿ ಎನ್ನಬಹುದು.
ಅವನು ನಿಜವಾದ ಯೋಗಿ ಮತ್ತು ನಿಜವಾದ ಕ್ರಿಯಾಶೀಲನು".

ಸ್ವಾಮಿ ರಂಗನಾಥಾನಂದರು ವೇದಾಂತ ತತ್ವದಲ್ಲಿ ಕಂಡುಬರುವ ಸ್ವಾತಂತ್ರ್ಯ ಮತ್ತು ಸಹಿಷ್ಣುತೆಯನ್ನು ಕುರಿತು ಅವಿಸ್ಮರಣೀಯವಾಗಿ ಹೀಗೆ ವಿವರಿಸಿದ್ದಾರೆ:

'ವೇದಾಂತವು ಆಸ್ತಿಕರನ್ನೂ ಮತ್ತು ಅಜ್ಞೇಯತಾವಾದಿಗಳನ್ನು ಕುರಿತು ಕುಟಿಲತೆಯ ದೃಷ್ಟಿಯನ್ನೇನೂ ಹೊಂದಿಲ್ಲ. ಪಾಶ್ಚಾತ್ಯ ಧರ್ಮಗಳಲ್ಲಿ ಮತ್ತು ಬುದ್ಧಿ ಜೀವಿಗಳಲ್ಲಿ ಹಾಗೊಂದು ತಿಳುವಳಿಕೆ ಸ್ವಲ್ಪ ಇರುವುದನ್ನು ಕಾಣುತ್ತೇವೆ. ದೇವರು ಎಲ್ಲರ ಅಂತರಾತ್ಮದಲ್ಲಿಯೂ ನೆಲಸಿದ್ದಾನೆ ಎಂದಿರುವಾಗ ಅದನ್ನು ನೀವು ಬೌದ್ಧಿಕವಾಗಿ ಅಲ್ಲಗಳೆದರೂ ಬೌದ್ಧಿಕವಾಗಿ ಒಪ್ಪಿಕೊಂಡರೂ ಅದರ ಇರುವಿಕೆಯು ನಿವಾರಣೆಯಾಗಲೀ ಸ್ಥಾಪನೆಯಾಗಲೀ ಸಾಧ್ಯವಿಲ್ಲ. ಮತಗಳೂ ಆಸ್ತಿಕ ಅಥವಾ ನಾಸ್ತಿಕ ಎಂಬ ಶಬ್ದಗಳನ್ನು ಬಳಸಿದಾಗ ಇಷ್ಟೇ ಅದರ ಅರ್ಥ. ಭೌತ ವಿಜ್ಞಾನದಲ್ಲಿ ಹೇಗೋ ಹಾಗೆ ಗುರುತ್ವಾಕರ್ಷಣೆಯ ತತ್ವವನ್ನು ನೀವು ಒಪ್ಪಿ ಅಥವಾ ಬಿಡಿ. ಆ ಸತ್ಯವಾಗಲೀ ಮನುಷ್ಯರ ಜೀವನದ ಮೇಲೆ ಅದರ ಪ್ರಭಾವವಾಗಲಿ ತಪ್ಪುವುದಿಲ್ಲವಲ್ಲ'.

"ಈ ಸತ್ಯವನ್ನು ಮನುಷ್ಯರು ಅಲ್ಲಗಳೆಯುವುದು ಸಾಧ್ಯವಾಗುವುದು, ಅದನ್ನು ಉದಾಸೀನ ಮಾಡುವುದರಿಂದ – ಎಂದು ವೇದಾಂತವು ಹೇಳುತ್ತದೆ. ಮನುಷ್ಯರು ತಮ್ಮ ಆಧ್ಯಾತ್ಮಿಕ ಅಂಧತೆಯಿಂದ ಭೌತಿಕ ಜೀವನದ ಸಂತೃಪ್ತಿಯಲ್ಲಿಯೂ ಆಸೆಗಳಲ್ಲಿಯೂ ಮುಳುಗುತ್ತಾರೆ."

ಶ್ರೀ ರಾಮಕೃಷ್ಣರ ಜೀವನಚರಿತ್ರೆಗೆ ಪ್ರಸ್ತಾವನೆಯನ್ನು ಬರೆಯುತ್ತಾ ಶ್ರೀ ರೊಮೇನ್ ರೊಲ್ಯಾಂಡ್ ಅವರು, 'ಪಾಶ್ಚಾತ್ಯ ಓದುಗ'ರಿಗೆ ಅದನ್ನು ಅರ್ಪಿಸಿದ್ದಾರೆ. ಅಲ್ಲಿ ವೇದಾಂತ ದೃಷ್ಟಿಯನ್ನು ಕುರಿತು ಹೇಳುತ್ತ ... "ಧಾರ್ಮಿಕವಾದ ಮನಸ್ಸು ಮತ್ತು ಧಾರ್ಮಿಕ ವೃತ್ತಿ ಎರಡರಲ್ಲೂ ಭೇದವಿದೆ. ನಮ್ಮ ಮನಸ್ಸಿನಲ್ಲಿ ಧಾರ್ಮಿಕತೆ ಇದೆ ಎಂಬುದಕ್ಕೆ ನಮ್ಮ ಆಲೋಚನೆಗಳ ಉತ್ಕೃಷ್ಟತೆ ಸಾಕ್ಷಿಯಾಗಿರುತ್ತದೆಯೇ ವಿನಃ ನಮ್ಮ ಉದ್ದೇಶಗಳಲ್ಲ. ನಮ್ಮ ಉದ್ದೇಶಗಳಿಗೆ ಮೂಲ ಕಾರಣಗಳು ಯಾವುವು ಎಂಬುದು ತಿಳಿದಾಗ ಅವು ಧಾರ್ಮಿಕವೋ ಅಲ್ಲವೋ ಎಂಬುದು ನಿಶ್ಚಿತವಾಗುತ್ತದೆ".

ಸ್ವಾಮಿ ವಿವೇಕಾನಂದರು ಸುಪ್ರಸಿದ್ಧವಾದ ತಮ್ಮ ಕರ್ಮಯೋಗವನ್ನು ಕುರಿತ ಗ್ರಂಥದಲ್ಲಿ, ವೇದಾಂತದ ವ್ಯಾಪ್ತಿಯನ್ನು ಕುರಿತು ವಿಚಾರ ಮಾಡುತ್ತ, ಅದು ಯಾವುದಾದರೊಂದು ಔಪಚಾರಿಕ ಧರ್ಮಕ್ಕೆ ಬಳಸಲ್ಪಟ್ಟಿರಲಿ ಇಲ್ಲದಿರಲಿ ಎಲ್ಲ ಸತ್ಯಾನ್ವೇಷಕರನ್ನು ಕುರಿತು ಹೀಗೆಂದಿದ್ದಾರೆ ; ಸತ್ಕಾರ್ಯಗಳು ಮತ್ತು ನಿಸ್ವಾರ್ಥತೆಯ ಮೂಲಕ ಮುಕ್ತಿಯನ್ನು ಬಯಸುವವರೆಲ್ಲರಿಗೂ ಕರ್ಮಯೋಗವು ನೀತಿಗಳ

ಮತ್ತು ಧರ್ಮಗಳ ಕಟ್ಟುಪಾಡನ್ನು ತಿಳಿಸುತ್ತದೆ. "ಕರ್ಮಯೋಗಿಯು ಯಾವ ತತ್ವವನ್ನೂ ನಂಬಬೇಕಾಗಿಲ್ಲ. ಅವನು ದೇವರನ್ನು ನಂಬದೆಯೂ ಇರಬಹುದು. ತನ್ನ ಆತ್ಮದ ಸ್ವರೂಪವೇನೆಂಬುದನ್ನು ಅರಿಯದೆಯೂ ಇರಬಹುದು. ಆತನು ಅಪ್ರಾಕೃತವಾದ ತತ್ವಜ್ಞಾನವನ್ನು ಕುರಿತು ಚಿಂತಿಸದೆಯೂ ಇರಬಹುದು. ಆದರೆ ಅವನಿಗೆ ನಿಸ್ವಾರ್ಥತೆಯನ್ನರಿಯುವ ಒಂದು ವಿಶಿಷ್ಟವಾದ ಗುರಿ ಇರುತ್ತದೆ". ಟೆನ್ನಿಸನ್ನನು ಇದೇ ರೀತಿಯ ಆಲೋಚನೆಗೆ ಧ್ವನಿಯಾಗಿದ್ದಾನೆ.'

"ದಯವಿಟ್ಟು ನನ್ನ ಮಾತನ್ನು ನಂಬಿ. ಎಷ್ಟೋ ಮತಗಳಲ್ಲಿ ಇಲ್ಲದಂತಹ ಶ್ರದ್ಧೆಯು ಒಂದು ಪ್ರಾಮಾಣಿಕವಾದ ಸಂದೇಹದಲ್ಲಿರುತ್ತದೆ."

ಪರಮ ಸತ್ಯವಾದ ಬ್ರಹ್ಮತತ್ವವು ಸಹನೆ ಮತ್ತು ಜ್ಞಾನ, ಶಾಂತಿ ಮತ್ತು ಸಜ್ಜನಿಕೆಗಳನ್ನಲ್ಲದೆ ಕೊನೆಯ ಗುರಿಯೆಡೆಗೆ ನಡೆಯುವ ಆತ್ಮನ ಅಸಂಖ್ಯಾತವಾದ ದಾರಿಗಳನ್ನು ಒಳಗೊಂಡಿರಬೇಕು. ಎಮರ್ಸನ್ನನು ಬ್ರಹ್ಮನ ಕಲ್ಪನೆಯನ್ನು ಕುರಿತು ಒಂದು ಪರಿಪೂರ್ಣ ಕವಿತೆಯನ್ನು ಬರೆದಿದ್ದಾನೆ.

'ಕೆಂಬಣ್ಣದ ಕೊಲೆಗಾರನು ಕೊಲುವವ ತಾನೆಂದರಿತರೆ,
ಮೇಣ್, ಕೊಲೆಯಾದವ ತಾ ಕೊಲೆಯಾದವನೆಂದರಿತರೆ
ನನ್ನಲ್ಲಿ ಹೆಜ್ಜೆಯ ಗುರುತನು, ತಿರುವನು ಮೇಣ್
ಸಂಸೂಕ್ಷ್ಮ ಪಥವನು ಅರಿಯರು ಅವರು.
ಬೆಳಕು ನೆರಳುಗಳು ಒಂದಾಗಿ; ದೇವಾಧಿದೇವತೆಗಳು ನನ್ನಲ್ಲೆ ಅಡಗಿ
ಯಶವೂ ಲಜ್ಜೆಯೂ ಭೇದವಿಲ್ಲದಾಗಿ ನನ್ನ ಸೇರಿದವರ ರೆಕ್ಕೆ ನಾನಾಗಿ
ಸಂದೇಹವೂ ಸಂದೇಹಪಡುವವನೂ ನಾನಾಗಿ ದಾರ್ಶನಿಕರ ಸಾಲಿನ
ಬ್ರಹ್ಮತತ್ವ ನಾನು.'

ಈ ತತ್ವವನ್ನು ಮೀರಿಸಿದ ಆದರ್ಶವನ್ನಾಗಲೀ, ವ್ಯಾಪಕವಾದ ಕಾಣ್ಕೆಯನ್ನಾಗಲೀ ನಾನು ಕಾಣಲಿಲ್ಲ.

ಅಹಿಂಸೆ, ಶಾಂತಿ ಮತ್ತು ಆಕ್ರಮಣಶೀಲವಲ್ಲದ ನಡವಳಿಕೆಯೇ ನಮ್ಮ ಭಾರತೀಯ ಸಂಸ್ಕೃತಿಯ ಶುದ್ಧ ಲಕ್ಷಣಗಳು. ಅವಳ ೫೦೦೦ ವರ್ಷಗಳಿಗೂ ಮೀರಿದ ಸಮೃದ್ಧ ಇತಿಹಾಸದಲ್ಲಿ ಮಹಾಬಲಿಷ್ಠವೂ ವಿಸ್ತಾರವೂ ಆದ ಸಾಮ್ರಾಜ್ಯಗಳನ್ನು ಹೊಂದಿದ್ದ ಕಾಲದಲ್ಲಿಯೂ ಸಹ ಭಾರತವು ತನ್ನ ಎಲ್ಲೆಯ ಹೊರಗಿನ ರಾಜ್ಯಗಳ ಮೇಲೆ ಸೈನ್ಯವನ್ನೆತ್ತಿ ನಡೆದು ಆಕ್ರಮಿಸಿದುದು ಇಲ್ಲ. ಇಂದಿಗೂ ಸಹ ಭಾರತೀಯ ಜನತೆ ಕಷ್ಟನಿಷ್ಠೂರಗಳನ್ನು, ಅನ್ಯಾಯಗಳನ್ನು ತಾಳ್ಮೆಯಿಂದ ಸಹಿಸಿಕೊಳ್ಳುತ್ತ ಪರದೇಶಗಳು ಉಂಟುಮಾಡುವ ವಿನಾಶಕಾರಿ ಸ್ಫೋಟಗಳಿಗೆ ಒಳಗಾಗಿ ನರಳುತ್ತಾಳೆಯೇ ಹೊರತು ತನಗೆ ಸಹಜವಾದ ಅಹಿಂಸೆಯ ಶೀಲವನ್ನು ತೊರೆಯಲಿಲ್ಲ ಎಂಬುದು ಮೆಚ್ಚಬೇಕಾದ ಸಂಗತಿ.



ಈಚೆಗೆ ಅಧ್ಯಾತ್ಮದ ಬಗ್ಗೆ ಅಜ್ಞಾನವೂ ಚೈತನ್ಯ ದಾರಿದ್ರ್ಯವೂ ಉಂಟಾಗಿದೆ. ಮಾನವರ ಸಂಸ್ಕೃತಿ ಎಂಬುದು ನಮ್ಮ ಚಿರನೂತನ ಚೈತನ್ಯದ ಒಂದು ಕ್ರಿಯೆ. ಇಂದಿನ ಜನರಿಗೆ ಹಣವು ಅಗಣಿತವಾಗಿ ಗುಣಿಸಲ್ಪಡುವುದೇ ಹೊರತು ಇನ್ನೇನನ್ನೂ ಸಾಧಿಸಲಾರದು – ಎಂಬುದರ ಅರಿವಾಗುವವರೆಗೆ, ಅವರು ತಮ್ಮ ಕಾವ್ಯಮಯ ಜೀವನವನ್ನು ನಾಶಮಾಡಿ, ಅದರ ತೋರಿಕೆಯಿಂದ ತಮ್ಮ ಆತ್ಮವನ್ನು ವಂಚಿಸಿಕೊಳ್ಳುವುದನ್ನು ನಿಲ್ಲಿಸುವವರೆಗೆ, ನಾವು ನಮ್ಮ ಜೀವನ ಮತ್ತು ಸಂಸ್ಕೃತಿಗಳು, ನಿತ್ಯನೂತನವಾದ ನಮ್ಮ ಚೇತನದ ಕ್ರಿಯೆ ಸಂಗತಿಯನ್ನು ನೆನಪಿಸುತ್ತಿರಬೇಕು. ಐಹಿಕವಾದ ಅಭಿವೃದ್ಧಿಯನ್ನು ನಮ್ಮ ಅಂತರಂಗದ ಅಭಿವೃದ್ಧಿ ಎಂದು ತಪ್ಪಾಗಿ ತಿಳಿಯಬಾರದು. ತಂತ್ರಜ್ಞಾನವು ನಮ್ಮ ಸೈನಿಕ ತಳಹದಿಯನ್ನು ಹರಿದೊಗೆದಾಗ ಅದು ಈ ಶತಮಾನದ ಸಾಧನೆಯಾಗುವುದಿಲ್ಲ. ಆದರೆ ಅದರ ಮುಕ್ತಾಯವಾಗುತ್ತದೆ. ಇದಕ್ಕೆ ನಮ್ಮ ಪ್ರಾಚೀನ ಪರಂಪರೆಯು ಪ್ರತ್ಯೌಷಧದಂತೆ ಕೆಲಸ ಮಾಡಬೇಕು. ನಮ್ಮ ಆತ್ಮಗಳು ಪರಸ್ಪರ ಪಡಿಯಚ್ಚಿನಂತಿವೆಯೆ? ನಾವೆಲ್ಲ ಒಂದೇ ಮಂದೆಯಲ್ಲಿ ಮುಕ್ತಿ ಪಡೆಯುವುದು ಸಾಧ್ಯವೆ? ಇಂತಹ ಹುಚ್ಚಿಗೆ ನಮ್ಮ ಸನಾತನ ಸಂಸ್ಕೃತಿಯು ಭೇಷಜವಾಗಲಿ.

"ಶತಮಾನಗಳು ಕಳೆದರೂ ನಮ್ಮ ಪರಂಪರೆಯ ಶಾಂತಿ ಮಂಕಾಗದೆ ಹಾಗೆಯೇ ಉಳಿದಿದೆ. ಆಕ್ರಮಣಕಾರಿಯಾದ ಸೈನ್ಯಗಳು ಈ ದೇಶದ ಮೇಲೆ ದಂಡೆತ್ತಿ ಬಂದಿವೆ. ಆದರೆ ಅದರ ಸಂಸ್ಕೃತಿಯನ್ನು ನಾಶಮಾಡಲು ಸಾಧ್ಯವಾಗಲಿಲ್ಲ. ಪರಕೀಯರ ಧಾಳಿಗೆ ಪೂರ್ವವು ತಲೆಬಾಗಿ ವಿಷಾದಮಯ ಸಹಿಷ್ಣುತೆಯೂ ಉಳಿದುಕೊಂಡಿತು. ಸೈನ್ಯಗಳೆಷ್ಟೋ ಗುಡುಗುತ್ತ ಅವಳಿಗೆದುರಾಗಿ ಬಂದು ಹೋದವು. ಅವಳಾದರೋ ಆಳವಾದ ಚಿಂತನೆಯಲ್ಲಿ ಮುಳುಗಿದಳು."

ಸಿ. ರಾಜಗೋಪಾಲಾಚಾರಿಯವರ ಅಭಿಪ್ರಾಯದಂತೆ;

"ಇಂದು ಭಾರತದಲ್ಲಿ ಪ್ರಾಮಾಣಿಕತೆ ಎನ್ನುವುದು ಉಳಿದಿದ್ದರೆ, ಅತಿಥಿ ಸತ್ಕಾರವೂ ಪವಿತ್ರತೆಯೂ, ಮಾನವ ಪ್ರೇಮವೂ, ಮೂಕ ಪ್ರಾಣಿಗಳನ್ನು ಕುರಿತ ಸಾಧು ಸಜ್ಜನಿಕೆಯೂ, ಕೇಡನ್ನು ಕುರಿತ ದ್ವೇಷವೂ, ಸತ್ಕಾರ್ಯಗಳನ್ನು ಮಾಡಬೇಕೆಂಬ ಪ್ರೀತಿಯೂ ಉಳಿದಿದ್ದರೆ ಅದಕ್ಕೆ ಇನ್ನೂ ಉಳಿದಿರುವ ನಮ್ಮ ಪ್ರಾಚೀನ ಧರ್ಮಗಳಲ್ಲಿನ ನಂಬಿಕೆ ಮತ್ತು ಸಂಸ್ಕೃತಿಯೇ ಕಾರಣ."

ನಮ್ಮ ಹಿಂದಿನ ಧಾರ್ಮಿಕ ಶ್ರದ್ಧೆ ಮತ್ತು ಪ್ರಾಚೀನ ಸಂಸ್ಕೃತಿಗಳನ್ನು ಕುರಿತು ರಾಜಾಜಿಯವರು ಹೇಳಿದ ಮಾತು ಬರಿಯ ಹಿಂದೂಗಳಿಗೂ ಭಾರತೀಯರಿಗೂ ಮಾತ್ರವಲ್ಲ ಪ್ರಪಂಚಕ್ಕೆಲ್ಲ ಅನ್ವಯಿಸುತ್ತದೆ. ಸ್ಕೆಲ್ಲಿಂಗನು ತನ್ನ ಅಪರ ವಯಸ್ಸಿನಲ್ಲಿ ಉಪನಿಷತ್ತುಗಳನ್ನು ಕುರಿತು ವಿಚಾರಮಾಡುತ್ತ: "ಇದು ಮನುಕುಲದ ಅತ್ಯಂತ ಪರಿಪಕ್ವ ವಿವೇಕ" ಎಂದಿದ್ದಾನೆ.

ಈ ದಿನ ಈ ವಿವೇಕವು ನಮ್ಮ ಭಾರತೀಯ ಜನಾಂಗಕ್ಕೆ ಅವರ ಪುನರ್ಜನ್ಮಕ್ಕೆ ಕಾರಣವಾಗಬೇಕಾದ್ದು ಮಾತ್ರವಲ್ಲ; ಮಾನವಕುಲಕ್ಕೇ ಅದು ಪುನರ್ಶಿಕ್ಷಣವನ್ನು ಕೊಡಲಿ.

* * * *